# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ 20.06.2012 ರಂದು ನಡೆದ ಸಭೆಯ ನಡವಳಿಗಳು

| ಹಾಜರಿದ್ದ ಸದಸ್ಯರುಗಳು | ಹಾಜರಿದ್ದ ಅಧಿಕಾರಿಗಳು |
|---|---|
| **ಶ್ರೀಯುತರುಗಳಾದ :** | |
| ಮುನೀಂದ್ರಕುಮಾರ್.ಕೆ.ಎ – ಅಧ್ಯಕ್ಷರು | **ಅಧಿಕ ಕೌನ್ಸಿಲ್ ಕಾರ್ಯದರ್ಶಿ,** |
| ತೇಜಸ್ವಿನಿ ಎನ್.ರಾಜು – ಸದಸ್ಯರು | **ಉಪ ಆಯುಕ್ತರು** (ಭೂಸ್ವಾಧೀನ), |
| ಸುರೇಶ್. ಹೆಚ್ – ಸದಸ್ಯರು | **ಸಹಾಯಕ ಆಯುಕ್ತರು** (ಆಸ್ತಿಗಳು), |
| ಮುನಿಸ್ವಾಮಿಗೌಡ – ಸದಸ್ಯರು | **ಅಧೀಕ್ಷಕ ಅಭಿಯಂತರರು** (ರ.ಮೂ.ಸೌ) |
| ಆನಂದ್. ವಿ – ಸದಸ್ಯರು | **ಕಾರ್ಯಪಾಲಕ ಅಭಿಯಂತರರು** (ರ.ಮೂ.ಸೌ–ಮಹದೇವಪುರ) |
| ಕೆ. ಉಮೇಶ್‌ಶೆಟ್ಟಿ – ಸದಸ್ಯರು | (ರ.ಮೂ.ಸೌ–ಬೊಮ್ಮನಹಳ್ಳಿ) (ಯೋಜನೆ–ಪಶ್ಚಿಮ), |
| ಕೆ. ಪೂರ್ಣಿಮ – ಸದಸ್ಯರು | **ಸಹಾಯ ಕಂದಾಯ ಅಧಿಕಾರಿ** (ಪೂರ್ವ–ಮಾರುಕಟ್ಟೆ), (ವಸಂತನಗರ) |
| ಗಂಗಾಂಬಿಕೆ – ಸದಸ್ಯರು | **ಸಹಾಯಕ ಕಾರ್ಯಪಾಲಕ ಅಭಿಯಂತರರು** (ಯೋಜನೆ–ಪಶ್ಚಿಮ), |
| ಕ್ವೀನ್‌ಎಲಿಜೆಬೆತ್ – ಸದಸ್ಯರು | --- |
| ನೂರ್ ಜಹಾನ್ – ಸದಸ್ಯರು | --- |
| ಟಿ.ಎ. ಗಾಯಿತ್ರಿ – ಸದಸ್ಯರು | --- |

*(ಹಿಂದಿನ ಸಭೆಯ ನಡವಳಿಗಳನ್ನು ಓದಿ ದಾಖಲು ಮಾಡಿಕೊಳ್ಳಲಾಯಿತು)*

## *01]. ವಿಷಯದ ಸಂಖ್ಯೆ :–ತೆಆಸ್ಥಾಸ/562/2011–12*

ಆಯುಕ್ತರ ಟಿಪ್ಪಣಿ ಸಂಖ್ಯೆ : ಎ3(2)/ಪಿಆರ್/89/2000–01, ದಿನಾಂಕ : 28–02–2012 ರಲ್ಲಿ ವಿವರಿಸಿರುವಂತೆ ವಾರ್ಡ್ ಸಂಖ್ಯೆ:93, ವಸಂತನಗರ ಮಿಲ್ಲರ್ ಕೆರೆ ಅಂಗಳದಲ್ಲಿ 100X50 ಅಡಿಗಳ ನಿವೇಶನದಲ್ಲಿರುವ 80X40 ಅಡಿಗಳ ಗೋಡೌನ್ ಕಟ್ಟಡವನ್ನು ಕರ್ನಾಟಕ ಚರ್ಮ ಕೈಗಾರಿಕ ಅಭಿವೃದ್ಧಿ ನಿಗಮ ನಿಯಮಿತ ರವರಿಗೆ ಮಾಸಿಕ ಬಾಡಿಗೆ ರೂ.925/– ನಂತೆ ದಿನಾಂಕ:09–06–1980 ರಿಂದ 11 ತಿಂಗಳ ಅವಧಿಗೆ ಗುತ್ತಿಗೆ ನೀಡಲಾಗಿರುತ್ತದೆ. ತದನಂತರ ದಿನಾಂಕ:01–05–1981 ರಿಂದ 31–07–1999 ರವರೆಗೆ 219 ತಿಂಗಳ ಅವಧಿಗೆ ಅಂದಿನ ಮಾರುಕಟ್ಟೆ ದರದಂತೆ ಮಾಸಿಕ ಗುತ್ತಿಗೆ ರೂ.99,454.50/–ಗಳು ನಿಗದಿಪಡಿಸಿ ದಿನಾಂಕ:14–07–2003 ರಂದು ನಡೆದ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಸಭೆಯಲ್ಲಿ ತೀರ್ಮಾನಿಸಲಾಗಿತ್ತು. ನಿಗದಿಪಡಿಸಿರುವ ಗುತ್ತಿಗೆ ಮೊತ್ತವನ್ನು ಪಾವತಿಸಿದೇ ಸಂಸ್ಥೆಯು ನಷ್ಟದಲ್ಲಿರುವುದಾಗಿ ನಿಗದಿಪಡಿಸಿರುವ ಮೊತ್ತವನ್ನು ಪಾವತಿಸಲು ಶಕ್ತನಾಗಿಲ್ಲವೆಂದು ಗುತ್ತಿಗೆ ಮೊತ್ತವನ್ನು ಈ ತಹಲ್‌ವರೆವಿಗೂ ಪಾವತಿಸಿರುವುದಿಲ್ಲ.

ಈ ಮಧ್ಯ ಅಧ್ಯಕ್ಷ ಡಾ॥ ಜಗಜೀವನ್ ರಾಮ್ ಚರ್ಮ ಕೈಗಾರಿಕೆ ಅಭಿವೃದ್ಧಿ ನಿಗಮ ನಿಯಮಿತ ರವರು ದಿನಾಂಕ:24–01–2012 ರಂದು ಮಾನ್ಯ ಆಯುಕ್ತರಿಗೆ ಮನವಿ ಸಲ್ಲಿಸಿ 99 ವರ್ಷಗಳ ಧೀರ್ಘಾವದಿ ಗುತ್ತಿಗೆ ಅಥವಾ ಮಾರುಕಟ್ಟೆ ಬೆಲೆಗೆ ಕ್ರಯಕ್ಕೆ ನೀಡುವಂತೆ ಕೋರಿದ್ದು, ದಿ:25–01–2012 ರಂದು ಆಸ್ತಿ ಶಾಖೆಯಿಂದ ಅಂತರಿಕ ಕಛೇರಿ ಟಿಪ್ಪಣಿ ನೀಡಲಾಗಿದ್ದು. ಸಹ ಕಂದಾಯ ಅಧಿಕಾರಿ(ವಸಂತನಗರ) ರವರು ವರದಿ ಮಾಡಿರುವಂತೆ 100X50 ಅಡಿಗಳ ನಿವೇಶನದಲ್ಲಿ 80X40 ಅಡಿ ಅಳತೆ ಗೋಡೌನ್ ಕಟ್ಟಡ ಹಾಗೂ ಈ ನಿವೇಶನಕ್ಕೆ ಹೊಂದಿಕೊಂಡಂತೆ ಹೆಚ್ಚುವರಿಯಾಗಿ 2 ಭದ್ರತಾ ಕೊಠಡಿ ಶೆಡ್‌ಗಳು ಇದ್ದು, ವಿಸ್ತೀರ್ಣ 25X30 ಚದರ ಅಡಿಗಳಾಗಿದ್ದು, ಒಟ್ಟಾರೆ 5750 ಚದರ ಅಡಿ ಆಗಿರುತ್ತದೆಂದು ಸದರಿ ಜಾಗವನ್ನು ಗುತ್ತಿಗೆ ಅಥವಾ ಕ್ರಯಕ್ಕೆ ಮಾರುಕಟ್ಟೆ ಬೆಲೆಗೆ ನೀಡುವ ಬಗ್ಗೆ ಸೂಕ್ತ ತೀರ್ಮಾನ ಕೋರಿ ಆಸ್ತಿ ಶಾಖೆಗೆ ಕಡತ ಮಂಡಿಸಿರುತ್ತಾರೆ.

ಪ್ರಸಕ್ತ ಮಾರುಕಟ್ಟೆ ದರ ಚದರ ಅಡಿ 1ಕ್ಕೆ ರೂ.4,500/– ವಾಣಿಜ್ಯಕ್ಕೆ ಶೇ.40% ರಷ್ಟು ಸೇರಿಸಿದಾಗ ಚದರ ಅಡಿ 1ಕ್ಕೆ ರೂ. 6,300/–ಗಳು 5750 ಚದರ ಅಡಿಗಳಿಗೆ (5750X6300=3,62,25,000/–) 3,62,25,000/– ರೂಗಳಾಗುತ್ತದೆ. ಸ್ವತ್ತಿನ ಮೌಲ್ಯದ ಶೇ 10% ರಂತೆ ಪರಿಗಣಿಸಿದಲ್ಲಿ ವಾರ್ಷಿಕ ಗುತ್ತಿಗೆ ಮೊತ್ತ ರೂ. 36,22,500/–ರೂಗಳು ಮಾಸಿಕ ರೂ. 3,01,875/– ಗಳಾಗುತ್ತದೆ.

ಇದು ರಾಜ್ಯ ಸರ್ಕಾರದ ಸಂಸ್ಥೆಯಾಗಿದ್ದು, ಪರಿಶಿಷ್ಠ ಜಾತಿ ಮತ್ತು ಪರಿಶಿಷ್ಠ ಪಂಗಡ ಜನಾಂಗದವರ ಏಳಿಗೆಗಾಗಿ ನಡೆಸಲಾಗುತ್ತಿರುವ ಸಂಸ್ಥೆಯಾಗಿದ್ದು. ಇದಕ್ಕೆ ಮಾಸಿಕ ಗುತ್ತಿಗೆ ರೂ.99,454.50/– ಪೈಸೆ ನಿಗದಿಪಡಿಸಿರುವುದು ಅವೈಜ್ಞಾನಿಕವಾಗಿರುತ್ತದೆ. ಇಂತಹ ಸಂಸ್ಥೆಗಳಿಗೆ ರಿಯಾಯಿತಿ ದರದಲ್ಲಿ ಗುತ್ತಿಗೆ ನಿಗದಿಪಡಿಸುವ ಅವಕಾಶ ಇರುವ ಹಿನ್ನೆಲೆಯಲ್ಲಿ ಗುತ್ತಿಗೆ ಅವಧಿ

ಮುಗಿದ ದಿನಾಂಕದಿಂದ ಕರಾರು ಪತ್ರ ನೊಂದಾಯಿಸುವ ಹಿಂದಿನ ದಿನಾಂಕದವರೆಗೆ ಮತ್ತು ಕರಾರು ಪತ್ರ ನೊಂದಾಯಿಸುವ ದಿನಾಂಕದಿಂದ ಮುಂದಿನ 30 ವರ್ಷಗಳ ಅವಧಿಗೆ ಪ್ರತ್ಯೇಕ ಪ್ರತ್ಯೇಕವಾಗಿ ದರ ನಿಗದಿಪಡಿಸಿ ಗುತ್ತಿಗೆ ನವೀಕರಿಸಲು ಸ್ಥಾಯಿ ಸಮಿತಿಗಳು ಪಾಲಿಕೆ ಸಭೆ ಮುಖಾಂತರ ಸರ್ಕಾರಕ್ಕೆ ಪ್ರಸ್ತಾಪಿಸಬಹುದಾಗಿದ್ದು, ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ಟಿಪ್ಪಣಿ ಮೇರೆಗೆ, ಮಾನ್ಯ ಆಯುಕ್ತರ ದಿನಾಂಕ: 28–02–2012ರ ಟಿಪ್ಪಣಿಯನ್ನು ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ : 06–03–2012ರ ನಿರ್ಣಯ.

ನಿರ್ಣಯ : ಪಾಲಿಕೆಯ ಆರ್ಥಿಕ ಹಿತದೃಷ್ಟಿಯಿಂದ ಕರ್ನಾಟಕ ಚರ್ಮ ಕೈಗಾರಿಕಾ ಅಭಿವೃದ್ಧಿ ನಿಗಮ ನಿಯಮಿತ ರವರು ಹಿಂದಿನಿಂದ ಗುತ್ತಿಗೆ ಮೊತ್ತವನ್ನು ಪಾವತಿಸದೇ ಉಳಿಸಿಕೊಂಡಿರುವ ಮೊತ್ತವನ್ನು ಸದರಿ ಸಂಸ್ಥೆಯಿಂದ ಪಾವತಿಸಿಕೊಳ್ಳುವ ಅಥವಾ ಸರ್ಕಾರದ ಇತರೇ ಇಲಾಖೆಗಳಿಗೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಿಂದ ಪಾವತಿಸುವಂತಹ ಮೊತ್ತಗಳಲ್ಲಿ ಹೊಂದಾಣಿಕೆ ಮಾಡಿಕೊಳ್ಳುವ ಷರತ್ತಿಗೊಳಪಟ್ಟು ಪ್ರಸ್ತಾವನೆಯನ್ನು ಸರ್ಕಾರದ ಮುಂದಿಟ್ಟು ಒಪ್ಪಿಗೆ ದೊರೆತ ನಂತರ ಕರ್ನಾಟಕ ಚರ್ಮ ಕೈಗಾರಿಕಾ ಅಭಿವೃದ್ಧಿ ನಿಗಮ ನಿಯಮಿತ ರವರಿಗೆ ಮಾಸಿಕ ರೂ.3,01,875/– ಗುತ್ತಿಗೆ ಮೊತ್ತವನ್ನು ನಿಗಧಿಪಡಿಸಿ ಗುತ್ತಿಗೆಗೆ ನೀಡುವ ಮಾರ್ಪಾಡಿನೊಂದಿಗೆ ದಿನಾಂಕ : 06–03–2012ರ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ನಿರ್ಣಯವನ್ನು ಒಪ್ಪಲಾಯಿತು.

## *02]. ವಿಷಯದ ಸಂಖ್ಯೆ :–ತೆಆಸ್ಥಾಸ/47/2012–13*

ಆಯುಕ್ತರ ಟಿಪ್ಪಣಿ ಸಂಖ್ಯೆ : ಮುಲೆಅ/ಆಯವ್ಯಯ/ಪಿಆರ್/1088/2012–13, ದಿನಾಂಕ : 11.05.2012 ರಲ್ಲಿ ವಿವರಿಸಿರುವಂತೆ, ಕರ್ನಾಟಕ ಮುನಿಸಿಪಲ್ ಕಾರ್ಪೋರೇಷನ್ ಕಾಯಿದೆ 1976 ಸೆಕ್ಷನ್ 166ರ ಪ್ರಕಾರ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಆದಾಯ ಮತ್ತು ವೆಚ್ಚಗಳ ಮಾಹಿತಿಗಳನ್ನು ಒಳಗೊಂಡಿರುವ ಆಯವ್ಯಯ ಅಂದಾಜುಗಳನ್ನು ತಯಾರಿಸಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಅನುಮೋದನೆಗಾಗಿ ಮಂಡಿಸಬೇಕಾಗಿರುತ್ತದೆ.

ಅದರಂತೆ, ಪಾಲಿಕೆಯ ಎಲ್ಲಾ ವಲಯಗಳ ಇಲಾಖೆಗಳಿಂದ ಸ್ವೀಕೃತಿ ಮತ್ತು ವೆಚ್ಚಗಳ ಬಗ್ಗೆ ಮಾಹಿಗಳನ್ನು ಪಡೆದು ಕ್ರೋಢೀಕರಿಸಿ, ಇಲಾಖೆಗಳ ಮುಖ್ಯಸ್ಥರೊಂದಿಗೆ ವಿಶೇಷ ಆಯುಕ್ತರು (ಯೋಜನೆ) ರವರ ಅಧ್ಯಕ್ಷತೆಯಲ್ಲಿ ಚರ್ಚಿಸಿ, 2012–13ನೇ ಸಾಲಿನ ಕರಡು ಆಯವ್ಯಯ ಅಂದಾಜು ಪಟ್ಟಿಯನ್ನು ಅಂತಿಮಗೊಳಿಸಿ ತಯಾರಿಸಲಾಗಿದೆ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ 2010–11ನೇ ಸಾಲಿನ ಲೆಕ್ಕಗಳು, 2011–12ನೇ ಸಾಲಿನ ಪರಿಷ್ಕೃತ ಆಯವ್ಯಯ ಅಂದಾಜು ಮತ್ತು 2012–13ನೇ ಸಾಲಿನ ಸ್ವೀಕೃತಿ ಮತ್ತು ವೆಚ್ಚಗಳ ಕರಡು ಆಯವ್ಯಯ ಅಂದಾಜುಗಳನ್ನು ಪಾಲಿಕೆಯು ಕಡ್ಡಾಯ ಮತ್ತು ಅವಶ್ಯಕವಾಗಿ ಭರಿಸಬೇಕಾದ ವೆಚ್ಚಗಳು, ಬಾಕಿ ಬಿಲ್ಲುಗಳ ವೆಚ್ಚ, ಮುಂದುವರೆದ ಕಾಮಗಾರಿಗಳ ವೆಚ್ಚ ಹಾಗೂ ಅಧಿಕಾರಿ/ಸಿಬ್ಬಂಧಿ ವೇತನ ಭತ್ಯೆಗಳೊಂದಿಗೆ (APPENDIX ‘B’) ತಯಾರಿಸಲಾಗಿದ್ದು, ಸಂಕ್ಷಿಪ್ತ ಮಾಹಿತಿ ಕೆಳಕಂಡಂತಿದೆ.

**(ರೂ. ಕೋಟಿಗಳಲ್ಲಿ)**

| ಕ್ರ.ಸಂ | ವಿವರಗಳು | 2010–11ರ ವಾಸ್ತವಿಕ ಲೆಕ್ಕಗಳು | 2011–12ರ ಪರಿಷ್ಕೃತ ಆಯವ್ಯಯ ಅಂದಾಜುಗಳು | 2012–13ರ ಆಯವ್ಯಯ ಅಂದಾಜುಗಳು |
|---|---|---|---|---|
| 01 | ಪ್ರಾರಂಭಿಕ ಶಿಲ್ಕು | 380.80 | 86.89 | 246.12 |
| 02 | ಸ್ವೀಕೃತಿಗಳು | 3319.77 | 3922.63 | 6629.41 |
| **ಒಟ್ಟು** | | **3700.57** | **4009.51** | **6875.53** |
| 03 | ವೆಚ್ಚಗಳು | 3626.18 | 3763.39 | 6842.05 |
| 04 | ಅಖೈರು ಶಿಲ್ಕು | 86.89 | 246.12 | 33.48 |

ಈ ಕೆಳಕಂಡ ಪ್ರಮುಖ ಅಂಶಗಳನ್ನು ಸಮಿತಿಯ ಅವಗಾಹನೆಗಾಗಿ ತರಲಾಗಿದೆ:

1. 2012–13ನೇ ಸಾಲಿನ ಆಯವ್ಯಯದಲ್ಲಿ ಹೊಸ ಕಾಮಗಾರಿಗಳಾಗಿ ಅಳವಡಿಸಿಕೊಂಡು ಅನುದಾನವನ್ನು ಕಲ್ಪಿಸುವಂತೆ ಕೋರಿ ಮಾನ್ಯ ಸಚಿವರು, ಶಾಸಕರು ಹಾಗೂ ಪಾಲಿಕೆ ಸದಸ್ಯರುಗಳು ಸಲ್ಲಿಸಿರುವ ರೂ.370.92 ಕೋಟಿ ಹಾಗೂ ಪಾಲಿಕೆಯ ಇಲಾಖಾ ಮುಖ್ಯಸ್ಥರುಗಳು ಹೊಸ ಕಾಮಗಾರಿಗಳಿಗಾಗಿ ಸಲ್ಲಿಸಿರುವ ರೂ.1439.69 ಕೋಟಿ ಒಟ್ಟಾರೆ ರೂ.1810.61 ಕೋಟಿಗಳಿಗೆ ಪ್ರಸ್ತಾವನೆಗಳನ್ನು ಸ್ವಿಕರಿಸಲಾಗಿದೆ. ಪಾಲಿಕೆಯ ಸ್ವಿಕೃತಿಗೆ ಅನುಗುಣವಾಗಿ ಆಯವ್ಯಯ ತಯಾರಿಸಿದ್ದು, ಸದರಿ ಮೊತ್ತವನ್ನು ಸೇರಿಸಿಕೊಂಡಲ್ಲಿ, ಆಯವ್ಯಯದಲ್ಲಿ ಕೊರತೆ ಉಂಟಾಗುವ ಪ್ರಯುಕ್ತ ಸದರಿ ಪ್ರಸ್ತಾವನೆಗಳ ಪಟ್ಟಿಗಳನ್ನು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದಿನ ಕ್ರಮಕ್ಕಾಗಿ ಲಗತ್ತಿಸಲಾಗಿದೆ.
2. ಕರ್ನಾಟಕ ರಾಜ್ಯ ಸರ್ಕಾರವು 2012–13ನೇ ಸಾಲಿನ ಆಯವ್ಯಯದಲ್ಲಿ ಘೋಷಣೆ ಮಾಡಿರುವಂತೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ವಿಶೇಷ ಅಭಿವೃದ್ಧಿ ಅನುದಾನವಾಗಿ ರೂ.1676.00 ಕೋಟಿಗಳ ಅನುದಾನವನ್ನು ಘೋಷಿಸಿದ್ದು, ಪಾಲಿಕೆಯ ಕರಡು ಆಯವ್ಯಯದಲ್ಲಿ ಅವಕಾಶ ಕಲ್ಪಿಸಲಾಗಿದೆ. ಸರ್ಕಾರದ ಸೂಚನೆಯಂತೆ ಸದರಿ ಅನುದಾನಕ್ಕೆ ಎದುರಾಗಿ ಕಾಮಗಾರಿಗಳ ಪಟ್ಟಿಯನ್ನು ಈಗಾಗಲೇ ಸರ್ಕಾರಕ್ಕೆ ಸಲ್ಲಿಸಲಾಗಿದೆ. ಸಮಿತಿಯ ಮಾಹಿತಿಗಾಗಿ ಪಟ್ಟಿಯನ್ನು ಲಗತ್ತಿಸಿದೆ.
3. 2012–13ನೇ ಸಾಲಿನ ತಯಾರಿಸಿರುವ ಕರಡು ಆಯವ್ಯಯಕ್ಕೆ ಸಂಬಂದಿಸಿದಂತೆ ಈ ಕೆಳಕಂಡ ದಾಖಲಾತಿಗಳು ಈ ಟಿಪ್ಪಣಿಯೊಂದಿಗೆ ಲಗತ್ತಿಸಿದೆ.
   A. ಸ್ವಿಕೃತಿಗಳ ಗೋಷ್ವಾರೆ
   B. ವೆಚ್ಚಗಳ ಗೋಷ್ವಾರೆ
   C. 2012–13ನೇ ಸಾಲಿನ ಕರಡು ಆಯವ್ಯಯ ಅಂದಾಜು
   D. ಅಪೆಂಡಿಕ್ಸ್ 'ಬಿ'
   E. ಜನಪ್ರತಿನಿಧಿಗಳು ಆಯವ್ಯಯದಲ್ಲಿ ಶೇರ್ಪಡೆಗೆ ಸಲ್ಲಿಸಿರುವ ಪ್ರಸ್ತಾವನೆಗಳ ಪಟ್ಟಿ
   F. ಇಆಲಾಖಾ ಮುಖ್ಯಸ್ಥರುಗಳು ಸಲ್ಲಿಸಿರುವ ಹೊಸ ಕಾಮಗಾರಿಗಳ ಪಟ್ಟಿ
   G. ಕರ್ನಾಟಕ ಸಕಾರವು ಘೋಷಿಸಿರುವ ರೂ.1676.00 ಕೋಟಿಗಳ ಅನುದಾನಕ್ಕೆ ಸರ್ಕಾರಕ್ಕೆ ಸಲ್ಲಿಸಿರುವ ಕಾಮಗಾರಿಗಳ ಪಟ್ಟಿ

ಮೇಲ್ಕಂಡಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ 2012–13ನೇ ಸಾಲಿನ ಕರಡು ಆಯವ್ಯಯ ಪಟ್ಟಿಯೊಂದಿಗೆ ದಾಖಲಾತಿಗಳನ್ನು ಈ ಟಿಪ್ಪಣಿಯೊಂದಿಗೆ ಲಗತ್ತಿಸಿ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ಟಿಪ್ಪಣಿ.

***ನಿರ್ಣಯ :*** ಮಾನ್ಯ ಆಯುಕ್ತರವರು ದಿನಾಂಕ 11–05–2012ರ ಟಿಪ್ಪಣಿಯೊಂದಿಗೆ ಕರ್ನಾಟಕ ಮುನಿಸಿಪಲ್ ಕಾಯಿದೆ 1976ರ ಸೆಕ್ಷನ್ 166ರ ಪ್ರಕಾರ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ 2010–11ನೇ ಸಾಲಿನ ಲೆಕ್ಕಗಳು, 2011–12ನೇ ಸಾಲಿನ ಪರಿಷ್ಕೃತ ಆಯವ್ಯಯ ಅಂದಾಜು ಮತ್ತು 2012–13ನೇ ಸಾಲಿನ ಸ್ವೀಕೃತಿ ಮತ್ತು ವೆಚ್ಚಗಳ ಆಯವ್ಯಯ ಅಂದಾಜುಗಳ ಕರಡು ಪ್ರತಿಯನ್ನು ನಿಯಮಾವಳಿಗಳ ಅನ್ವಯ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಅನುಮೋದನೆಗೆ ಮಂಡಿಸಿದ್ದು; ಸದರಿ ಕರಡು ಆಯವ್ಯಯದ ಬಗ್ಗೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಂಬಂಧಪಟ್ಟ ಎಲ್ಲಾ ಇಲಾಖಾ ಮುಖ್ಯಸ್ಥರುಗಳೊಂದಿಗೆ ಸಮಿತಿಯು ಪ್ರತ್ಯೇಕ ಸಭೆಗಳನ್ನು ವಿವಿಧ ದಿನಾಂಕಗಳಂದು ನಡೆಸಿ, ಕೂಲಂಕುಶವಾಗಿ ಚರ್ಚಿಸಲಾಯಿತು. ಅಲ್ಲದೇ ಪೂಜ್ಯ ಮಹಾಪೌರರು, ಮಾನ್ಯ ಉಪ ಮಹಾಪೌರರು, ಎಲ್ಲಾ ಪಕ್ಷಗಳ ನಾಯಕರುಗಳು ಮಾನ್ಯ ಆಯುಕ್ತರು ಹಾಗೂ ಸರ್ಕಾರೇತರ ಸಂಸ್ಥೆ (NGO's) ಗಳೊಂದಿಗೆ ಸಹ ಸಭೆಗಳನ್ನು ನಡೆಸಿ ವಿವರವಾಗಿ ಚರ್ಚಿಸಿದ ತರವಾಯ, ಸಮಿತಿಯು ಕರಡು ಪ್ರತಿಯಲ್ಲಿ ಅಗತ್ಯ ತಿದ್ದುಪಡಿಗಳನ್ನು ಮಾಡಿ ಅನುಮೋದಿಸಿದೆ. ಅದರಂತೆ ಮಹಾನಗರ ಪಾಲಿಕೆಯ ಸಭೆಯ ಮುಂದೆ ಪರಿಶೀಲನೆಗೆ ಹಾಗೂ ಅನುಮೋದನೆಗಾಗಿ ಮಂಡಿಸುವುದೆಂದು ಸಮಿತಿಯು ತೀರ್ಮಾನಿಸಿತು.

## *03]. ವಿಷಯದ ಸಂಖ್ಯೆ :-ತೆಆಸ್ಥಾಸ/48/2012-13*

ಅಪರ ಆಯುಕ್ತರು (ಯೋಜನೆ) ರವರ ಟಿಪ್ಪಣಿ ಸಂಖ್ಯೆ : ಅಆ(ಕ)ಪಿಎಸ್‌ಆರ್(4)224/11-12, ದಿನಾಂಕ : 14.05.2012 ನಿರ್ದೇಶಕರು, ಆಶಾ-ಅಕಾಡೆಮಿ ಫಾರ್ ಸಿವಿಯರ್ ಹ್ಯಾಂಡಿಕ್ಯಾಪ್ಸ್ ಅಂಡ್ ಆಟಿಸಮ್ ರವರು ಮನವಿ ಮತ್ತು ದಾಖಲೆಗಳನ್ನು ಸಲ್ಲಿಸಿ, ತಮ್ಮ ಸಂಸ್ಥೆ ವತಿಯಿಂದ ಬುದ್ದಿ ಮಾಂದ್ಯ ಮಕ್ಕಳ ಪೋಷಣೆಯನ್ನು ಮಾಡುತ್ತಿದ್ದು, ಸಂಸ್ಥೆಯ ಅಭಿವೃದ್ಧಿಗಾಗಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವತಿಯಿಂದ ಅನುದಾನವನ್ನು ಮಂಜೂರು ಮಾಡಿರುವುದಕ್ಕೆ ಧನ್ಯವಾದಗಳನ್ನು ಸಲ್ಲಿಸಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ 2011-12 ನೇ ಸಾಲಿನ ಆಯವ್ಯಯದಲ್ಲಿ "ಆಶಾ-ಬುದ್ಧಿ ಮಾಂದ್ಯ ಶಾಲೆ, ಶಂಕರ ಮಠ ವಾರ್ಡ್, ಬೆಂಗಳೂರು" ಆದ ನಮ್ಮ ಸಂಸ್ಥೆಗೆ ಆಯವ್ಯಯದ ಅಂದಾಜು ಪಟ್ಟಿಯಲ್ಲಿ ಅನುಬಂಧ-2 ರಲ್ಲಿ ಸಂಘ ಸಂಸ್ಥೆಗಳಿಗೆ ಅನುದಾನ ನಿಗಧಿಪಡಿಸಿರುವ ಪಟ್ಟಿಯ ಕ್ರಮ ಸಂಖ್ಯೆ: 121 ರಲ್ಲಿ ರೂ. 3.00 ಲಕ್ಷಗಳ ಅನುದಾನವನ್ನು ಮಂಜೂರು ಮಾಡಲಾಗಿರುತ್ತದೆ. ಪಾಲಿಕೆ ವತಿಯಿಂದ ಮಂಜೂರು ಮಾಡಿರುವ ಅನುದಾನ ರೂ. 3.00 ಲಕ್ಷಗಳನ್ನು ಬಿಡುಗಡೆ ಮಾಡಲು ಸಂಬಂಧಪಟ್ಟವರಿಗೆ ಆದೇಶಿಸಬೇಕಾಗಿ ಕೋರಿರುತಾರೆ.

ಪಾಲಿಕೆಯಲ್ಲಿ ಕೊಡುಗೆ ಮತ್ತು ಸಹಾಯಾನುದಾನ ಮಂಜೂರು ಮಾಡಲು ಅಳವಡಿಸಿಕೊಂಡಿರುವ ಮಾರ್ಗ ಸೂಚಿಗಳನ್ವಯ ಅಗತ್ಯ ದಾಖಲೆಗಳನ್ನು ಪಡೆದು ಸಂಘ-ಸಂಸ್ಥೆಗಳು ನಡೆಸುವ ಕ್ರೀಡೆಗಳಿಗೆ ಗರಿಷ್ಠ ರೂ. 10 ಸಾವಿರ, ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ರೂ. 5 ಸಾವಿರಗಳಿಂದ ರೂ. 10 ಸಾವಿರ, ವೃದ್ದಾಶ್ರಮ, ಅನಾಥಾಶ್ರಮ ಇತ್ಯಾದಿಗಳಿಗೆ ರೂ. 10 ಸಾವಿರಗಳಿಂದ ರೂ. 25 ಸಾವಿರ, ಅಧ್ಯಯನ ಪೀಠಗಳಿಗೆ ರೂ. 25 ಸಾವಿರಗಳಿಂದ 50 ಸಾವಿರ ರೂಪಾಯಿಗಳ ಅನುದಾನಕ್ಕೆ ಸೀಮಿತಗೊಳಿಸುವ ನಿರ್ದೇಶನಗಳಿರುತ್ತವೆ.

2011-12 ನೇ ಸಾಲಿನ ಆಯವ್ಯಯದ ಕೊಡುಗೆ ಮತ್ತು ಸಹಾಯಧನ ಲೆಕ್ಕಶೀರ್ಷಿಕೆಯಡಿ ಮೀಸಲಿರಿಸಲಾಗಿರುವ ರೂ. 1,275.00 ಲಕ್ಷಗಳ ಪೈಕಿ, ದಿನಾಂಕ 03-09-2011 ರಂದು ಪಾಲಿಕೆಯ ಆಯವ್ಯಯ ಸಭೆಯಲ್ಲಿ ತೀರ್ಮಾನವಾದ ನಿರ್ಣಯದ ವಿಷಯದ ಸಂಖ್ಯೆ 165/2011-12ರಂತೆ 185 ಸಂಘ/ಸಂಸ್ಥೆಗಳಿಗೆರೂ. 1,158.50 ಲಕ್ಷಗಳನ್ನು ಅನುದಾನವನ್ನಾಗಿ ನಿಗಧಿಪಡಿಸಿ ಅನುಮೋದನೆ ನೀಡಲಾಗಿರುತ್ತದೆ. ಈ ಪೈಕಿ **ಕ್ರ.ಸಂ. (121) ರಲ್ಲಿ "ಆಶಾ-ಬುದ್ದಿ ಮಾಂದ್ಯ ಶಾಲೆ, ಶಂಕರ ಮಠ ವಾರ್ಡ್ ಬೆಂಗಳೂರು"** ರವರಿಗೆ **ರೂ.3.00 ಲಕ್ಷಗಳ** ಅನುದಾನವನ್ನು ನಿಗಧಿಪಡಿಸಲಾಗಿರುತ್ತದೆ.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, ಸದ್ಯದ ಪಾಲಿಕೆಯ ಆರ್ಥಿಕ ಸ್ಥಿತಿ ಸುಸ್ಥಿತಿಯಲ್ಲಿಲ್ಲದೆ ಇರುವುದರಿಂದ ಪ್ರಸ್ತಾವಿತ ಸಂಸ್ಥೆಯ ಮನವಿಯ ಸಂಬಂಧ ಸೂಕ್ತ ನಿರ್ಣಯಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಟಿಪ್ಪಣಿ.

***ನಿರ್ಣಯ :-*** ಅಪರ ಆಯುಕ್ತರು (ಯೋ) ಇವರ ದಿನಾಂಕ : 14.05.2012ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವ ಸಂಸ್ಥೆಯು ಬುದ್ದಿ ಮಾಂದ್ಯ ಮಕ್ಕಳ ಪೋಷಣೆಯನ್ನು ಮಾಡುತ್ತಿರುವ ಹಿನ್ನೆಲೆಯಲ್ಲಿ ರೂ.3.00 ಲಕ್ಷ (ಮೂರು ಲಕ್ಷ) ಅನುದಾನವನ್ನು ಬಿಡುಗಡೆ ಮಾಡುವುದೆಂದು ಸಮಿತಿಯು ತೀರ್ಮಾನಿಸಿತು.

## *04]. ವಿಷಯದ ಸಂಖ್ಯೆ :-ತೆಆಸ್ಥಾಸ/49/2012-13*

ಅಪರ ಆಯುಕ್ತರು (ಯೋಜನೆ) ರವರ ಟಿಪ್ಪಣಿ ಸಂಖ್ಯೆ : ಅಆ(ಕ)ಪಿಎಸ್‌ಆರ್(4)228/11-12, ದಿನಾಂಕ : 16.04.2012 ರಲ್ಲಿ ವಿವರಿಸಿರುವಂತೆ ಪ್ರಜಾಪಿತ ಬ್ರಹ್ಮ ಕುಮಾರೀಸ್ ಈಶ್ವರೀಯ ವಿಶ್ವ ವಿದ್ಯಾಲಯ, ನಂ. 20/8-1, 8ನೇ ಕ್ರಾಸ್, 15ನೇ ಮುಖ್ಯರಸ್ತೆ, ಜೆ.ಸಿ. ನಗರ, ಕುರುಬರಹಳ್ಳಿ, ಮಹಾಲಕ್ಷ್ಮೀ ಪುರಂ, ಬೆಂಗಳೂರು - 86 ರವರು ಮನವಿ ಮತ್ತು ದಾಖಲೆಗಳನ್ನು ಸಲ್ಲಿಸಿ, ತಮ್ಮ ಸೇವಾ ಕೇಂದ್ರದ ಚಟುವಟಿಕೆಗಳ ಅಭಿವೃದ್ಧಿಗಾಗಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಅನುದಾನವನ್ನು ಮಂಜೂರು ಮಾಡಿರುವುದಕ್ಕೆ ಧನ್ಯವಾದಗಳನ್ನು ಸಲ್ಲಿಸಿ, ಪಾಲಿಕೆಯ 2011-12 ನೇ ಸಾಲಿನ ಆಯವ್ಯಯದಲ್ಲಿ ಪ್ರಜಾಪಿತ ಬ್ರಹ್ಮಕುಮಾರೀಸ್ ಈಶ್ವರೀಯ ವಿಶ್ವ ವಿದ್ಯಾಲಯ, ಕುರುಬರಹಳ್ಳಿ ಜೆ.ಸಿ. ನಗರ, ಶಂಕರಮ್ಮಠ ವಾರ್ಡ್‌ನ ಸೇವಾ ಕೇಂದ್ರ ಆದ ತಮ್ಮ ಸಂಸ್ಥೆಗೆ ಆಯವ್ಯಯದ ಅಂದಾಜು ಪಟ್ಟಿಯಲ್ಲಿ ಅನುಬಂಧ- 2ರಲ್ಲಿ ಸಂಘ ಸಂಸ್ಥೆಗಳಿಗೆ ಅನುದಾನ ನಿಗಧಿಪಡಿಸಿರುವ ಪಟ್ಟಿಯ ಕ್ರಮ ಸಂಖ್ಯೆ - 120 ರಲ್ಲಿ ರೂ. 1.00 ಲಕ್ಷಗಳ ಅನುದಾನವನ್ನು ಮಂಜೂರು ಮಾಡಲಾಗಿರುತ್ತದೆ. ಸದರಿ ಅನುದಾನವನ್ನು ಬಿಡುಗಡೆ ಮಾಡಬೇಕೆಂದು ಕೋರಿರುತ್ತಾರೆ.

ಪಾಲಿಕೆಯಲ್ಲಿ ಕೊಡುಗೆ ಮತ್ತು ಸಹಾಯಾನುದಾನ ಮಂಜೂರು ಮಾಡಲು ಅಳವಡಿಸಿಕೊಂಡಿರುವ ಮಾರ್ಗ ಸೂಚಿಗಳನ್ವಯ ಅಗತ್ಯ ದಾಖಲೆಗಳನ್ನು ಪಡೆದು ಸಂಘ-ಸಂಸ್ಥೆಗಳು ನಡೆಸುವ ಕ್ರೀಡೆಗಳಿಗೆ ಗರಿಷ್ಠ ರೂ. 10 ಸಾವಿರ, ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ರೂ. 5 ಸಾವಿರಗಳಿಂದ ರೂ. 10 ಸಾವಿರ, ವೃದ್ದಾಶ್ರಮ, ಅನಾಥಾಶ್ರಮ ಇತ್ಯಾದಿಗಳಿಗೆ ರೂ. 10 ಸಾವಿರಗಳಿಂದ ರೂ. 25 ಸಾವಿರ,

ಅಧ್ಯಯನ ಪೀಠಗಳಿಗೆ ರೂ. 25 ಸಾವಿರಗಳಿಂದ 50 ಸಾವಿರ ರೂಪಾಯಿಗಳ ಅನುದಾನಕ್ಕೆ ಸೀಮಿತಗೊಳಿಸುವ ನಿರ್ದೇಶನಗಳಿರುತ್ತವೆ.

2011–12 ನೇ ಸಾಲಿನ ಆಯವ್ಯಯದ ಕೊಡುಗೆ ಮತ್ತು ಸಹಾಯಧನ ಲೆಕ್ಕಶೀರ್ಷಿಕೆಯಡಿ ಮೀಸಲಿರಿಸಲಾಗಿರುವ ರೂ. 1,275.00 ಲಕ್ಷಗಳ ಪೈಕಿ, ದಿನಾಂಕ 03–09–2011 ರಂದು ಪಾಲಿಕೆಯ ಆಯವ್ಯಯ ಸಭೆಯಲ್ಲಿ ತೀರ್ಮಾನವಾದ ನಿರ್ಣಯದ ವಿಷಯದ ಸಂಖ್ಯೆ 165/2011–12ರಂತೆ 185 ಸಂಘ/ಸಂಸ್ಥೆಗಳಿಗೆರೂ. 1,158.50 ಲಕ್ಷಗಳನ್ನು ಅನುದಾನವನ್ನಾಗಿ ನಿಗಧಿಪಡಿಸಿ ಅನುಮೋದನೆ ನೀಡಲಾಗಿರುತ್ತದೆ. ಈ ಪೈಕಿ **ಕ್ರ.ಸಂ. (120) ರಲ್ಲಿ "ಬ್ರಹ್ಮ ಕುಮಾರೀ ಈಶ್ವರಿ ವಿದ್ಯಾನಿಲಯ, ಜೆ.ಸಿ. ನಗರ"** ರವರಿಗೆ **ರೂ. 1.00 ಲಕ್ಷಗಳ** ಅನುದಾನವನ್ನು ನಿಗಧಿಪಡಿಸಲಾಗಿರುತ್ತದೆ.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, ಸದ್ಯದ ಪಾಲಿಕೆಯ ಆರ್ಥಿಕ ಸ್ಥಿತಿ ಸುಸ್ಥಿತಿಯಲ್ಲಿಲ್ಲದೆ ಇರುವುದರಿಂದ ಪ್ರಸ್ತಾವಿತ ಸಂಸ್ಥೆಯ ಮನವಿಯ ಸಂಬಂಧ ಸೂಕ್ತ ನಿರ್ಣಯಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಟಿಪ್ಪಣಿ.

***<u>ನಿರ್ಣಯ :–</u>*** ಅಪರ ಆಯುಕ್ತರು (ಯೋ) ಇವರ ತಾ॥.16.04.2012ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವ ಸಂಸ್ಥೆಯು ಆರ್ಥಿಕವಾಗಿ ಸದೃಢವಾಗಿರುವುದರಿಂದ ಸದರಿ ಪ್ರಸ್ತಾವನೆಯನ್ನು ಕೈ ಬಿಡುವುದೆಂದು ಸಮಿತಿಯು ತೀರ್ಮಾನಿಸಿತು.

## *05]. ವಿಷಯದ ಸಂಖ್ಯೆ :–ತೆಆಸ್ಥಾಸ/51/2012–13*

ಅಪರ ಆಯುಕ್ತರು (ಯೋಜನೆ) ರವರ ಟಿಪ್ಪಣಿ ಸಂಖ್ಯೆ :ಅಆ(ಕ)ಪಿಎಸ್‌ಆರ್(4)221/2011–12, ದಿನಾಂಕ : 14–05–2012 ರಲ್ಲಿ ವಿವರಿಸಿರುವಂತೆ ಶ್ರೀಮತಿ ಮಧುರಾ ಅಶೋಕ್ ಕುಮಾರ್, ಗೌರವ ಕಾರ್ಯದರ್ಶಿಗಳು ಎಫ್.ಪಿ.ಎ. ಇಂಡಿಯಾ, ಸಿಟಿಕಾರ್ಪೋರೇಷನ್ ಮೆಟರ್ನಿಟಿ ಹೋಮ್ ಕಾಂಪ್ಲೆಕ್ಸ್, ಪ್ಯಾಲೆಸ್ ಗುಟ್ಟಹಳ್ಳಿ, ಬೆಂಗಳೂರು ರವರು ಮನವಿ ಸಲ್ಲಿಸಿ, ತಮ್ಮ ಸಂಸ್ಥೆಯು ಹದಿಹರೆಯದವರ ಹಾಗೂ ಯುವ ಜನರ ಆರೋಗ್ಯ ಸಮಸ್ಯೆಗಳಿಗೆ ಸ್ಪಂದಿಸಿ, 2006 ರಲ್ಲಿ ಬೆಂಗಳೂರು ಮಹಾನಗರ ಪಾಲಿಕೆಯ ಸಹಯೋಗದಿಂದಿಗೆ ತಾರುಣ್ಯ ಎಂಬ ಆರೋಗ್ಯ ಕೇಂದ್ರವನ್ನು ಸ್ಥಾಪಿಸಿ, ಹಲವಾರು ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ನಡೆಸುತ್ತಿದ್ದು, ತಮ್ಮ ಸಂಸ್ಥೆಯ ಕಾರ್ಯಚಟುವಟಿಕೆಗಳಿಗೆ 2010–11 ನೇ ಸಾಲಿನಲ್ಲಿ ರೂ. 10.00 ಲಕ್ಷಗಳ ಅನುದಾನವನ್ನು ಮಂಜೂರು ಮಾಡಿರುವುದಕ್ಕೆ ಅಭಿನಂದನೆಗಳನ್ನು ಸಲ್ಲಿಸುತ್ತಾ, 2011–12 ನೇ ಸಾಲಿನಲ್ಲಿಯೂ ಅನುದಾನವನ್ನು ಮಂಜೂರು ಮಾಡಬೇಕೆಂದು ಕೋರಿರುತ್ತಾರೆ.

ಸದರಿಯವರಿಗೆ 2010–11 ನೇ ಸಾಲಿನಲ್ಲಿ ರೂ. 10.00 ಲಕ್ಷಗಳ ಅನುದಾನವನ್ನು ಮಂಜೂರು ಮಾಡಲಾಗಿರುತ್ತದೆ.

ಪಾಲಿಕೆಯಲ್ಲಿ ಕೊಡುಗೆ ಮತ್ತು ಸಹಾಯಾನುದಾನ ಮಂಜೂರು ಮಾಡಲು ಅಳವಡಿಸಿಕೊಂಡಿರುವ ಮಾರ್ಗ ಸೂಚಿಗಳನ್ವಯ ಅಗತ್ಯ ದಾಖಲೆಗಳನ್ನು ಪಡೆದು ಸಂಘ–ಸಂಸ್ಥೆಗಳು ನಡೆಸುವ ಕ್ರೀಡೆಗಳಿಗೆ ಗರಿಷ್ಠ ರೂ. 10 ಸಾವಿರ, ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ರೂ. 5 ಸಾವಿರಗಳಿಂದ ರೂ. 10 ಸಾವಿರ, ವೃದ್ಧಾಶ್ರಮ, ಅನಾಥಾಶ್ರಮ ಇತ್ಯಾದಿಗಳಿಗೆ ರೂ. 10 ಸಾವಿರಗಳಿಂದ ರೂ. 25 ಸಾವಿರ, ಅಧ್ಯಯನ ಪೀಠಗಳಿಗೆ ರೂ. 25 ಸಾವಿರಗಳಿಂದ 50 ಸಾವಿರ ರೂಪಾಯಿಗಳ ಅನುದಾನಕ್ಕೆ ಸೀಮಿತಗೊಳಿಸುವ ನಿರ್ದೇಶನಗಳಿರುತ್ತವೆ.

2011–12ನೇ ಸಾಲಿನ ಆಯವ್ಯಯದ 24.ಸಂಸ್ಕೃತಿ ಮತ್ತು ಕ್ರೀಡೆ ಲೆಕ್ಕಶೀರ್ಷಿಕೆಯಡಿ **"ಪಿ 2377 ಕುಟುಂಬ ನಿಯಂತ್ರಣ ಸಮಿತಿ ಕರ್ನಾಟಕ ಶಾಖೆಗೆ ಕೊಡುಗೆ ಎಂದು ರೂ. 10.00 ಲಕ್ಷ"** ಅನುದಾನವನ್ನಾಗಿ ನಿಗಧಿಪಡಿಸಲಾಗಿರುತ್ತದೆ.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, ಪ್ರಸ್ತಾವಿತ ಸಂಸ್ಥೆಯ ಮನವಿಯ ಸಂಬಂಧ ಸೂಕ್ತ ನಿರ್ಣಯಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಟಿಪ್ಪಣಿ.

***<u>ನಿರ್ಣಯ :–</u>*** ಅಪರ ಆಯುಕ್ತರು (ಯೋ) ಇವರ ದಿನಾಂಕ : 14.05.2012ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವ ಸಂಸ್ಥೆಯು ಆರ್ಥಿಕವಾಗಿ ಸದೃಢವಾಗಿರುವುದರಿಂದ ಸದರಿ ಪ್ರಸ್ತಾವನೆಯನ್ನು ಕೈ ಬಿಡಲು ಸಮಿತಿ ತೀರ್ಮಾನಿಸಿತು.

## 06]. ವಿಷಯದ ಸಂಖ್ಯೆ :–ತೆಆಸ್ಥಾಸ/52/2012–13

ಆಯುಕ್ತರ ಟಿಪ್ಪಣಿ ಸಂಖ್ಯೆ : ಬಿ12(1ಎ)ಪಿಆರ್/39/2008–09, ದಿನಾಂಕ ಃ 11–05–2012 ರಲ್ಲಿ ವಿವರಿಸಿರುವಂತೆ ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಕಛೇರಿಯ ಕೆಲಸಕಾರ್ಯಗಳ ಹಿತದೃಷ್ಟಿಯಿಂದ ಹೊರ ಗುತ್ತಿಗೆ ಆಧಾರದ ಮೇಲೆ ಗಣಕ ಯಂತ್ರ ಆಪರೇಟರ್, ಶೀಘ್ರಲಿಪಿಗಾರರು ಮತ್ತು ಇನ್ನಿತರೇ ಸಿಬ್ಬಂದಿಗಳ ಸೇವೆಯನ್ನು 2002ನೇ ಸಾಲಿನಿಂದ ಪಡೆಯಲಾಗಿರುತ್ತದೆ.

ತದನಂತರ, ಹೊರ ಗುತ್ತಿಗೆ ಆಧಾರದ ಮೇಲೆ ಗಣಕ ಯಂತ್ರ ಆಪರೇಟರ್, ಶೀಘ್ರಲಿಪಿಗಾರರು ಮತ್ತು ಇನ್ನಿತರೇ ಸಿಬ್ಬಂದಿಗಳ ಸೇವೆಯನ್ನು ಮೆ॥ ಕಿಯೋನಿಕ್ಸ್ ಸಂಸ್ಥೆ ರವರ ಮುಖಾಂತರ ದಿ:15–01–2009 ರಿಂದ ಪಡೆಯಲಾಗಿರುತ್ತದೆ. ಸದರಿ ಹೊರ ಗುತ್ತಿಗೆ ಸಿಬ್ಬಂದಿಗಳಿಗೆ ಈ ಕೆಳಕಂಡ ಗೌರವಧನವನ್ನು ಪಾವತಿಸಲಾಗುತ್ತಿರುತ್ತದೆ. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಕೆಲಸಕಾರ್ಯಗಳ ಹಿತದೃಷ್ಟಿಯಿಂದ ಸದರಿಯವರುಗಳ ಸೇವೆಯನ್ನು ಕಾಲಕಾಲಕ್ಕೆ ವಿಸ್ತರಿಸಲಾಗುತ್ತಿರುತ್ತದೆ.

| Sl. No. | Designation | Total Amount from BBMP | Service charges KEONICS | Gross Amount | Basic | PF | ESI | PT | Total Dedun. | Amount to Employee |
|---|---|---|---|---|---|---|---|---|---|---|
| 1. | Data Entry Operator | 6,476 | 971 | 5,505 | 2,200 | 563 | 358 | | 921 | 4,584 |
| 2. | Stenographer | 7,557 | 1,134 | 6,423 | 3,000 | 468 | 418 | | 1,186 | 5,238 |

ಮೆ॥ ಕಿಯೋನಿಕ್ಸ್ ಸಂಸ್ಥೆಯವರ ಪತ್ರ ದಿನಾಂಕ: 14–12–2011.ರಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿನ ವಿವಿಧ ಇಲಾಖೆಗಳಲ್ಲಿ ಹೊರಗುತ್ತಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿರುವ ಗಣಕ ಯಂತ್ರ ಆಪರೇಟರ್ ಮತ್ತು ಶೀಘ್ರಲಿಪಿಗಾರರಿಗೆ ಸರ್ಕಾರದ ಕಾರ್ಮಿಕ ಇಲಾಖೆಯ ದಿನಾಂಕ: 21–02–2011ರ ಅಧಿಸೂಚನೆಯಂತೆ ಪರಿಷ್ಕೃತ ಕನಿಷ್ಟ ವೇತನವನ್ನು ಪಾವತಿಸುವ ಸಂಬಂಧ ನೂತನ ವೇತನ ದರ ಪಟ್ಟಿಯನ್ನು ಸಲ್ಲಿಸಿ, ವೇತನ ಪಾವತಿಸಲು ಕೋರಿರುತ್ತಾರೆ.

ಸದರಿ ನೂತನ ವೇತನ ದರ ಪಟ್ಟಿಯಂತೆ ವೇತನ ಪಾವತಿಸಲು ಬರುವುದಿಲ್ಲವೆಂದು ಈ ಕಛೇರಿ ಸಮಸಂಖ್ಯೆಯ ಪತ್ರ ದಿನಾಂಕ: 05–03–2012ರ ಪತ್ರದಲ್ಲಿ ಮೆ॥ ಕಿಯೋನಿಕ್ಸ್ ಸಂಸ್ಥೆಯವರಿಗೆ ತಿಳಿಸಲಾಗಿರುತ್ತದೆ.

ನಂತರದಲ್ಲಿ, ಮೆ॥ ಕಿಯೋನಿಕ್ಸ್ ಸಂಸ್ಥೆಯವರು ಮೆ॥ ಕಿಯೋನಿಕ್ಸ್ ಸಂಸ್ಥೆ ರವರ ಪತ್ರ ದಿನಾಂಕ: 07–03–2012ರ ಪತ್ರದಲ್ಲಿ ಪಾಲಿಕೆಯಲ್ಲಿ ಹೊರಗುತ್ತಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳಿಗೆ ನೂತನವಾಗಿ ಸಲ್ಲಿಸಿರುವ ದರಪಟ್ಟಿಯಂತೆ ವೇತನ ಪಾವತಿಸಲು ಬರುವುದಿಲ್ಲವೆಂದು ತಿಳಿಸಿರುತ್ತೀರಿ. ನಮ್ಮ ಸಂಸ್ಥೆಯ ವತಿಯಿಂದ ಕಾರ್ಮಿಕ ಇಲಾಖೆಯ ಅಧಿಸೂಚನೆಯ ದಿನಾಂಕ: 21–02–2011ರ ಆದೇಶದಂತೆ ಪರಿಷ್ಕೃತ ಕನಿಷ್ಟ ವೇತನವನ್ನು ಪಾವತಿಸಬೇಕಾಗುತ್ತದೆ. ಆದ್ದರಿಂದ ನೂತನ ವೇತನ ದರ ಪಟ್ಟಿಯನ್ನು ತಾವು ಒಪ್ಪಿ ಅನುಮೋದನೆ ನೀಡಿದ್ದಲ್ಲಿ ವಿಸ್ತರಣೆಯ ಕಾರ್ಯಾದೇಶದ ದಿನಾಂಕ: 03–03–2012ರ ಅನುಸಾರ ನಮ್ಮ ಸಂಸ್ಥೆಯಿಂದ ಸಿಬ್ಬಂದಿಗಳನ್ನು ಮುಂದುವರೆಸಲು ಇಚ್ಛಿಸುತ್ತೇವೆ. ನೂತನ ವೇತನ ದರ ಪಟ್ಟಿಯನ್ನು ನೀಡಲು ಇಚ್ಛಿಸದಿದ್ದಲ್ಲಿ ಸಿಬ್ಬಂದಿಗಳನ್ನು

ಹೊರಗುತ್ತಿಗೆ ಆಧಾರದ ಮೇಲೆ ನಿಯೋಜಿಸಲು ಸಾಧ್ಯವಾಗುವುದಿಲ್ಲವೆಂದು ತಿಳಿಸಿರುತ್ತಾರೆ. ಹಾಗೂ ಸಂಸ್ಥೆಯ ಸೇವಾವಧಿ ದಿನಾಂಕ: 29–02–2011 ರಂದು ಮುಕ್ತಾಯಗೊಂಡಿರುವುದರಿಂದ ಸಿಬ್ಬಂದಿಗಳ ಸೇವೆಯು ಸಹ ಕೊನೆಗೊಂಡಿರುತ್ತದೆ. ನಿಯೋಜಿತ ಸಿಬ್ಬಂದಿಗಳ ಸೇವೆಯನ್ನು ಪಾಲಿಕೆಯು ಮುಂದುವರೆಸಿದ್ದಲ್ಲಿ ಅವರ ವೇತನ ಮತ್ತು ಕಾನೂನು ಬದ್ಧ ಕಡಿತಗಳ ಜವಾಬ್ದಾರಿಯು ಪಾಲಿಕೆದಾಗಿರುತ್ತದೆಯೆಂದು ತಿಳಿಸಿರುತ್ತಾರೆ.

ಈ ಸಂಬಂಧವಾಗಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಆಯುಕ್ತರವರು ಮೆ॥ ಕಿಯೋನಿಕ್ಸ್ ಸಂಸ್ಥೆಯೊಂದಿಗೆ ಚರ್ಚಿಸಿದ್ದ ಸಂದರ್ಭದಲ್ಲಿ ಮೆ॥ ಕಿಯೋನಿಕ್ಸ್ ಸಂಸ್ಥೆಯವರು ಸರ್ವಿಸ್ ಚಾರ್ಜ್‌ನ್ನು ಕಡಿಮೆ ಮಾಡಲು ಒಪ್ಪಿದ್ದು, ಇದರಂತೆ ನೂತನ ದರ ಪಟ್ಟಿಯನ್ನು ಕಳುಹಿಸಿಕೊಡಲು ಮೆ॥ ಕಿಯೋನಿಕ್ಸ್ ಸಂಸ್ಥೆಯನ್ನು ಈ ಕಛೇರಿ ಸಮಸಂಖ್ಯೆಯ ಪತ್ರ ದಿನಾಂಕ: 17–03–2012ರ ಪತ್ರದಲ್ಲಿ ಕೋರಲಾಗಿರುತ್ತದೆ.

ಇದರಂತೆ, ಮೆ॥ ಕಿಯೋನಿಕ್ಸ್ ಸಂಸ್ಥೆಯವರು ಮೆ॥ ಕಿಯೋನಿಕ್ಸ್ ಸಂಸ್ಥೆ ರವರ ಪತ್ರ ದಿನಾಂಕ: 26–03–2012ರಲ್ಲಿ ನೂತನ ದರ ಪಟ್ಟಿಯನ್ನು ಸಲ್ಲಿಸಿದ್ದು, ವಿವರಗಳು ಈ ಕೆಳಕಂಡಂತೆ ಇರುತ್ತದೆ.

| Quotation & Remuneration Details for providing Stenographer & DEO | | |
|---|---|---|
| **Particulars** | **Stenographer** | **DEO** |
| Billing Amount | 13,800-00 | 10,700-00 |
| Service tax | 1,289-00 | 999-00 |
| | 12,511-00 | 9,701-00 |
| Service Charges | 1,380-00 | 1,070-00 |
| | 11,131-00 | 8,631-00 |
| PF Employer Contribution | 817-00 | 817-00 |
| ESI Employer Contribution | 529-00 | 410-00 |
| Gross to the Candidate | 9,785-00 | 7,404-00 |
| PF Employee Contribution | 720-00 | 720-00 |
| ESI Employee Contribution | 195-00 | 152-00 |
| Professional Tax | | |
| Net payable to Candidate | 8,870-00 | 6,532-00 |

ಮೆ॥ ಕಿಯೋನಿಕ್ಸ್ ಸಂಸ್ಥೆ ರವರು ಸಲ್ಲಿಸಿರುವ ವೇತನ ದರ ಪಟ್ಟಿಯ ಬಗ್ಗೆ ಕಾನೂನು ಕೋಶದ ಮುಖ್ಯಸ್ಥರನ್ನು ಅಭಿಪ್ರಾಯ ಕೋರಲಾಗಿ, ಮೆ॥ ಕಿಯೋನಿಕ್ಸ್ ಸಂಸ್ಥೆಯವರ ದಿನಾಂಕ: 26-03-2012ರಲ್ಲಿನ ಪತ್ರದಲ್ಲಿ ನಿಗಧಿಪಡಿಸಿರುವ ವೇತನದ ವಿವರಗಳು ಕಾರ್ಮಿಕ ಇಲಾಖಾ ವತಿಯಿಂದ ನೀಡಲಾಗಿರುವ ಅಧಿಸೂಚನೆ ಪ್ರಕಾರ ಸಮಂಜಸವಾಗಿರುವುದು ಕಂಡುಬಂದಿದ್ದು, ಒಟ್ಟಾರೆ ಅಪರೇಟರ್‌ಗಳ ಸಂಖ್ಯೆ ಅವಕಶ್ಯಕತೆಗಳಿಗೆ ಅನುಗುಣವಾಗಿ ಕಡಿಮೆಗೊಳಿಸುವ ಬಗ್ಗೆ ಸಂಬಂಧಪಟ್ಟ ಇಲಾಖಾ ಮುಖ್ಯಸ್ಥರ ವರದಿ ಪಡೆದು ಕಡಿಮೆಗೊಳಿಸಿ ಒಟ್ಟಾರೆ ಮೊತ್ತವನ್ನು ಸರಿದೂಗಿಸಲು ಕ್ರಮವಹಿಸಬಹುದಾಗಿದ್ದು ಹಾಲಿ ವಿಷಯದಲ್ಲಿ ಕಿಯೋನಿಕ್ಸ್ ಸಂಸ್ಥೆಯವರೊಂದಿಗೆ ಒಡಂಬಡಿಕೆ ಮಾಡಿಕೊಳ್ಳುವುದು ಸೂಕ್ತ ಹಾಗೂ ಸಮಂಜಸವೆಂದು ಅಭಿಪ್ರಾಯ ನೀಡಿರುತ್ತಾರೆ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವಿವಿಧ ಇಲಾಖೆಗಳಲ್ಲಿ ಹೊರಗುತ್ತಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿರುವ ಗಣಕ ಯಂತ್ರ ಆಪರೇಟರ್ ಮತ್ತು ಶೀಘ್ರಲಿಪಿಗಾರರುಗಳ ಸೇವೆಯು ನಗರ ಪಾಲಿಕೆಯ ಕೆಲಸಕಾರ್ಯಗಳ ಹಿತದೃಷ್ಟಿಯಿಂದ ಅತ್ಯಂತ ಅವಶ್ಯಕವಾಗಿರುವುದರಿಂದ ಮೆ॥ ಕಿಯೋನಿಕ್ಸ್ ಸಂಸ್ಥೆಯವರು ಮೇಲ್ಕಂಡಂತೆ ಸಲ್ಲಿಸಿರುವ ನೂತನ ದರಪಟ್ಟಿಯನ್ವಯ ಗೌರವಧನವನ್ನು ಮಾರ್ಚ್ 2012ರ ಮಾಹೆಯಿಂದ ಪಾವತಿಸುವ ಸಂಬಂಧ ತೀರ್ಮಾನಕ್ಕಾಗಿ ಮಂಡಿಸಿರುವ ಟಿಪ್ಪಣಿ.

**-ಮುಂದೂಡಿದೆ-**

## *07]. ವಿಷಯದ ಸಂಖ್ಯೆ :-ತೆಆಸ್ಥಾಸ/53/2012-13*

ಆಯುಕ್ತರ ಟಿಪ್ಪಣಿ ಸಂಖ್ಯೆ : ಎ3(2)/ಪಿಆರ್/527/11-12, ದಿನಾಂಕ : 28-02-2012 ರಲ್ಲಿ ವಿವರಿಸಿರುವಂತೆ ವಾರ್ಡ್ ಸಂಖ್ಯೆ : 92, ಶಿವಾಜಿರಸ್ತೆ, ಬಿ ನಂಬರ್ 12ನೇ ಅಡ್ಡರಸ್ತೆ, ಕೂಡುವ ಸ್ಥಳದಲ್ಲಿ ಶ್ರೀ.ವಿನಾರಾಯಣ್ ರವರಿಗೆ ಪೆಟ್ಟಿಗೆ ಅಂಗಡಿ ನಡೆಸಲು 15-12-2008 ರಿಂದ 14-12-2011ರ ವರೆಗೆ ತಿಂಗಳಿಗೆ ರೂ. 583/- ಬಾಡಿಗೆ ನಿಗದಿಪಡಿಸಿ 3 ವರ್ಷಗಳ ಅವಧಿಗೆ ಅನುಮತಿ ನೀಡಲಾಗಿದ್ದು, ದಿನಾಂಕ: 31-12-2011ರ ವರೆಗೆ ಬಾಡಿಗೆ/ಗುತ್ತಿಗೆ ಹಣವನ್ನು ಪೂರ್ಣವಾಗಿ ಪಾವತಿಸಿರುತ್ತಾರೆಂದು ವರದಿ ಮಾಡಿರುತ್ತಾರೆ. ತದನಂತರ ಪುನ: 3 ವರ್ಷಗಳ ಅವಧಿಗೆ ಗುತ್ತಿಗೆ ಅವಧಿ ನವೀಕರಿಸಲು ಕೋರಿದ್ದು, ವಾರ್ಡ್ 63ರ ಪಾಲಿಕೆಯ ಸದಸ್ಯರ ಶಿಫಾರಸ್ಸು ಪತ್ರವನ್ನು ಸಹ ಲಗತ್ತಿಸಿರುತ್ತಾರೆ.

ಸ್ಥಳ ಪರಿಶೀಲನಾ ವರದಿಯಂತೆ ಶ್ರೀ.ವಿ.ನಾರಾಯಣ್ ರವರು ಪೆಟ್ಟಿಗೆ ಅಂಗಡಿಯನ್ನು ಇಟ್ಟುಕೊಂಡು ವ್ಯಾಪಾರ ನಡೆಸುತ್ತಿದ್ದು, ಮತ್ತೆ 3 ವರ್ಷಗಳ ಕಾಲ ಗುತ್ತಿಗೆ ಅವಧಿಯನ್ನು ನವೀಕರಿಸಬೇಕೆಂದು ಹಾಲಿ ತಿಂಗಳ ಬಾಡಿಗೆ ರೂ. 583 ರಿಂದ 750ಕ್ಕೆ ನಿಗದಿಪಡಿಸಬೇಕೆಂದು ಅಭಿಪ್ರಾಯಿಸಿ ಆಸ್ತಿ ಶಾಖೆಗೆ ಕಡತ ಮಂಡಿಸಿರುತ್ತಾರೆ.

ಪ್ರಸಕ್ತ ಸ್ವತ್ತಿನ ವಿಸ್ತೀರ್ಣ 5X5=25 ಚದರ ಅಡಿಗಳಾಗಿದ್ದು, ಪ್ರಸಕ್ತ ಮಾರುಕಟ್ಟೆ ದರವು ಚದರ ಅಡಿ 1ಕ್ಕೆ 2500/– ಗಳಾಗಿದ್ದು, ವಾಣಿಜ್ಯ ಶೇ 40% ರಷ್ಟು (1000) ಸೇರಿಸಿದ್ದಲ್ಲಿ ಚದರ ಅಡಿ ಒಂದಕ್ಕೆ ಸ್ವತ್ತಿನ ಮೌಲ್ಯ ರೂ.3500/– ಗಳು 25 ಚದರ ಅಡಿಗಳಿಗೆ ರೂ. 87500/– ಗಳಾಗುತ್ತದೆ. ಮಾರುಕಟ್ಟೆಯ ಬೆಲೆ ಶೇ 10% ರಂತೆ ಪರಿಗಣಿಸಿದಲ್ಲಿ ವಾರ್ಷಿಕ ರೂ. 8500/– ಗಳು ಮಾಸಿಕ ರೂ. 729/– ಗಳಾಗುತ್ತದೆ. ದಿನಾಂಕ:01–01–2012 ರಿಂದ 31–12–2014ರ ವರೆಗೆ 3 ವರ್ಷಗಳ ಅವಧಿಗೆ ಮಾಸಿಕ ಗುತ್ತಿಗೆ ಮೊತ್ತ ರೂ.729/–ಅನ್ನು ನಿಗದಿಪಡಿಸಿ ನವೀಕರಿಸಲು ಮುಂದಿನ ಸೂಕ್ತ ನಿರ್ಣಯಕ್ಕಾಗಿ ಮಂಡಿಸಿರುವ ತಾ॥.28–02–2012ರ ಆಯುಕ್ತರ ಟಿಪ್ಪಣಿ ಒಪ್ಪುತ್ತಾ, ದರ ನಿಗದಿಪಡಿಸಲು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಗೆ ಶಿಫಾರಸ್ಸು ಮಾಡಲು ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ : 12–04–2012ರ ನಿರ್ಣಯ.

**–ಮುಂದೂಡಿದೆ–**

## *08]. ವಿಷಯದ ಸಂಖ್ಯೆ :–ತೆಆಸ್ಥಾಸ/55/2012–13*

ಆಯುಕ್ತರ ಟಿಪ್ಪಣಿ ಸಂಖ್ಯೆ :ಎ3(1)/ಪಿಆರ್/227/11–12, ದಿನಾಂಕ : 11–04–2012 ರಲ್ಲಿ ವಿವರಿಸಿರುವಂತೆ, ಶ್ರೀ.ಪಿ.ಎಲ್.ವಸುಂಧರ ರವರು ಎ.ಎಂ.ಲೇನ್, 1ನೇ ಕ್ರಾಸ್‌ನಲ್ಲಿರುವ ಎಲ್ ಆಕಾರದಲ್ಲಿರುವ 10X6 ಅಡಿಗಳ ಖಾಲಿ ಜಾಗದಲ್ಲಿ ಒಂದು ಪೆಟ್ಟಿಗೆ ಅಂಗಡಿಯನ್ನು ಇಟ್ಟುಕೊಂಡು ವ್ಯಾಪಾರ ಮಾಡಲು ಗುತ್ತಿಗೆಗೆ ನೀಡಲು ಕೋರಿ ದಿನಾಂಕ:20–05–2011 ರಂದು ಅರ್ಜಿಯನ್ನು ಸಲ್ಲಿಸಿರುತ್ತಾರೆ.

ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು (ಕಾಟನ್‌ಪೇಟೆ) ಉಪ ವಿಭಾಗದವರು ಸ್ಥಳ ಪರಿಶೀಲಿಸಿ ಸದರಿ ಜಾಗವು ಮೂಲೆ ನಿವೇಶನವಾಗಿದ್ದು ಹಾಗೂ ಬಿವಿಕೆ ಅಯ್ಯಂಗಾರ್ ರಸ್ತೆಗೆ ಅಭಿಮುಖವಾಗಿರುತ್ತದೆ. ಸದರಿ ಜಾಗದಲ್ಲಿರುವ 10X6 ಅಡಿಗಳ ಜಾಗವನ್ನು ಗುತ್ತಿಗೆ ಆಧಾರದ ಮೇಲೆ ನೀಡಬಹುದಾಗಿ ವಲಯಾಧಿಕಾರಿಗಳು ಸಹಾ ಅನುಮೋದನೆಗಾಗಿ ಕಡತ ಸಲ್ಲಿಸಿರುತ್ತಾರೆ. ವರದಿಯಲ್ಲಿ ತಿಳಿಸಿರುತ್ತಾರೆ.

ಪ್ರಸ್ತುತ ಜಾಗದ ವಿಸ್ತೀರ್ಣವು 10X6=60 ಚದರ ಅಡಿಗಳಾಗಿದ್ದು, ಈ ಪ್ರದೇಶದಲ್ಲಿ ದಿ:21–09–2011ರ ಸರ್ಕಾರದ ಮಾರ್ಗಸೂಚಿ ಅನ್ವಯ ಮಾರುಕಟ್ಟೆ ದರದಂತೆ ಚದರ ಅಡಿ ಒಂದಕ್ಕೆ ರೂ.7500/– ಗಳಿರುತ್ತದೆ. ಇದಕ್ಕೆ ಶೇ 40% ರಷ್ಟು ಹೆಚ್ಚಿಸಿದಾಗ 10500/– ಇದರಂತೆ ಲೆಕ್ಕಾಚಾರ ಮಾಡಲಾಗಿ, 10500X60=630000/–ರೂ. ಒಟ್ಟು ಮೊತ್ತಗಳಾಗುತ್ತದೆ. ಶೇ 10% ರಂತೆ ವಾರ್ಷಿಕ ಗುತ್ತಿಗೆ ಮೊತ್ತ ರೂ.63000/– ಗಳಾಗಲಿದ್ದು, ಮಾಸಿಕ ಗುತ್ತಿಗೆ ಮೊತ್ತ ರೂ.5250/– ಗಳಾಗುತ್ತದೆ.

ಸರ್ಕಾರದ ಆದೇಶ ಸಂಖ್ಯೆ:ನಅಇ 129 ಟಿಎಂಡಿ 2002 ಬೆಂಗಳೂರು ದಿನಾಂಕ:02–06–2003ರಲ್ಲಿನ ಕ್ರಮ ಸಂಖ್ಯೆ vi) ನಗರ ಸ್ಥಳೀಯ ಸಂಸ್ಥೆಗಳು ತಮ್ಮ ಅಧಿಕಾರವನ್ನುಪಯೋಗಿಸಿ ಸ್ವತ್ತುಗಳನ್ನು ಗುತ್ತಿಗೆ ಆಧಾರದ ಮೇಲೆ ನೀಡಿದಲ್ಲಿ, ಅಂತಹ ಗುತ್ತಿಗೆಗಳನ್ನು ಸಾರ್ವಜನಿಕ ಹರಾಜು ಮೂಲಕವೇ ನೀಡುವುದು ಎಂಬುದಾಗಿದೆ.

ಈ ಹಿನ್ನೆಲೆಯಲ್ಲಿ ಮೇಲೆ ನಮೂದಿಸಿರುವ ಸ್ಥಳವನ್ನು ಹರಾಜು ಮೂಲಕ ಗುತ್ತಿಗೆ ನೀಡುವ ಬಗ್ಗೆ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ನಗರ ಪಾಲಿಕೆ ಸಭೆಯ ಮುಂದೆ ಸೂಕ್ತ ತೀರ್ಮಾನ ಕೋರಿ ಮಂಡಿಸಲಾದ ಟಿಪ್ಪಣಿ ಮೇರೆಗೆ, ದಿನಾಂಕ: 11–04–2012ರ ಮಾನ್ಯ ಆಯುಕ್ತರ ಟಿಪ್ಪಣಿಯನ್ನು ಪರಿಶೀಲಿಸಿ, ಸದರಿ ಸ್ಥಳವನ್ನು ಹರಾಜು ಮೂಲಕ ಗುತ್ತಿಗೆಗೆ ನೀಡಲು ತೀರ್ಮಾನಿಸಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ : 17–04–2012ರ ನಿರ್ಣಯ.

**–ಮುಂದೂಡಿದೆ–**

## *09]. ವಿಷಯದ ಸಂಖ್ಯೆ :–ತೆಆಸ್ಥಾಸ/56/2012–13*

ಆಯುಕ್ತರ ಟಿಪ್ಪಣಿ ದಿನಾಂಕ : 14–02–2012 ರಲ್ಲಿ ವಿವರಿಸಿರುವಂತೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯನ್ನು ಒಟ್ಟು 8 ವಲಯಗಳನ್ನಾಗಿ ವಿಂಗಡಿಸಿದ್ದು, ಇದರ ವ್ಯಾಪ್ತಿಯು ಈ ಹಿಂದೆ ಇದ್ದ ಸುಮಾರು 225 ಚ.ಕಿ.ಮೀ ನಿಂದ 800 ಚ.ಕಿ.ಮಿ. ನಷ್ಟು ವ್ಯಾಪ್ತಿಗೆ ವಿಸ್ತರಿಸಲಾಗಿದೆ. ಪಾಲಿಕೆ ವ್ಯಾಪ್ತಿಯಲ್ಲಿ ಜನಸಂಖ್ಯೆಯು 2001 ರ ಜನಗಣತಿ ಪ್ರಕಾರ ಸುಮಾರು 60 ಲಕ್ಷದಷ್ಟಿದ್ದು, 2011ರ ಅಂತ್ಯಕ್ಕೆ ಒಂದು ಕೋಟಿ ಮೀರುವ ನಿರೀಕ್ಷೆ ಇದೆ. ಇತ್ತೀಚಿನ ವರ್ಷಗಳಲ್ಲಿ ಬೆಂಗಳೂರು ನಗರವು ನಿರಂತರವಾಗಿ ಬೆಳೆಯುತ್ತಿದ್ದು,

ನಗರದ ಹೊರವಲಯದಲ್ಲಿ ಅನೇಕ ಕೈಗಾರಿಕೆ, ವಾಣಿಜ್ಯ ಹಾಗೂ ಮಾಹಿತಿ ತಂತ್ರಜ್ಞಾನದ ಕೇಂದ್ರಗಳನ್ನು ಸ್ಥಾಪಿಸಲಾಗಿರುತ್ತದೆ. ಬೆಂಗಳೂರು ನಗರದ ವಾಹನ ಸಂಖ್ಯೆಯು ಕೂಡ ಸತತವಾಗಿ ಹೆಚ್ಚುತ್ತಿದ್ದು, 1980ರಲ್ಲಿ ಸುಮಾರು 17 ಲಕ್ಷದಷ್ಟಿದ್ದ ಸಂಖ್ಯೆಯು, 2011ರಲ್ಲಿ ಸುಮಾರು 40.00 ಲಕ್ಷಕ್ಕೆ ಬೆಳೆದಿರುತ್ತದೆ. ಈ ವಾಹನಗಳ ಪೈಕಿ ಹೆಚ್ಚಾಗಿ ದ್ವಿಚಕ್ರವಾಹನಗಳಾಗಿದ್ದು, ಇತ್ತೀಚೆಗೆ ಕಾರುಗಳ ಹಾಗೂ ಇತರೆ ವಾಹನಗಳ ಸಂಖ್ಯೆಯು ಸಹ ಅತಿ ವೇಗವಾಗಿ ಬೆಳೆಯುತ್ತಿದೆ.

ಬೆಂಗಳೂರು ನಗರದಲ್ಲಿನ ಪ್ರಮುಖ ಕಾರಿಡಾರ್‌ಗಳಲ್ಲಿ ಸುಮಾರು 600ಕ್ಕೂ ಹೆಚ್ಚು ಪ್ರಮುಖ ಜಂಕ್ಷನ್‌ಗಳಿದ್ದು, ಇವುಗಳಲ್ಲಿ ಸುಮಾರು 300ಕ್ಕೂ ಹೆಚ್ಚು ಜಂಕ್ಷನ್‌ಗಳಲ್ಲಿ ಸಿಗ್ನಲ್‌ಗಳಿದ್ದು, ವಾಹನ ವೇಗದ ಮಿತಿ ಪ್ರತಿ ಗಂಟೆಗೆ ಸರಾಸರಿ 10.00ಕಿ.ಮೀ.ಗಿಂತ ಕಡಿಮೆಯಾಗಿದೆ. ಇಂತಹ ಜಂಕ್ಷನ್‌ಗಳಲ್ಲಿ ಟ್ರಾಫಿಕ್ ಜಾಮ್ ಆಗುವುದನ್ನು ತಪ್ಪಿಸಲು, ಸಿಗ್ನಲ್ ರಹಿತ ಗ್ರೇಡ್ ಸೆಪರೇಟರ್‌ಗಳನ್ನು ನಿರ್ಮಿಸಿದರೆ ವಾಹನ ಸಂಚಾರದ ವೇಗ ಹೆಚ್ಚಿಸಿ ಸುರಕ್ಷಿತ ಸಂಚಾರವನ್ನು ಕಲ್ಪಿಸುವುದಲ್ಲದೇ ಸಂಚಾರ ದಟ್ಟಣೆಯನ್ನು ಕಡಿಮೆ ಮಾಡಿ ಸಾರ್ವಜನಿಕರ ಅಮೂಲ್ಯ ವೇಳೆಯ ಉಳಿತಾಯ ಅಲ್ಲದೆ ಇಂಧನ ಉಳಿಕೆ ಮತ್ತು ವಾಯುಮಾಲಿನ್ಯವನ್ನು ತಕ್ಕ ಮಟ್ಟಿಗೆ ಕಡಿಮೆಗೊಳಿಸಬಹುದಾಗಿದೆ.

2011–12 ನೇ ಸಾಲಿನ ಆಯವ್ಯಯ ಅಂದಾಜಿನಲ್ಲಿ 7 ಕಾರಿಡಾರ್‌ಗಳನ್ನು ಸಿಗ್ನಲ್ ಮುಕ್ತಗೊಳಿಸಲು ಪ್ರಮುಖ ಜಂಕ್ಷನ್‌ಗಳಲ್ಲಿ ಗ್ರೇಡ್ ಸೆಪರೇಟರ್‌ಗಳನ್ನು ನಿರ್ಮಿಸಲು ಪ್ರಸ್ತಾಪಿಸಿದ್ದು, ಅವುಗಳಿಗೆ ಟೆಂಡರ್ ಆಹ್ವಾನಿಸಲು ಕ್ರಮ ಕೈಗೊಳ್ಳಬೇಕಾಗಿರುತ್ತದೆ (ಪುಟ ಸಂಖ್ಯೆ 180 ರಿಂದ 182 ರವರೆಗೆ). ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಬರುವ 7 ಸಿಗ್ನಲ್ ಮುಕ್ತ ಕಾರಿಡಾರ್‌ಗಳಲ್ಲಿ ಗ್ರೇಡ್ ಸೆಪರೇಟರ್ (ಮೇಲ್ಸೇತುವೆ ಮತ್ತು ಅಂಡರ್ ಪಾಸ್‌ಗಳನ್ನು) ನಿರ್ಮಾಣ ಮಾಡಿ ಸಿಗ್ನಲ್ ಮುಕ್ತಗೊಳಿಸಲು ಖಾಸಗಿ ಸ್ವತ್ತುಗಳನ್ನು ಭೂಸ್ವಾಧೀನಪಡಿಸಿಕೊಳ್ಳಬೇಕಾಗಿದ್ದು, ವಿವರಗಳು ಈ ಕೆಳಕಂಡಂತಿವೆ.

| ಕ್ರ.ಸಂ | ಕಾರಿಡಾರ್‌ನ ಹೆಸರು | ಜಂಕ್ಷನ್‌ಗಳ ಸಂಖ್ಯೆ | ಭೂಸ್ವಾಧೀನ ಪಡಿಸಿಕೊಳ್ಳಬೇಕಾಗಿರುವ ಸ್ವತ್ತುಗಳ ಅಂದಾಜು ಒಟ್ಟು ವಿಸ್ತೀರ್ಣ (ಚ.ಮೀ.ಗಳಲ್ಲಿ) |
|---|---|---|---|
| 1 | ಡಾ॥ ರಾಜ್‌ಕುಮಾರ್ ರಸ್ತೆ– ಸರ್ಕಾರಿ ಸೋಪ್ ಕಾರ್ಖಾನೆ ಜಂಕ್ಷನ್ ನಿಂದ ಮಾಗಡಿ ರಸ್ತೆ ಡೀವಿಯೇಶನ್ ಜಂಕ್ಷನ್‌ವರೆಗೆ | | |
| | ವಿವೇಕಾನಂದ ಜಂಕ್ಷನ್ | 1 | 2275.00 |
| | ಓಕಳಿಪುರಂ ಜಂಕ್ಷನ್ | 1 | 1332.00 |
| | ಒಟ್ಟು | 2 | 3607.00 |
| 2 | ಮಾಗಡಿ ರಸ್ತೆ– ಕಾರ್ಡ್ ರಸ್ತೆಯಿಂದ ಹೊರವರ್ತುಲ ರಸ್ತೆ ಜಂಕ್ಷನ್‌ವರೆಗೆ | | |
| | ಜೈಮುನಿರಾವ್ ವೃತ್ತ | 1 | 2723.58 |
| | ಬಸವೇಶ್ವರನಗರ ಜಂಕ್ಷನ್ | 1 | 560.15 |
| | ನಿಗಧಿತ 'ಯು' ತಿರುವು ಪಟ್ಟಾಲಮ್ಮ ದೇವಸ್ಥಾನದ ರಸ್ತೆ | 1 | 1503.49 |
| | ಪಟ್ಟಾಲಮ್ಮ ರಸ್ತೆ ಮತ್ತು ಹೊರವರ್ತುಲ ರಸ್ತೆಯ ಜಂಕ್ಷನ್ ಹತ್ತಿರ 'ಯು' ತಿರುವು. | 1 | 1595.37 |
| | ಒಟ್ಟು | 4 | 6382.59 |
| 3 | ಹೊರವರ್ತುಲ ರಸ್ತೆ– ಮೈಸೂರು ರಸ್ತೆ ಜಂಕ್ಷನ್‌ನಿಂದ ಸೆಂಟ್ರಲ್ ಸಿಲ್ಕ್ ಬೋರ್ಡ್ ಜಂಕ್ಷನ್ ವರೆಗೆ | | |
| | ಕೆ.ಇ.ಬಿ. ಜಂಕ್ಷನ್ ಪಿ.ಇ.ಎಸ್.ಐ.ಟಿ | 1 | 156.22 |
| | ಡಾ॥ ಮುತ್ತುರಾಜ್ ಜಂಕ್ಷನ್ | 1 | 2464.41 |
| | ಫುಡ್‌ವಲ್ಡ್ ಜಂಕ್ಷನ್ | 1 | 1794.04 |
| | ಡಾಲರ್ಸ್ ಕಾಲೋನಿ ಜಂಕ್ಷನ್ | 1 | 1675.01 |
| | ಒಟ್ಟು | 4 | 6089.68 |
| 4 | ಹೊಸೂರು ಲಷ್ಕರ್ ರಸ್ತೆ – ವೆಲ್ಲಾರ ಜಂಕ್ಷನ್ ನಿಂದ ಸೆಂಟ್ರಲ್ ಸಿಲ್ಕ್ ಬೋರ್ಡ್ ಜಂಕ್ಷನ್‌ವರೆಗೆ | | |
| | (ಸಿಮೆಂಟ್ರಿ ರೋಡ್ ಜಂಕ್ಷನ್) ಬನ್ನೇರುಘಟ್ಟ ರಸ್ತೆ | 1 | 1945.88 |
| | ಆಡುಗೋಡಿ ಜಂಕ್ಷನ್ | 1 | 3043.94 |

| | | | |
|---|---|---|---|
| | ಲಾಂಗ್‌ಫೋರ್ಡ್ ಜಂಕ್ಷನ್ | 1 | 5937.19 |
| | ವೆಲ್ಲಾರ ಜಂಕ್ಷನ್ | 1 | 1102.64 |
| | ಒಟ್ಟು | 4 | 12029.65 |
| 5 | ಬನ್ನೇರುಘಟ್ಟ ರಸ್ತೆ – ಜೇಡಿಮರ ಜಂಕ್ಷನ್‌ನಿಂದ ಕೋಳಿಫಾರಂ ವರೆಗೆ | | |
| | ಜೇಡಿಮರ ಜಂಕ್ಷನ್ | 1 | 12639.43 |
| | ಬಿಳೇಕಹಳ್ಳಿ ಜಂಕ್ಷನ್ | 1 | 7723.53 |
| | ಅರೆಕೆರೆ ರೋಡ್ ಜಂಕ್ಷನ್ | 1 | 9571.87 |
| | ಹುಳಿಮಾವು ಗೇಟ್ ಜಂಕ್ಷನ್ | 1 | 14459.63 |
| | ಒಟ್ಟು | 4 | 44394.46 |
| 6 | ಹಳೆ ವಿಮಾನ ನಿಲ್ದಾಣ ರಸ್ತೆ– ವೆಲ್ಲಾರ ಜಂಕ್ಷನ್ ನಿಂದ ರಾಜ್ಯ ಹೆದ್ದಾರಿ–35 ರವರೆಗೆ | | |
| | ಹೋಸ್ ಮ್ಯಾಟ್ ಜಂಕ್ಷನ್ | 1 | 4050.00 |
| | ಲೋಯರ್ ಅಗರಂ ಜಂಕ್ಷನ್ | 1 | 11169.00 |
| | ಎ.ಎಸ್.ಸಿ. ಜಂಕ್ಷನ್ | 1 | 3877.00 |
| | ಕಮಾಂಡೋ ಆಸ್ಪತ್ರೆ ಜಂಕ್ಷನ್ | 1 | 4168.00 |
| | ದೊಮ್ಮಲೂರು ಜಂಕ್ಷನ್ | 1 | 3290.00 |
| | ಮಣಿಪಾಲ್ ಆಸ್ಪತ್ರೆ ಜಂಕ್ಷನ್ | 1 | 2655.00 |
| | ವಿಂಡ್–ಟನಲ್ ಜಂಕ್ಷನ್ | 1 | 4136.00 |
| | ಸುರಂಜನ್‌ದಾಸ್ ಜಂಕ್ಷನ್ | 1 | 1888.00 |
| | ನಾಮ್‌ಜೋಶಿ ಜಂಕ್ಷನ್ | 1 | 7462.00 |
| | ಮಾರತ್‌ಹಳ್ಳಿ ಜಂಕ್ಷನ್ | 1 | 7348.00 |
| | ಕುಂದಲಹಳ್ಳಿ ಜಂಕ್ಷನ್ | 1 | 8599.00 |
| | ಒಟ್ಟು | 11 | 58642.00 |
| 7 | ಮೇಖ್ರಿ ಸರ್ಕಲ್‌ನಿಂದ ಹಳೆ ಮದ್ರಾಸ್ ರಸ್ತೆ ಮಾರ್ಗವಾಗಿ ರಾಷ್ಟ್ರೀಯ ಹೆದ್ದಾರಿ–207 ವರೆಗೆ | | |
| | ಸಿ.ಐ.ಎಲ್. ಜಂಕ್ಷನ್ | 1 | 8043.00 |
| | ಮುನಿರೆಡ್ಡಿಪಾಳ್ಯ ಜಂಕ್ಷನ್ | 1 | 5126.00 |
| | ಜಯಮಹಲ್ 5ನೇ ಮುಖ್ಯರಸ್ತೆ ಜಂಕ್ಷನ್ | 1 | 4422.00 |
| | ನಂದಿದುರ್ಗ ರಸ್ತೆ ಜಂಕ್ಷನ್ | 1 | 4862.00 |
| | ಹೇನ್ಸ್ ಮತ್ತು ಸೆಪ್ಪಿಂಗ್ಸ್ ರಸ್ತೆ ಜಂಕ್ಷನ್ | 1 | 8694.00 |
| | ಧೋಭಿಘಾಟ್ ರಸ್ತೆ ಜಂಕ್ಷನ್ | 1 | 439.00 |
| | ಥಾಮರಾಯ್ ಕನ್ನನ್ ಮತ್ತು ಹಳೆ ಮದ್ರಾಸ್ ರಸ್ತೆ ಜಂಕ್ಷನ್ | 1 | 10890.00 |
| | ಇಂದಿರಾನಗರ ಡಬಲ್ ರೋಡ್ ಜಂಕ್ಷನ್ | 1 | 8641.00 |
| | ಇಂದಿರಾನಗರ 80 ಅಡಿ ರಸ್ತೆ ರೋಡ್ ಜಂಕ್ಷನ್ | 1 | 4462.00 |
| | ಸುರಂಜನ್ ದಾಸ್ ಜಂಕ್ಷನ್ | 1 | 13194.00 |
| | ವರ್ತೂರು (ಕಗ್ಗದಾಸ ಪುರ) ರಸ್ತೆ ಜಂಕ್ಷನ್ | 1 | 15049.00 |
| | ಹೆಚ್.ಪಿ.ರಸ್ತೆ ಜಂಕ್ಷನ್ | 1 | 2368.00 |
| | ಹೂಡಿ ಮುಖ್ಯರಸ್ತೆ ಜಂಕ್ಷನ್ ( ಮೇಲು ಸೇತುವೆ) | 1 | 12089.00 |
| | ಹೂಡಿ ಮುಖ್ಯರಸ್ತೆ ಜಂಕ್ಷನ್ ( ಅಂಡರ್ ಪಾಸ್) | 1 | 878.00 |
| | ಇ.ಪಿ.ಐ.ಪಿ ಮತ್ತು ಅಗ್ರಹಾರ ರಸ್ತೆ ಜಂಕ್ಷನ್ | 1 | 13168.00 |
| | ಹೋಪ್ ಫಾರಂ ರಸ್ತೆ ಜಂಕ್ಷನ್ | 1 | 2700.00 |
| | ಒಟ್ಟು | 16 | 115475.00 |
| | **ಏಳು ಕಾರಿಡಾರ್‌ಗಳಿಂದ ಒಟ್ಟು** | **45** | **246170.38 ಚ.ಮೀ.** |

ಮೇಲ್ಕಂಡ ಯೋಜನೆಗಳನ್ನು ಅನುಷ್ಠಾನಗೊಳಿಸಲು ಈ ಹಿಂದೆ ಟಿ.ಡಿ.ಆರ್. ಅನ್ವಯ ಭೂಸ್ವಾಧೀನ ಪಡಿಸಿಕೊಳ್ಳಲು ಉದ್ದೇಶಿಸಿ ಅಧಿಸೂಚನೆಗಳನ್ನು ಹೊರಡಿಸಲಾಗಿತ್ತು. ಆದರೆ ಸಾರ್ವಜನಿಕರು ಟಿ.ಡಿ.ಆರ್. ಮುಖೇನ ಭೂಸ್ವಾಧೀನ ಪ್ರಕ್ರಿಯೆಗೆ ಅನೇಕ ಸ್ವತ್ತಿನ ಮಾಲೀಕರು ವಿರೋಧವನ್ನು ವ್ಯಕ್ತಪಡಿಸಿರುತ್ತಾರೆ. ಅಲ್ಲದೆ ಟಿ.ಡಿ.ಆರ್. ನಿಯಮಾವಳಿಯ ಅನ್ವಯ ಭೂಸ್ವಾಧೀನ ಪಡಿಸಿಕೊಳ್ಳಲು ಕಾನೂನಿನ ಅಡಿಯಲ್ಲಿ ಯಾವುದೇ ವ್ಯಕ್ತಿಯನ್ನು ಒತ್ತಾಯಿಸುವಂತಿಲ್ಲ. ಈಗಾಗಲೇ ಟಿ.ಡಿ.ಆರ್. ಮುಖೇನ ಭೂಸ್ವಾಧೀನ ಪ್ರಕ್ರಿಯೆಗೆ ಅಧಿಸೂಚನೆ ಹೊರಡಿಸಿರುವುದರಿಂದ ಸಾರ್ವಜನಿಕರು ಟಿ.ಡಿ.ಆರ್. ಮುಖೇನ ಭೂಸ್ವಾಧೀನ ಪ್ರಕ್ರಿಯೆಗೆ ಮುಂದೆ ಬರಲು ನಿಗಧಿತ 15 ದಿನಗಳ ಕಾಲಾವಕಾಶವನ್ನು ನೀಡಿ ತದನಂತರ ಸಾರ್ವಜನಿಕರಿಂದ ಸಾಕಷ್ಟು ಉತ್ತೇಜನ ದೊರಕದಿದ್ದಲ್ಲಿ ಭೂಸ್ವಾಧೀನ ಕಾಯ್ದೆ 1894ರ ಸೆಕ್ಷನ್ 23ರಲ್ಲಿ ನಿಗಧಿಪಡಿಸಲಾದ ದರಗಳ ಅನ್ವಯ ಪರಿಹಾರ ನೀಡಿ ಖಾಸಗಿ ಸ್ವತ್ತುಗಳನ್ನು ಭೂಸ್ವಾಧೀನ ಪಡಿಸಿಕೊಳ್ಳಬೇಕೆಂಬ ಅಂಶವನ್ನು ಗಮನಿಸಬೇಕಾಗಿರುತ್ತದೆ.

ಮೇಲ್ಕಂಡ ಯೋಜನೆಗಳನ್ನು ಕಾಲಮಿತಿಯೊಳಗೆ ಅನುಷ್ಠಾನಗೊಳಿಸಬೇಕಾಗಿದ್ದಲ್ಲಿ ಕಾಮಗಾರಿ ಟೆಂಡರ್ ಪ್ರಕ್ರಿಯೆಗಳು ಪೂರ್ಣಗೊಂಡು ಗುತ್ತಿಗೆದಾರರಿಗೆ ಕಾರ್ಯಾದೇಶ ನೀಡುವ ಮುನ್ನ ಎಲ್ಲಾ ಭೂಸ್ವಾಧೀನ ಪ್ರಕ್ರಿಯೆಗಳನ್ನು ಪೂರ್ಣಗೊಳಿಸಿ Encumbrance ಮತ್ತು ಮೊಕದ್ದಮೆ ಮುಕ್ತ ಸ್ವತ್ತಾಗಿ ಗುತ್ತಿಗೆದಾರರಿಗೆ ಯೋಜನಾ ಪ್ರದೇಶವನ್ನು ಹಸ್ತಾಂತರ ಮಾಡಿದಲ್ಲಿ ನಿಗಧಿತ ವೇಳೆಯೊಳಗೆ ಯೋಜನೆಗಳನ್ನು ಅನುಷ್ಠಾನಗೊಳಿಸಬಹುದು. ಇಲ್ಲದಿದ್ದಲ್ಲಿ ಭೂಸ್ವಾಧೀನ ಪ್ರಕ್ರಿಯೆ ವಿಳಂಬದಿಂದ ಗುತ್ತಿಗೆದಾರರು ಕಾಮಗಾರಿಗಳ ಅನುಷ್ಠಾನಕ್ಕೆ ಆಗಿರುವ ಅಡಚಣೆ, ಕಾಲವಿಳಂಬದ ಬಗ್ಗೆ ಹೆಚ್ಚಿನ ಮೊತ್ತವನ್ನು ಕೋರಿರುವ ಉದಾಹರಣೆಗಳು ಈಗಾಗಲೇ ನಮ್ಮ ಮುಂದೆ ಇದ್ದು, ಇದರಿಂದ ಯೋಜನೆಯು ನಿಗಧಿತ ಅವಧಿಯಲ್ಲಿ ಪೂರ್ಣಗೊಳ್ಳದೆ ಸಾರ್ವಜನಿಕರಿಂದ ಸಾಕಷ್ಟು ದೂಷಣೆಗಳು ಬಂದಿರುತ್ತವೆ.

ಈ ಎಲ್ಲಾ ಅಂಶಗಳ ಹಿನ್ನೆಲೆಯಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ 2011-12ನೇ ಸಾಲಿನ ಆಯವ್ಯಯ ಅಂದಾಜಿನಲ್ಲಿ ಪ್ರಸ್ತಾಪಿಸಿರುವ 7 ಪ್ರಮುಖ ಸಿಗ್ನಲ್ ಮುಕ್ತ ಕಾರಿಡಾರ್‌ಗಳಲ್ಲಿ ಗ್ರೇಟ್ ಸೆಪರೇಟರ್‌ಗಳನ್ನು ನಿರ್ಮಿಸಲು ಬೇಕಾಗಿರುವ ಸ್ವತ್ತುಗಳನ್ನು ಭೂಸ್ವಾಧೀನ ಪಡಿಸಿಕೊಳ್ಳಲು ಸದರಿ ಕಾರಿಡಾರ್‌ಗಳನ್ನು ಟಿ.ಡಿ.ಆರ್. ಮುಖೇನ ಭೂಸ್ವಾಧೀನ ಪಡಿಸಿಕೊಳ್ಳಲು ಕಾಲಾವಕಾಶಗಳನ್ನು ನೀಡಿ ಟಿ.ಡಿ.ಆರ್. ಮುಖೇನವೇ ಭೂಸ್ವಾಧೀನ ಪ್ರಕ್ರಿಯೆಗೆ ಒತ್ತುಕೊಟ್ಟು ಬೇಕಾಗಿರುವ ಸ್ವತ್ತುಗಳನ್ನು ಪಡೆದುಕೊಳ್ಳಲು ಕ್ರಮವಹಿಸಲಾಗುವುದು. ಈ ಅವಧಿಯಲ್ಲಿಯೂ ಸಹ ಟಿ.ಡಿ.ಆರ್.ಗೆ ಸಾರ್ವಜನಿಕರಿಂದ ಯಾವುದೇ ಸ್ಪಂದನ/ಒಪ್ಪಿಗೆ ಸಿಗದೇ ಇದ್ದ ಪಕ್ಷದಲ್ಲಿ ಕಾಮಗಾರಿಗಳನ್ನು ನಿಗಧಿತ ಅವಧಿಯೊಳಗೆ ಪೂರ್ಣಗೊಳಿಸಲು ಹಾಗೂ ಸಾರ್ವಜನಿಕರ ಅನಗತ್ಯ ತೊಂದರೆಗಳನ್ನು ನಿವಾರಿಸಲು ಮೇಲ್ಕಂಡ ಸ್ವತ್ತುಗಳನ್ನು 1894ರ ಭೂಸ್ವಾಧೀನ ಕಾಯ್ದೆ ಸೆಕ್ಷನ್ 23ರ ಅನ್ವಯ ಭೂಸ್ವಾಧೀನವನ್ನು ಪ್ರತಿ ಜಂಕ್ಷನ್‌ವರೆಗೆ ಪ್ರಾಮುಖ್ಯತೆ ಮೇರೆಗೆ ಹಂತ ಹಂತವಾಗಿ

ಸ್ವತ್ತುಗಳನ್ನು ವಶಪಡಿಸಿಕೊಂಡು ಹಾಗೂ ಅದಕ್ಕೆ ತಗಲುವ ಭೂಪರಿಹಾರ ಹಾಗೂ ಇತರೆ ವೆಚ್ಚಗಳಿಗೆ ಪಾಲಿಕೆಯ ಆಯವ್ಯಯದಲ್ಲಿ ಮೀಸಲಿಡುವ ಅನುದಾನದಿಂದ ಭರಿಸುವ ಬಗ್ಗೆ ಆಯುಕ್ತರಿಗೆ ಅಧಿಕಾರ ನೀಡಲು ಅನುಮೋದನೆಯನ್ನು ಕೋರಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ, ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ, ನಗರ ಯೋಜನಾ ಸ್ಥಾಯಿ ಸಮಿತಿ ಮತ್ತು ಪಾಲಿಕೆ ಸಭೆಯ ಮುಂದೆ ಅನುಮೋದನೆಗೆ ಮಂಡಿಸಿರುವ ಮಾನ್ಯ ಆಯುಕ್ತರ ಟಿಪ್ಪಣಿಯನ್ನು ಒಪ್ಪಿರುವ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ದಿನಾಂಕ : 08-03-2012ರ ನಿರ್ಣಯ ಹಾಗೂ ತಾ॥.14.02.2012ರ ಆಯುಕ್ತರ ಟಿಪ್ಪಣಿ ಒಪ್ಪಲಾಗಿರುವ ನಗರ ಯೋಜನಾ ಸ್ಥಾಯಿ ಸಮಿತಿಯ ದಿನಾಂಕ : 12-04-2012ರ ನಿರ್ಣಯ.

**-ಮುಂದೂಡಿದೆ-**

## ***10]. ವಿಷಯದ ಸಂಖ್ಯೆ :-ತೆಆಸ್ಥಾಸ/57/2012-13***

ಆಯುಕ್ತರ ಟಿಪ್ಪಣಿ ಸಂಖ್ಯೆ : ಎಲ್‌ಎಕ್ಯೂ/ಸಿಆರ್/20/2011-12, ದಿನಾಂಕ : 30-03-2012 ರಲ್ಲಿ ವಿವರಿಸಿರುವಂತೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವಾರ್ಡ್ ನಂ. 129, ಜ್ಞಾನಭಾರತಿ ವ್ಯಾಪ್ತಿಯಲ್ಲಿ ಬರುವ ಗೋವಿಂದರಾಜ ವೃತ್ತದಿಂದ ಮಲ್ಲತ್ತಹಳ್ಳಿ ಕೆರೆಗೆ ಸಂಪರ್ಕ ಕಲ್ಪಿಸುವ ರಸ್ತೆಯು ಹಾಲಿ 20 ಅಡಿ ಅಗಲದ ಕಚ್ಚಾ ರಸ್ತೆಯಾಗಿದ್ದು, ಬೆಂಗಳೂರು ಅಭಿವೃದ್ಧಿ

ಪ್ರಾಧಿಕಾರದಿಂದ ಅಭಿವೃದ್ಧಿಪಡಿಸಲಾಗುತ್ತಿರುವ ಮಲ್ಲತ್ತಹಳ್ಳಿ ಕೆರೆಗೆ ಹೆಚ್ಚಿನ ಸಂಖ್ಯೆಯಲ್ಲಿ ಸಾರ್ವಜನಿಕರು ಭೇಟಿ ನೀಡುವುದರಿಂದ ಸದರಿ ರಸ್ತೆಯನ್ನು 60 ಅಡಿ ಅಗಲಕ್ಕೆ ವಿಸ್ತರಿಸಿ ರಸ್ತೆ ಅಭಿವೃದ್ಧಿಪಡಿಸುವುದು ಅವಶ್ಯಕವಾಗಿದೆ ಎಂದು ಹಾಗೂ ಈ ಸಂಬಂಧ ಗಿಡದಕೋನೇನಹಳ್ಳಿ ಗ್ರಾಮದ ಸರ್ವೆ ನಂ. 5 ರಲ್ಲಿನ ಸುಮಾರು 45,540 ಚ.ಅಡಿ ಪ್ರದೇಶವನ್ನು ಭೂಸ್ವಾಧೀನಪಡಿಸಿಕೊಳ್ಳಲು (1) ಸಹಾಯಕ ಕಾರ್ಯಪಾಲಕ ಅಭಿಯಂತರರು, ರಾಜರಾಜೇಶ್ವರಿನಗರ ವಲಯ, (2) ಕಾರ್ಯಪಾಲಕ ಅಭಿಯಂತರರು ರಾಜರಾಜೇಶ್ವರಿನಗರ ವಲಯ ರವರು ಪ್ರಸ್ತಾವನೆ ಸಲ್ಲಿಸಿದ್ದು, ಸದರಿ ಪ್ರಸ್ತಾವನೆಯನ್ನು ಮುಖ್ಯ ಅಭಿಯಂತರರು, ರಾಜರಾಜೇಶ್ವರಿ ನಗರ ವಲಯ ಮತ್ತು ಅಪರ ಆಯುಕ್ತರು, ರಾಜರಾಜೇಶ್ವರಿ ನಗರ ವಲಯ ರವರು ಶಿಫಾರಸ್ಸು ಮಾಡಿರುತ್ತಾರೆ.

ಭೂಸ್ವಾಧೀನ ಪ್ರಸ್ತಾವನೆಯೊಂದಿಗೆ ಸಲ್ಲಿಸಲಾಗಿರುವ ಭೂಸ್ವಾಧೀನ ಪ್ರಸ್ತಾಪಿತ ಆಸ್ತಿಗಳ ವಿವರ, ವ್ಯಾಲುಯೇಷನ್ ತಃಖ್ತೆ, ನಮೂನೆ ಎ ಮತ್ತು ಡಿ, ಮತ್ತು ಭೂಮಾಪಕರು ಸದರಿ ಪ್ರದೇಶದ ಅಳತೆ ಮಾಡಿ ತಯಾರಿಸಿರುವ ನಕ್ಷೆಯನ್ನು ಪರಿಶೀಲಿಸಲಾಗಿದೆ. ಅದರಂತೆ, ಭೂಸ್ವಾಧೀನಕ್ಕೆ ಪ್ರಸ್ತಾಪಿಸಿರುವ ಜಮೀನು ಬೆಂಗಳೂರು ಉತ್ತರ ತಾಲ್ಲೂಕು, ಯಶವಂತರಪುರ ಹೋಬಳಿ, ಗಿಡದಕೊನೇನಹಳ್ಳಿ ಗ್ರಾಮದ ಸರ್ವೆ 5 ರ ಪೈಕಿ ಜಮೀನಾಗಿದ್ದು, ಇದರಲ್ಲಿನ ಒಟ್ಟು 6 ಎಕರೆ–7 ಗುಂಟೆ ವಿಸ್ತೀರ್ಣದಲ್ಲಿ (759 x 60)= 45,540 ಚದರ ಅಡಿ ವಿಸ್ತೀರ್ಣವನ್ನು ಭೂಸ್ವಾಧೀನಪಡಿಸಿಕೊಳ್ಳಲು ಪ್ರಸ್ತಾಪಿಸಲಾಗಿದೆ. 2010–2011ನೇ ಸಾಲಿನ ಪಹಣಿ ಪತ್ರಿಕೆ (RTC) ಯನ್ನು ಪರಿಶೀಲಿಸಲಾಗಿ, ಸದರಿ ಜಮೀನುಗಳ/ಆಸ್ತಿಗಳ ವಿವರ ಈ ಕೆಳಕಂಡಂತೆ ಇರುತ್ತದೆ.

| ಸರ್ವೆ ನಂ. | ಒಟ್ಟು ವಿಸ್ತೀರ್ಣ ಎ–ಗುಂ | ಆರ್.ಟಿ.ಸಿ.ಯಂತೆ ಖಾತೆದಾರರ / ಅನುಭವದಾರರ ಹೆಸರು | ಭೂಸ್ವಾಧೀನಕ್ಕೆ ಪ್ರಸ್ತಾಪಿಸಿರುವ ವಿಸ್ತೀರ್ಣ (ಚ.ಅ.ಗಳಲ್ಲಿ) | ಚಕ್ಕುಬಂದಿ | | | |
|---|---|---|---|---|---|---|---|
| | | | | ಪೂರ್ವ | ಪಶ್ಚಿಮ | ಉತ್ತರ | ದಕ್ಷಿಣ |
| 5 | 6–07 | ಎಂ.ಸಿದ್ದಪ್ಪ ಬಿನ್ ಲೇಟ್ ಮಾರಪ್ಪ, ರಾಜಣ್ಣ ಬಿನ್ ಲೇಟ್ ಮಾರಪ್ಪ, ಚಂದ್ರಮತಿ ಕೋಂ ಚಂದ್ರೇಗೌಡ, ಮಧುಸೂಧನ್, ಗಂಗಮ್ಮ, ರಮೇಶ್ ರೇಖಾ ಬಿನ್ ನಾಗರಾಜ್, ಟಿ.ಜಿ.ರಂಗಶಾಮಯ್ಯ, ಟಿ.ಆರ್.ಚಂದ್ರಶೇಖರಯ್ಯ, ಎಸ್ ಮಂಜುಳ ಬಿನ್ ಸಿದ್ದಪ್ಪ, | 45,540 (759 x 60) | ಸ.ನಂ.5 ರ ಉಳಿಕೆ | ಡಿ–ಗ್ರೂಪ್ ನೌಕರರ ಬಡಾವಣೆ | ರಸ್ತೆ | ಮಲ್ಲತ್ತಹಳ್ಳಿ ಕೆರೆ ಜಾಗ |

ಭೂಸ್ವಾಧೀನಪಡಿಸಿಕೊಳ್ಳಲು ಇಚ್ಛಿಸಿರುವ ಜಾಗವು ಕೃಷಿ ಜಮೀನಾಗಿದ್ದು, ಸದರಿ ಜಾಗದಲ್ಲಿ 3 ತಾತ್ಕಾಲಿಕ ಷೆಡ್‌ಗಳು ಇರುವುದಾಗಿ ಕಾಮಗಾರಿ ಇಲಾಖೆಯಿಂದ ವರದಿ ನೀಡಲಾಗಿದೆ. ಈ ಜಮೀನಿಗೆ ಭೂಪರಿವರ್ತನೆ ಆದೇಶವಾಗಿರುವ ಬಗ್ಗೆಯಾಗಲೀ, ಹಿಂದಿನ ನಗರಸಭೆಯಲ್ಲಾಗಲೀ ಅಥವಾ ಹಾಲಿ ಪಾಲಿಕೆಯಲ್ಲಾಗಲೀ ಖಾತೆ ನೋಂದಾವಣೆಯಾಗಿರುವ ಬಗ್ಗೆ ಯಾವುದೇ ದಾಖಲೆ ಸಲ್ಲಿಸಿರುವುದಿಲ್ಲ. ಲಭ್ಯ ಆರ್.ಟಿ.ಸಿ.ದಾಖಲೆ ಮತ್ತು ಮ್ಯುಟೇಶನ್ ಪ್ರತಿಗಳಲ್ಲಿ ಕಂಡುಬಂದಂತೆ ಗಿಡ್ಡದಕೋನೇನಹಳ್ಳಿ ಗ್ರಾಮದ ಸರ್ವೆ 5 ರಲ್ಲಿ ಒಟ್ಟು 6 ಎಕರೆ–7 ಗುಂಟೆ ವಿಸ್ತೀರ್ಣದಲ್ಲಿ 7 ಗುಂಟೆ ಖರಾಬು ಕಳೆದು ಜಾತಾ 6 ಎಕರೆ ಜಮೀನಿನಲ್ಲಿ ಎಂ.ಸಿದ್ದಪ್ಪ ಬಿನ್ ಲೇಟ್ ಮಾರಪ್ಪ ಮತ್ತು ರಾಜಣ್ಣ ಬಿನ್ ಲೇಟ್ ಮಾರಪ್ಪ ನವರಿಗೆ ಜಂಟಿಯಾಗಿ 2 ಎಕರೆ 33 ಗುಂಟೆ, ಎಂ.ಸಿದ್ದಪ್ಪ ಬಿನ್ ಲೇಟ್ ಮಾರಪ್ಪ ರವರಿಗೆ 14 ಗುಂಟೆ ಮತ್ತು 37 1/2 ಗುಂಟೆ, ರಾಜಣ್ಣ ಬಿನ್ ಲೇಟ್ ಮಾರಪ್ಪ

ನವರಿಗೆ 25 1/2 ಗುಂಟೆ, ಟಿ. ಜಿ. ರಂಗಶಾಮಯ್ಯ ಮತ್ತು ಟಿ.ಆರ್.ಚಂದ್ರಶೇಖರಯ್ಯ ರವರಿಗೆ 1 ಎಕರೆ, ಎಸ್ ಮಂಜುಳ ಬಿನ್ ಸಿದ್ದಪ್ಪ ರವರಿಗೆ 10 ಗುಂಟೆ ಜಮೀನಿಗೆ ಕಂದಾಯ

ಖಾತೆ ದಾಖಲಾಗಿರುತ್ತದೆ. ಭೂಸ್ವಾಧೀನ ಪ್ರಸ್ತಾವನೆಯಲ್ಲಿ ಉಲ್ಲೇಖಿಸಲಾಗಿರುವ ಆಸ್ತಿಗಳ ಖಾತೆದಾರರ/ಅನುಭವದಾರರ ಪಟ್ಟಿಯಲ್ಲಿಮೇಲ್ಕಂಡ ಖಾತೆದಾರರ ಜೊತೆ ಚಂದ್ರಮತಿ ಕೋಂ ಚಂದ್ರೇಗೌಡ, ಮಧುಸೂಧನ್, ಗಂಗಮ್ಮ, ರಮೇಶ್, ರೇಖಾ ಬಿನ್ ನಾಗರಾಜ್ ರವರ ಹೆಸರುಗಳನ್ನು ಸಹ ಉಲ್ಲೇಖಿಸಲಾಗಿದೆ. ಆದರೆ ಈ ಜಮೀನಿನಲ್ಲಿ ಅವರಿಗಿರುವ ಹಕ್ಕಿನ ಬಗ್ಗೆ ಯಾವುದೇ ದಾಖಲೆ ಇರುವುದಿಲ್ಲ. ಗಿಡದಕೊನೇನಹಳ್ಳಿ ಸರ್ವೆ ನಂ.5 ರಲ್ಲಿರುವ ಒಟ್ಟು 6 ಎಕರೆ 7 ಗುಂಟೆ ಭೂಸ್ವಾಧೀನಕ್ಕೆ ಪ್ರಸ್ತಾಪಿಸಿರುವ 45,540 ಚ.ಅ. ಜಾಗದ ಹಕ್ಕು ಯಾರ ಯಾರ ಹಕ್ಕುದಾಖಲೆಯಲ್ಲಿರುತ್ತದೆ ಎಂಬ ಬಗ್ಗೆ ಸ್ಪಷ್ಟ ಮಾಹಿತಿ ಇರುವುದಿಲ್ಲ. ಹಾಗೂ ಈ ಜಮೀನಿನಲ್ಲಿ 7 ಗುಂಟೆ ಖರಾಬು ಇದ್ದು, ಭೂಸ್ವಾಧೀನ ಪ್ರಸ್ತಾಪಿತ ಜಾಗದಲ್ಲಿ ಖರಾಬು ಜಾಗ (ಉದಾ: ಕಾಲುದಾರಿ, ಬಂಡಿದಾರಿ, ಹಳ್ಳ ಇತ್ಯಾದಿ) ಸೇರಿದೆಯೇ/ಇಲ್ಲವೇ ಎಂಬ ಬಗ್ಗೆ ಸಹ ಮಾಹಿತಿ ಇರುವುದಿಲ್ಲ. ಭೂಸ್ವಾಧೀನ ಪ್ರಸ್ತಾಪಿತ ಜಾಗದಲ್ಲಿ ಖರಾಬು ಇದ್ದಲ್ಲಿ ಅದನ್ನು ಕಳೆದು ಉಳಿಕೆ ಜಾಗವನ್ನು ಮಾತ್ರ ಭೂಸ್ವಾಧೀನಪಡಿಸಿಕೊಳ್ಳಬೇಕಾಗುತ್ತದೆ. ಈ ಬಗ್ಗೆ ಗ್ರಾಮ ನಕಾಶೆ/ ಟಿಪ್ಪಣಿ/ ಖರಾಬು ಉತಾರು ಗಳನ್ನು ಪಡೆದು ಪರಿಶೀಲಿಸಬೇಕಾಗುತ್ತದೆ. ಅಲ್ಲದೆ ಪ್ರಸ್ತಾಪಿತ ಜಾಗದಲ್ಲಿ ಮೂರು ಷೆಡ್‌ಗಳು ಇದ್ದು, ಇವು ಸಿದ್ದಪ್ಪ ಬಿನ್ ಲೇಟ್ ಮಾರಪ್ಪ, ಮಧುಸೂದನ್ ಮತ್ತು ಗಂಗಮ್ಮ ರವರು ನಿರ್ಮಾಣ ಮಾಡಿರುತ್ತಾರೆ ಎಂದು ವರದಿ ಸಲ್ಲಿಸಲಾಗಿದೆ. ಆದರೆ ಈ ಬಗ್ಗೆ ಯಾವುದೇ ಪೂರಕ ದಾಖಲೆಗಳು ಕಂಡುಬರುವುದಿಲ್ಲ. ಭೂಸ್ವಾಧೀನ ಕಾಯ್ದೆಯ ಕಲಂ 5(ಎ) ವಿಚಾರಣೆಯಲ್ಲಿ ಭೂಸ್ವಾಧೀನ ಪ್ರಸ್ತಾಪಿತ ಜಮೀನಿನ ಹಕ್ಕುದಾಖಲೆಗಳನ್ನು ಪರಿಶೀಲಿಸಿ ಅಂತಿಮಗೊಳಿಸುವ ಷರತ್ತಿಗೆ ಒಳಪಟ್ಟು, ಗಿಡದಕೊನೇನಹಳ್ಳಿ ಗ್ರಾಮದ ಸರ್ವೆ ನಂ. 5 ರಲ್ಲಿನ 45,540 ಚ.ಅ.ಜಾಗವನ್ನು ಭೂಸ್ವಾಧೀನಪಡಿಸಿಕೊಳ್ಳಬಹುದಾಗಿದೆ ಎಂದು ಅಭಿಪ್ರಾಯಪಡಲಾಗಿದೆ.

ದಿನಾಂಕ: 21–09–2011 ರ ಕರ್ನಾಟಕ ಸರ್ಕಾರದ ನೋಂದಣಿ ಮತ್ತು ಮುದ್ರಾಂಕ ಇಲಾಖೆಯ ಅಧಿಸೂಚನೆ ಸಂಖ್ಯೆ: ಸಿವಿಸಿ–19/2010–11 ರ ಸ್ಥಿರಾಸ್ತಿಗಳ ಅಂದಾಜು ಮಾರುಕಟ್ಟೆ ಮಾರ್ಗಸೂಚಿ ದರದನ್ವಯ ಗಿಡದಕೊನೇನಹಳ್ಳಿ ಗ್ರಾಮದಲ್ಲಿನ ಕೃಷಿ ಜಮಿನಿಗೆ ಪ್ರತಿ ಎಕರೆಗೆ 100 ಲಕ್ಷ ರೂಗಳನ್ನು ನಿಗದಿಮಾಡಲಾಗಿದ್ದು, ಅದರಂತೆ ಭೂಸ್ವಾಧೀನ ಸ್ವತ್ತಿಗೆ ತಗಲುವ ಭೂಪರಿಹಾರ ಮತ್ತು ಇತರೆ ವೆಚ್ಚಗಳನ್ನು ಈ ಕೆಳಕಂಡಂತೆ ಲೆಕ್ಕಾಚಾರ ಮಾಡಲಾಗಿದೆ.

**"ಭೂ ಪರಿಹಾರ ಮತ್ತು ಇತರೆ ವೆಚ್ಚಗಳು"**

| ಕ್ರ ಸಂ | ವಿವರಣೆ | ಮೊಬಲಗು(ರೂ.) |
|---|---|---|
| 1 | ಭೂಸ್ವಾಧೀನಪಡಿಸಿಕೊಳ್ಳಲು ಉದ್ದೇಶಿಸಿರುವ 45,540 ಚ.ಅ. ವಿಸ್ತೀರ್ಣಕ್ಕೆ ಮಾರುಕಟ್ಟೆ ಬೆಲೆ ಎಕರೆ ಒಂದಕ್ಕೆ 100 ಲಕ್ಷ ರೂಗಳಂತೆ ಚ.ಅ.ಗೆ 230/– | 1,04,74,200/– |
| 2 | **3 ಷೆಡ್‌ಗಳ ಮೌಲ್ಯ (ಕಾಮಗಾರಿ ಇಲಾಖೆಯ ವರದಿಯಂತೆ)** | 7,80,000/– |
| | ಒಟ್ಟು(1+2) | 1,12,54,200/– |
| 3 | 1894 ರ ಭೂಸ್ವಾಧೀನ ಕಾಯ್ದೆಯ ಕಲಂ.23(1)(ಎ) ರ ಅನ್ವಯ ಮಾರುಕಟ್ಟೆ ಬೆಲೆಯ ಮೇಲೆ ಶೇಕಡಾ 12 ರಂತೆ ಹೆಚ್ಚುವರಿ ಮಾರುಕಟ್ಟೆ ಬೆಲೆ (ಒಂದು ವರ್ಷಕ್ಕೆ) | 13,50,504/– |
| | 1894ರ ಭೂಸ್ವಾಧೀನ ಕಾಯ್ದೆಯ ಕಲಂ.23(2) ರ ಅನ್ವಯ ಶೇಕಡಾ 30 ರಂತೆ ಶಾಸನಬದ್ಧ ಭತ್ಯೆ | 33,76,260/– |
| | (1+2+3) | 1,59,80,964/– |
| 4 | ಸಿಬ್ಬಂದಿ ವೆಚ್ಚ ಶೇಕಡಾ 10 ರಷ್ಟು | ಕೈಬಿಡಲಾಗಿದೆ |
| 5 | ಆಡಿಟ್ ವೆಚ್ಚ ಶೇಕಡಾ 1 ರಷ್ಟು | ಕೈಬಿಡಲಾಗಿದೆ |
| 6 | ಪ್ರಕಟಣಾ ವೆಚ್ಚ | 2,00,000/– |
| | ಒಟ್ಟು | 1,61,80,964/– |

**ಷರಾ:** ದಿನಾಂಕ: 5–9–1963 ರ ಸರ್ಕಾರದ ಅಧಿಸೂಚನೆ ಸಂಖ್ಯೆ: ಈಆ 126 RFC 60, ರಂತೆ ಯಾವುದೇ ಸ್ಥಳೀಯ ಸಂಸ್ಥೆಗೆ ಪೂರ್ಣ ಪ್ರಮಾಣದಲ್ಲಿ ಕಾರ್ಯನಿರ್ವಹಿಸಲು ಭೂಸ್ವಾಧೀನಾಧಿಕಾರಿಯ ನೇಮಕವಾಗಿದ್ದು, ಸದರಿ ಕಚೇರಿಯ ಸಿಬ್ಬಂದಿ ವೆಚ್ಚವನ್ನು ಆ ಸ್ಥಳೀಯ ಸಂಸ್ಥೆಯೇ ಭರಿಸುತ್ತಿದ್ದಲ್ಲಿ, ಮೇಲಿನ ಕ್ರಮ ಸಂಖ್ಯೆ 4 ಮತ್ತು 5 ರಲ್ಲಿನ ವೆಚ್ಚಗಳನ್ನು ವಿಧಿಸುವ ಅವಶ್ಯಕತೆ ಇಲ್ಲವೆಂಬ ಆದೇಶವಿರುವುದರಿಂದ, ಈ ಎರಡೂ ವೆಚ್ಚಗಳನ್ನು ಒಟ್ಟು ಭೂಸ್ವಾಧೀನ ಪರಿಹಾರ ಲೆಕ್ಕಾಚಾರದಿಂದ ಕೈಬಿಡಲಾಗಿದೆ.

**(ಒಂದು ಕೋಟಿ ಅರವತ್ತೊಂದು ಲಕ್ಷದ ಎಂಬತ್ತು ಸಾವಿರದ ಒಂಭೈನೂರ ಅರವತ್ನಾಲ್ಕು ರೂಗಳು ಮಾತ್ರ)**

ಈ ಪ್ರಕರಣದಲ್ಲಿ ಸ್ಥಳೀಯ ನಿವಾಸಿಗಳು ಸದರಿ ರಸ್ತೆ ನಿರ್ಮಾಣ ಕೋರಿ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿ ದಾಖಲಿಸಿದ್ದು(ನಂ.15868/2011), ಭೂಸ್ವಾಧೀನ ಪ್ರಕ್ರಿಯೆಯನ್ನು ಶೀಘ್ರವಾಗಿ ಕೈಗೊಳ್ಳುವ ಅವಶ್ಯಕತೆ ಇರುತ್ತದೆ. ಆದ್ದರಿಂದ ಈ ಮೇಲ್ಕಂಡ ಸ್ವತ್ತುಗಳನ್ನು ಭೂಸ್ವಾಧೀನಪಡಿಸಿಕೊಳ್ಳಲು ಅಂದಾಜು ಭೂಸ್ವಾಧೀನ ವೆಚ್ಚ ರೂ. **1,61,80,964/– (ಒಂದು ಕೋಟಿ ಅರವತ್ತೊಂದು ಲಕ್ಷದ ಎಂಬತ್ತು ಸಾವಿರದ ಒಂಭೈನೂರ ಅರವತ್ನಾಲ್ಕು ರೂಗಳು ಮಾತ್ರ)** ಗಳಾಗಲಿದ್ದು, ಈ ಪ್ರಕರಣದ ಸ್ವತ್ತುಗಳನ್ನು 1894ರ ಭೂಸ್ವಾಧೀನ ಕಾಯ್ದೆಯನ್ವಯ ಭೂಸ್ವಾಧೀನಪಡಿಸಿಕೊಂಡು ಭೂ–ಪರಿಹಾರ ಮತ್ತು ಇತರೆ ವೆಚ್ಚಗಳನ್ನು 2011–12 ನೇ ಸಾಲಿನ ಆಯವ್ಯಯದಲ್ಲಿ ಭರಿಸುವ ಬಗ್ಗೆ ಸೂಕ್ತ ತೀರ್ಮಾನವನ್ನು ಕೈಗೊಳ್ಳಲು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಪಾಲಿಕೆಯ ಸಾಮನ್ಯ ಸಭೆ ಮುಂದೆ ಮಂಡಿಸಲಾದ ಟಿಪ್ಪಣಿ ಮೇರೆಗೆ, ತಾ॥. 30–03–2012ರ ಆಯುಕ್ತರ ಟಿಪ್ಪಣಿ ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ : 12.04.2012ರ ನಿರ್ಣಯ.

**–ಮುಂದೂಡಿದೆ–**

## *11]. ವಿಷಯದ ಸಂಖ್ಯೆ :–ತೆಆಸ್ಥಾಸ/58/2012–13*

ಆಯುಕ್ತರ ಟಿಪ್ಪಣಿ ಸಂಖ್ಯೆ : ಎ3(2)/ಪಿಆರ್/525/11–12, ದಿನಾಂಕ ಃ 28–02–2012 ರಲ್ಲಿ ವಿವರಿಸಿರುವಂತೆ, ಶ್ರೀ.ಮಹಮದ್ ಷರೀಪ್, ಓ.ಪಿ.ಹೆಚ್.ರಸ್ತೆ, ವಾರ್ಡ್ ನಂ.91 ರಲ್ಲಿ 9X5 ಅಡಿಗಳ ಜಾಗವನ್ನು ನಾಲಾ ರಸ್ತೆ ಸಿವಿಲ್ ಸ್ಟೇಷನ್ ಇಲ್ಲಿ ಬಂಕ್ ಶಾಫ್ ನಡೆಸಲು 01–11–1962 ರಿಂದ 30–09–1963ರ ವರೆಗೆ 11 ತಿಂಗಳ ಅವಧಿಗೆ ಮಾಸಿಕ ಗುತ್ತಿಗೆ ರೂ.7/– ಗಳಂತೆ ನಿಗದಿಪಡಿಸಿ ಗುತ್ತಿಗೆ ನೀಡಲಾಗಿರುತ್ತದೆ. ತದನಂತರ ಗುತ್ತಿಗೆ ಅವಧಿಯನ್ನು ನವೀಕರಿಸಿರುವುದಿಲ್ಲ. ಗುತ್ತಿಗೆ ಮೊತ್ತವನ್ನು 2003–04ನೇ ಸಾಲಿನ ವರೆಗೆ ಪಾವತಿಸಿರುವುದಾಗಿ ವರದಿ ಮಾಡಿರುತ್ತಾರೆ.

ಸಹ ಕಂದಾಯ ಅಧಿಕಾರಿ (ಶಿವಾಜಿನಗರ) ರವರ ವರದಿಯಂತೆ ಅರ್ಜಿದಾರರು ಗುತ್ತಿಗೆ ಅವಧಿ ನವೀಕರಿಸಲು ಪ್ರಸ್ತಾಪಿಸಿರುವ ಸ್ವತ್ತನ್ನು ಯಾವುದೇ ಉದ್ದೇಶಕ್ಕೆ ಪಾಲಿಕೆಗೆ ಅಗತ್ಯವಿಲ್ಲವೆಂದು ಗುತ್ತಿಗೆ ಅವಧಿಯನ್ನು ಮಾಸಿಕ ರೂ.500/– ರಂತೆ ನಿಗದಿಪಡಿಸಿ ನವೀಕರಿಸಲು ಆಸ್ತಿ ಶಾಖೆಗೆ ಕಡತ ಸಲ್ಲಿಸಿರುತ್ತಾರೆ.

ಪ್ರಸ್ತಾಪಿತ ಸ್ವತ್ತಿನ ಅಳತೆ 9X5=45 ಚದರ ಅಡಿಗಳಾಗಿದ್ದು, ಪ್ರಸಕ್ತ ಮಾರುಕಟ್ಟೆ ದರದಂತೆ ಚದರ ಅಡಿ ಒಂದಕ್ಕೆ ರೂ.2200/– ಗಳಿದ್ದು, ವಾಣಿಜ್ಯಕ್ಕೆ ಶೇ 40% ರಷ್ಟು ಸೇರಿಸಿದ್ದಲ್ಲಿ ಚದರ ಅಡಿ ಒಂದಕ್ಕೆ 3080/– ರೂ ಗಳಾಗುತ್ತದೆ. 45 ಚದರ ಅಡಿಗಳಿಗೆ 1,38,600/– ರೂ. ಗಳಾಗುತ್ತದೆ. ಸ್ವತ್ತಿನ ಒಟ್ಟು ಮೌಲ್ಯದ ಶೇ 10% ರಂತೆ ಪರಿಗಣಿಸಿದ್ದಲ್ಲಿ ವಾರ್ಷಿಕ 13860/– ಮಾಸಿಕ 1155/– ರೂ ಗಳಾಗುತ್ತದೆ. 01–04–2004 ರಿಂದ ಕರಾರು ಪತ್ರ ನೊಂದಾಯಿಸುವ ದಿನಾಂಕದವರೆಗೆ ಹೊಸ ಕರಾರು ನೊಂದಾಯಿಸುವ ದಿನಾಂಕದಿಂದ ಮುಂದಿನ 3 ವರ್ಷಗಳ ಅವಧಿಗೆ ಪ್ರತ್ಯೇಕ ಪ್ರತ್ಯೇಕ ದರ ನಿಗಧಿಪಡಿಸಿ ಗುತ್ತಿಗೆ ಅವಧಿ ನವೀಕರಿಸಲು ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ ಮತ್ತು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಸೂಕ್ತ ನೀರ್ಣಯಕ್ಕಾಗಿ ಮಂಡಿಸಿಲಾದ ಟಿಪ್ಪಣಿ ಮೇರೆಗೆ, ತಾ॥. 28–02–2012ರ ಆಯುಕ್ತರ ಟಿಪ್ಪಣಿ ಒಪ್ಪಲಾಯಿತು, ದರ ನಿಗಧಿಪಡಿಸಲು ತೆರಿಗೆ ಮತ್ತು ಆರ್ಥಿಕ ಸಮಿತಿಗೆ ಶಿಫಾರಸ್ಸು ಮಾಡಲು ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ: 12–04–2012ರ ಟಿಪ್ಪಣಿ.

**–ಮುಂದೂಡಿದೆ–**

## 12]. ವಿಷಯದ ಸಂಖ್ಯೆ :–ತೆಆಸ್ಥಾಸ/59/2012–13

ಆಯುಕ್ತರ ಟಿಪ್ಪಣಿ ಸಂಖ್ಯೆ : ಉ.ಆ(ಆಸ್ತಿ)ಜೆಎಲ್‌ಸಿ/ಪಿಆರ್/16/10–11, ದಿನಾಂಕ : 10–10–2011 ರಲ್ಲಿ ವಿವರಿಸಿರುವಂತೆ ಪೂಜ್ಯ ಮಹಾಪೌರರು ದಿನಾಂಕ:09–07–2010 ರಂದು ಟಿಪ್ಪಣಿ ಮುಖೇನ ಕೋರಿದ್ದರ ಮೇರೆಗೆ ಆಯುಕ್ತರು ಬಿಬಿಎಂಪಿ ರವರು ಕಛೇರಿ ಆದೇಶದ ಸಂಖ್ಯೆ:ಸಆ(ಆಸ್ತಿ)ಜೆಎಲ್‌ಸಿ/16/10–11, ದಿನಾಂಕ:28–07–2010 ರಲ್ಲಿ ನಗರ ಪಾಲಿಕೆಯ ಆಸ್ತಿಗಳ ಗುತ್ತಿಗೆ ಅವಧಿ ಮುಗಿದಿರುವ ಪ್ರಕರಣಗಳಿಗೆ ಸಂಬಂಧಿಸಿದಂತೆ ಸಮಿತಿಯನ್ನು ರಚಿಸಿದ್ದು ಸದರಿ ಸಮಿತಿಯು ಏಪ್ರಿಲ್ 2011 ರಲ್ಲಿ ತನ್ನ ವರದಿಯನ್ನು ಸಲ್ಲಿಸಿರುತ್ತದೆ. ಸದರಿ ವರದಿಯಲ್ಲಿ ಮಾಡಲಾಗಿರುವ ಶಿಫಾರಸ್ಸುಗಳಿಗೆ ಅನುಗುಣವಾಗಿ ಈ ವರೆವಿಗೆ ನಗರ ಪಾಲಿಕೆಯು ತೆಗೆದುಕೊಂಡ ಕ್ರಮದ ಬಗ್ಗೆ ವರದಿ.

| | ಶಿಫಾರಸ್ಸುಗಳು | ಈ ವರೆವಿಗೆ ಕ್ರಮ ತೆಗೆದುಕೊಂಡಿರುವ ಬಗ್ಗೆ ವಿವರ |
|---|---|---|
| 1 | ಗುತ್ತಿಗೆ ನೀಡಲಾಗಿರುವ ಎಲ್ಲಾ ಪ್ರಕರಣಗಳಲ್ಲಿ ಸ್ಥಳ ಪರಿಶೀಲಿಸಿ ಷರತ್ತು ಉಲ್ಲಂಘಿಸಿರುವ ಗುತ್ತಿಗೆಗಳನ್ನು ರದ್ದುಪಡಿಸುವುದು. | ನಗರ ಪಾಲಿಕೆ ವತಿಯಿಂದ ಗುತ್ತಿಗೆಗೆ ನೀಡಲಾಗಿರುವ ಆಸ್ತಿಗಳನ್ನು ಕಾಲಕಾಲಕ್ಕೆ ಸ್ಥಳ ತನಿಖೆ ನಡೆಸಲಾಗುತ್ತಿದ್ದು, ಗುತ್ತಿಗೆ ಷರತ್ತು ಉಲ್ಲಂಘಿಸಿರುವ ಪ್ರಕರಣಗಳನ್ನು ಪತ್ತೆಹಚ್ಚಿ ಗುತ್ತಿಗೆ ರದ್ದುಪಡಿಸಲು ಅವಶ್ಯ ಕ್ರಮ ತೆಗೆದುಕೊಳಲಾಗುತ್ತಿದೆ. ಈ ಬಗ್ಗೆ ವಲಯಾಧಿಕಾರಿಗಳಿಗೆ ಅಗತ್ಯ ಸೂಚನೆ ನೀಡಲಾಗಿರುತ್ತದೆ. ಗುತ್ತಿಗೆ ಷರತ್ತು ಉಲ್ಲಂಘಿಸಿರುವ ಪ್ರಕರಣಗಳಲ್ಲಿ ಕೆಪಿಪಿ ಕಾಯ್ದೆ ಕಲಂ 4 ಮತ್ತು 5ರ ಅಡಿಯಲ್ಲಿ ಕ್ರಮ ತೆಗೆದುಕೊಳ್ಳಲಾಗುತ್ತಿದೆ. ಈ ವರೆವಿಗೆ ಪಶ್ಚಿಮ ವಲಯದ 17, ದಕ್ಷಿಣ ವಲಯದ 10 ಮತ್ತು ಪೂರ್ವ ವಲಯದ 16, ಹೀಗೆ ಒಟ್ಟು ಗುತ್ತಿಗೆಗೆ ನೀಡಿದ 43 ಆಸ್ತಿಗಳನ್ನು ನಗರ ಪಾಲಿಕೆಗೆ ಹಿಂದಕ್ಕೆ ಪಡೆಯಲು ಆದೇಶ ನೀಡಲಾಗಿದೆ. ಇದರ ಅಂದಾಜು ಮೌಲ್ಯ ರೂ.74,64,92,410/– ಗಳಾಗುತ್ತದೆ. |
| 2 | ಗುತ್ತಿಗೆ ನವೀಕರಿಸುವ ಪ್ರಕರಣಗಳಲ್ಲಿ ಗರಿಷ್ಠ ಗುತ್ತಿಗೆ ಮೊತ್ತವನ್ನು ನಿಗಧಿಪಡಿಸಿ ಪಾಲಿಕೆಗೆ ಆರ್ಥಿಕ ಸಂಪನ್ಮೂಲಗಳನ್ನು ಹೆಚ್ಚಿಸುವುದು ಶೈಕ್ಷಣಿಕ, ಸಾಮಾಜಿಕ, ಸಾಂಸ್ಕತಿಕ, ಧಾರ್ಮಿಕ ಮತ್ತು ಕ್ರೀಡಾ ಚಟುವಟಿಕೆಗಳನ್ನು ನಡೆಸಲು ನೀಡಲಾಗಿರುವ ಗುತ್ತಿಗೆ ಮತ್ತು ಆರ್ಥಿಕವಾಗಿ ಹಿಂದುಳಿದವರಿಗೆ ನೀಡಲಾಗುವ ಗುತ್ತಿಗೆಗಳಿಗೆ ರಿಯಾಯತಿ ದರವನ್ನು ನಿಗಧಿಪಡಿಸುವುದು. | ಸರ್ಕಾರವು ತನ್ನ ಆದೇಶದ ಸಂಖ್ಯೆ:ಸಿವಿಸಿ/ಬಿಯುಡಿ/5/2006–07, ದಿನಾಂಕ:17–04–2007 ರಲ್ಲಿ ಬೆಂಗಳೂರು ನಗರ ಜಿಲ್ಲಾ ವ್ಯಾಪ್ತಿಯಲ್ಲಿರುವ ಸ್ಥಿರಾಸ್ತಿಗಳು ಮತ್ತು ಕಟ್ಟಡಗಳ ಅಂದಾಜು ಮಾರುಕಟ್ಟೆ ದರ ಪರಿಷ್ಕರಣೆ ಮಾಡಿರುತ್ತದೆ. ಇದನ್ನು ಅನುಸರಿಸಿ ನಗರ ಪಾಲಿಕೆಯ ಆಸ್ತಿಯನ್ನು ನವೀಕರಿಸುವ /ಕ್ರಯಕ್ಕೆ ನೀಡುವ ಪ್ರಕರಣಗಳಲ್ಲಿ ಗುತ್ತಿಗೆ ದರ /ಮಾರಾಟ ಮೌಲ್ಯ ನಿರ್ಧರಿಸಲಾಗುತ್ತಿದೆ. ಇದರಿಂದ ನಗರ ಪಾಲಿಕೆಯ ಆರ್ಥಿಕ ಸಂಪನ್ಮೂಲಗಳನ್ನು ಹೆಚ್ಚಿಸಲಾಗುತ್ತಿದೆ. ಶೈಕ್ಷಣಿಕ, ಸಾಮಾಜಿಕ, ಸಾಂಸ್ಕೃತಿಕ, ಧಾರ್ಮಿಕ, ಆರ್ಥಿಕವಾಗಿ ಹಿಂದುಳಿದಿರುವ ಸಂಸ್ಥೆಗಳಿಗೆ ಮತ್ತು ಕ್ರೀಡಾ ಚಟುವಟಿಕೆಗಳಿಗೆ ಗುತ್ತಿಗೆ ನೀಡಲಾಗುವ ಪ್ರಕರಣಗಳಲ್ಲಿ ನಗರ ಪಾಲಿಕೆಯ ದಿನಾಂಕ:01–03–2002ರ ಸುತ್ತೋಲೆಯಂತೆ ಸದರಿ ಸಂಘ ಸಂಸ್ಥೆಗಳ ಅರ್ಹತೆಯನ್ನು ಆಧರಿಸಿ ರಿಯಾಯಿತಿಯಲ್ಲಿ ಗುತ್ತಿಗೆ ದರ ನಿಗದಿಪಡಿಸಲಾಗುತ್ತಿದೆ. ನವೀಕರಿಸಲಾಗಿರುವ ಪ್ರಕರಣಗಳಲ್ಲಿ ಹೆಚ್ಚಿನ ದರ ವಿಧಿಸಿರುವ ಬಗ್ಗೆ ಅನುಬಂಧ–1ರ ತ:ಖ್ತೆಯಲ್ಲಿ ತೋರಿಸಿದೆ. (ಲಗತ್ತಿಸಿದೆ) |
| 3 | ಹೊಸದಾಗಿ ಗುತ್ತಿಗೆ ನೀಡುವುದನ್ನು ಪ್ರೋತ್ಸಾಹಿಸುವುದು ಸಮಂಜಸವಲ್ಲ. ಅವಶ್ಯಕವಾಗಿ ನೀಡಬೇಕಾದಂತಹ ಸನ್ನಿವೇಶಗಳಲ್ಲಿ ಸಾರ್ವಜನಿಕ ಹರಾಜಿನ ಮೂಲಕವೇ ನೀಡುವುದು. ಕೇಂದ್ರ ಮತ್ತು ರಾಜ್ಯ ಸರ್ಕಾರ ಹಾಗೂ ಅದರ ಸ್ವಾಮ್ಯಕ್ಕೆ ಒಳಪಡುವ ಸಂಸ್ಥೆಗೆ ಮಾತ್ರ ನೇರವಾಗಿ ನೀಡಲು ಪರಿಗಣಿಸಬಹುದಾಗಿದೆ. | ಅತಿ ಅವಶ್ಯಕವಾಗಿ ಪಾಲಿಕೆಯ ಆಸ್ತಿಯನ್ನು ಗುತ್ತಿಗೆಗೆ ನೀಡಲೇಬೇಕಾದ ಸಂದರ್ಭದಲ್ಲಿ ಮಾತ್ರ ಮೇಲೆ ತಿಳಿಸಿದ ಸರ್ಕಾರದ ಮಾರ್ಗಸೂಚಿ ದರಗಳ ಅನ್ವಯ ಗುತ್ತಿಗೆ ದರ ನಿಗದಿಪಡಿಸಿ ಗುತ್ತಿಗೆ ನವೀಕರಿಸಲಾಗುತ್ತಿದೆ. ಇದರಲ್ಲಿ ಕೇಂದ್ರ/ರಾಜ್ಯ ಸರ್ಕಾರ ಹಾಗೂ ಇದರ ಅಧೀನ ಇಲಾಖೆ/ಸಂಸ್ಥೆಗಳು, ಸಾರ್ವಜನಿಕ ಸೇವಾ ಸಂಸ್ಥೆಗಳು ಹಾಗೂ ಅಂಗವಿಕಲರ ಪ್ರಕರಣಗಳಲ್ಲಿ ಆದ್ಯತೆ ನೀಡಲಾಗುತ್ತಿದೆ. ಅರ್ಹ ಪ್ರಕರಣಗಳನ್ನು ಮಾತ್ರ ಪರಿಗಣಿಸಲಾಗುತ್ತಿದೆ. 2010–11ನೇ ಸಾಲಿನಲ್ಲಿ ಸ್ಥಾಯಿ ಸಮಿತಿ ಹಾಗೂ ಪಾಲಿಕೆಯ ಅನುಮೋದನೆಯೊಂದಿಗೆ ನೀಡಲಾಗಿರುವ ಹೊಸ ಗುತ್ತಿಗೆಯ ವಿವರಗಳನ್ನು ಅನುಬಂಧ–2 ರಲ್ಲಿ ತೋರಿಸಿದೆ. (ಲಗತ್ತಿಸಿದೆ) |

| | | |
|---|---|---|
| 4 | ನಗರದಲ್ಲಿ ಇರುವ ಹಸಿರು ಪ್ರದೇಶಗಳು, ರಸ್ತೆಗಳ ಮಧ್ಯದಲ್ಲಿರುವ ಹಸಿರು ಪ್ರದೇಶಗಳು, ಉದ್ಯಾನವನ, ಆಟದ ಮೈದಾನ ಮತ್ತು ಪಾದಚಾರಿ ರಸ್ತೆಗಳಲ್ಲಿ ವಾಣಿಜ್ಯ ಉದ್ದೇಶಗಳಿಗೆ ಗುತ್ತಿಗೆ ನೀಡುವುದನ್ನು ಪಾಲಿಕೆಯ ನೀತಿ ಎಂಬುದಾಗಿ ಪ್ರತಿಬಂಧಿಸಬೇಕು. | ಈಗಾಗಲೇ ಸರ್ಕಾರ ಅಧಿಸೂಚನೆ ಸಂಖ್ಯೆ:ಯುಡಿಡಿ/351/ಎಂಎನ್‌ಯು/2004, ದಿನಾಂಕ:15–04–2011 ರಂತೆ ನಗರ ಪಾಲಿಕೆ ವ್ಯಾಪ್ತಿಯಲ್ಲಿ ಬರುವ ಉದ್ಯಾನವನಗಳು (786), ಆಟದ ಮೈದಾನಗಳು (149) ಖಾಲಿ ಜಾಗಗಳು (131) ಹೀಗೆ ಒಟ್ಟು 1066 ಆಸ್ತಿಗಳು ಕರ್ನಾಟಕ ಉದ್ಯಾನವನಗಳು, ಆಟದಮೈದಾನ ಮತ್ತು ಖಾಲಿ ಜಾಗಗಳು (ಪಿ ಮತ್ತು ಆರ್) ಕಾಯ್ದೆ 1984ರ ಅಡಿಯಲ್ಲಿ ಸರ್ಕಾರದಿಂದ ಅನುಮೋದಿತವಾಗಿದ್ದು, ರಾಜ್ಯ ಪತ್ರದಲ್ಲಿ ದಿನಾಂಕ: 28–04–2011 ರಲ್ಲಿ ಪ್ರಕಟವಾಗಿರುತ್ತದೆ. ಇವುಗಳ ರಕ್ಷಣೆಗೆ ಅವಶ್ಯ ಕ್ರಮ ತೆಗೆದುಕೊಳ್ಳಲಾಗುತ್ತಿದೆ. ಇಂತಹ ಪ್ರದೇಶದಲ್ಲಿ ಗುತ್ತಿಗೆ ನೀಡುವುದನ್ನು ಸಂಪೂರ್ಣವಾಗಿ ನಿರ್ಬಂಧಿಸಿದ್ದು, ಈ ಬಗ್ಗೆ ಕಟ್ಟುನಿಟ್ಟಿನ ಕ್ರಮ ತೆಗೆದುಕೊಳ್ಳಲು ವಲಯಾಧಿಕಾರಿಗಳಿಗೆ ಸೂಚಿಸಿ ಅವಶ್ಯ ಸುತ್ತೋಲೆಯನ್ನು ಹೊರಡಿಸಲಾಗಿರುತ್ತದೆ. (ಸುತ್ತೋಲೆ ದಿ:24–05–2011ರ ಪ್ರತಿಯನ್ನು ಲಗತ್ತಿಸಿದೆ) |
| 5 | 2007ನೇ ಸಾಲಿನಲ್ಲಿ ಗುತ್ತಿಗೆಗೆ ಸಂಬಂಧಿಸಿದಂತೆ ಕರಡು ನಿಯಮಗಳನ್ನು ರಚಿಸಿ ಸರ್ಕಾರದ ಅನುಮೋದನೆಗೆ ಕಳುಹಿಸಿದ್ದು, ಈ ವರೆವಿಗೂ ಅನುಮೋದನೆ ಆಗಿರುವುದಿಲ್ಲ ಈ ನಿಯಮಗಳ ಅನುಮೋದನೆ ಪಡೆಯುವುದು. | 2007ನೇ ಸಾಲಿನಲ್ಲಿ ಸಲ್ಲಿಸಲಾದ ಕರಡು ನಿಯಮಗಳಿಗೆ ಸರ್ಕಾರವು ತನ್ನ ಪತ್ರ ದಿನಾಂಕ: 07–06–2011ರಲ್ಲಿ ಕರಡು ನಿಯಮಗಳನ್ನು ಮರು ಪರಿಶೀಲಿಸಿ ಪಾಲಿಕೆಯ ಅನುಮೋದನೆಯೊಂದಿಗೆ ಸರ್ಕಾರಕ್ಕೆ ಸಲ್ಲಿಸಲು ಸೂಚಿಸಿದ್ದರ ಮೇರೆಗೆ ದಿ:04–08–2011ರ ಅಧಿಕೃತ ಜ್ಞಾಪನಾ ಪತ್ರದಲ್ಲಿ ವಿಶೇಷ ಆಯುಕ್ತರು (ಯೋಜನೆ) ಅಧ್ಯಕ್ಷತೆಯಲ್ಲಿ ಪರಿಪೂರ್ಣವಾದ ನಿಯಮಗಳ ರಚನೆಗೆ ಸಮಿತಿ ರಚಿಸಲಾಗಿರುತ್ತದೆ. ಕರಡು ನಿಯಮಗಳನ್ನು ಪಾಲಿಕೆಗೆ ಮಂಡಿಸಲು ಅಗತ್ಯ ಕ್ರಮ ಕೈಗೊಳ್ಳಲಾಗುವುದು (ಪ್ರತಿ ಲಗತ್ತಿಸಿದೆ) |
| 6 | ಗುತ್ತಿಗೆಗೆ ನೀಡದೆ ಇರುವಂತಹ ಪಾಲಿಕೆಯ ಆಸ್ತಿಗಳಿಗೆ ತಂತಿ ಬೇಲಿ ಹಾಕಿ ಸಂರಕ್ಷಿಸಿ ಆಯವ್ಯಯದಲ್ಲಿ ಲಭ್ಯವಿರುವ ಅನುದಾನ ಬಳಸಿ ಪಾಲಿಕೆಯ ಆಸ್ತಿ ಎಂದು ನಾಮಫಲಕವನ್ನು ಕಡ್ಡಾಯವಾಗಿ ಹಾಕುವುದು. | ಗುತ್ತಿಗೆಗೆ ನೀಡಿರುವ ಹಾಗೂ ನೀಡದೇ ಇರುವಂತಹ ಆಸ್ತಿಗಳನ್ನು ಗುರುತಿಸಿ ಅವುಗಳನ್ನು ರಕ್ಷಿಸಲು ಹಾಗೂ ಸಾರ್ವಜನಿಕರ ಗಮನಕ್ಕೆ ತರಲು ಅಂತಹ ಜಾಗಗಳಿಗೆ ತಂತಿಬೇಲಿ ಹಾಕಿಸಿ "ನಗರ ಪಾಲಿಕೆ ಆಸ್ತಿ" ಎಂಬ ನಾಮಫಲಕವನ್ನು ಹಾಕಿಸಲಾಗುತ್ತಿದೆ. ಈ ಬಗ್ಗೆ ವಲಯಾಧಿಕಾರಿಗಳಿಗೆ ಸುತ್ತೋಲೆ ಮುಖಾಂತರ ಸೂಚನೆ ನೀಡಲಾಗಿರುತ್ತದೆ. (ಸುತ್ತೋಲೆ ದಿನಾಂಕ:13–05–2011ರ ಪ್ರತಿಯನ್ನು ಲಗತ್ತಿಸಿದೆ) |
| 7 | ಪಾಲಿಕೆಯ ಸಹ ಕಂದಾಯ ಅಧಿಕಾರಿಗಳ ಕಛೇರಿಗಳಲ್ಲಿ ಪಾಲಿಕೆಯ ಆಸ್ತಿಗಳಿಗೆ ಸಂಬಂಧಿಸಿದಂತೆ ಹಾಗೂ ಗುತ್ತಿಗೆ ನೀಡಲಾಗಿರುವಂತಹ ಆಸ್ತಿಗಳ ಸಂಪೂರ್ಣ ವಿವರಗಳನ್ನು ನಾಮಫಲಕ ಅಥವಾ ಪ್ರಮುಖ ಗೋಡೆ ಮೇಲೆ ಸಾರ್ವಜನಿಕರ ಮಾಹಿತಿಗಾಗಿ ಬರೆಸುವುದು. | ನಗರ ಪಾಲಿಕೆಯ ಎಲ್ಲಾ ಸಹ ಕಂದಾಯ ಅಧಿಕಾರಿಗಳ ಕಛೇರಿಯಲ್ಲಿ ಸದರಿ ಕಛೇರಿ ವ್ಯಾಪ್ತಿಯಲ್ಲಿ ಬರುವ ಪಾಲಿಕೆಯ ಆಸ್ತಿಗಳಿಗೆ ಸಂಬಂಧಿಸಿದಂತೆ ಸಂಪೂರ್ಣ ವಿವರಗಳು ಲಭ್ಯವಿರುವಂತೆ ಮಾಹಿತಿಯ ನಾಮಫಲಕ ಹಾಕಲು ಅಥವಾ ಪ್ರಮುಖ ಗೋಡೆ ಮೇಲೆ ಬರೆಸಲು ಕ್ರಮ ತೆಗೆದುಕೊಳ್ಳಲಾಗಿರುತ್ತದೆ. ಈ ಬಗ್ಗೆ ವಲಯಾಧಿಕಾರಿಗಳಿಗೆ ಅಗತ್ಯ ಸೂಚನೆ ನೀಡಲಾಗಿರುತ್ತದೆ. (ಸುತ್ತೋಲೆ ದಿನಾಂಕ:13–05–2011ರ ಪ್ರತಿಯನ್ನು ಲಗತ್ತಿಸಿದೆ) |

| | | |
|---|---|---|
| 8 | ಪಾಲಿಕೆಯ ಆಸ್ತಿಗಳ ಸಂರಕ್ಷಣೆಗೆ ಸ್ಥಳೀಯ ಅಭಿಯಂತರರು ಮತ್ತು ಸಹ ಕಂದಾಯ ಅಧಿಕಾರಿಯವರಿಗೆ ವೈಯಕ್ತಿಕವಾಗಿ ಹೊಣೆ ಗಾರರನ್ನಾಗಿ ಮಾಡುವುದು. ಈ ಆಸ್ತಿಗಳ ಅನಧಿಕೃತ ಒತ್ತುವರಿ ಅಥವಾ ಹಾನಿಗೆ ಒಳಗಾದಲ್ಲಿ ಇವರ ಕರ್ತವ್ಯಚ್ಯುತಿಯೆಂದು ಪರಿಗಣಿಸಿ ನಿಯಮಾನುಸಾರ ಅವರ ವಿರುದ್ದ ಕ್ರಮ ಜರುಗಿಸುವುದು. | ನಗರ ಪಾಲಿಕೆಯ ಯಾವುದೇ ಆಸ್ತಿ ಅನಧಿಕೃತ ಒತ್ತುವರಿ ಅಥವಾ ಹಾನಿಗೆ ಒಳಗಾದಲ್ಲಿ ಇದಕ್ಕೆ ಸ್ಥಳೀಯ ಅಭಿಯಂತರರು ಮತ್ತು ಸಹ ಕಂದಾಯ ಅಧಿಕಾರಿಗಳೇ ಹೊಣೆಗಾರರಾಗಿರುತ್ತಾರೆ ಈ ವಿಷಯವನ್ನು ಸದರಿ ಅಧಿಕಾರಿಗಳಿಗೆ ಸುತ್ತೋಲೆ ಮೂಲಕ ಸ್ಪಷ್ಟವಾದ ನಿರ್ದೇಶನಗಳನ್ನು ನೀಡಲಾಗಿರುತ್ತದೆ. (ಸುತ್ತೋಲೆ ದಿನಾಂಕ:13–05–2011ರ ಪ್ರತಿಯನ್ನು ಲಗತ್ತಿಸಿದೆ) |
| 9 | ಗುತ್ತಿಗೆಗೆ ಸಂಬಂಧಿಸಿದ ಪ್ರತಿಯೊಂದು ನಕಲು ಕಡತವನ್ನು ಆಸ್ತಿಶಾಖೆಯಲ್ಲಿ ನಿರ್ವಹಿಸಲು ಕ್ರಮ ಜರುಗಿಸುವುದು. | ಗುತ್ತಿಗೆಗೆ ಸಂಬಂಧಿಸಿದ ಪ್ರತಿಯೊಂದು ಪ್ರಕರಣದ ನಕಲು ದಾಖಲೆ ಇರುವ ಕಡತವನ್ನು ಪಾಲಿಕೆಯ ಆಸ್ತಿ ಶಾಖೆಯಲ್ಲಿ ನಿರ್ವಹಿಸಲು ಕ್ರಮ ತೆಗೆದುಕೊಂಡಿರುತ್ತದೆ. |
| 10 | ಪಾಲಿಕೆಯ ಆಸ್ತಿಗೆ ಸಂಬಂಧಿಸಿದ ನ್ಯಾಯಾಲಯದಲ್ಲಿ ಇರುವ ಪ್ರಕರಣಗಳನ್ನು ತ್ವರಿತ ಇತ್ಯರ್ಥ ಹಾಗೂ ಸಮರ್ಪಕವಾದ ಮಂಡನೆ ದಾಖಲಾತಿಗಳನ್ನು ಸಲ್ಲಿಸುವಿಕೆಯ ಬಗ್ಗೆ ಕಾನೂನು ಶಾಖೆಯ ಮುಖ್ಯಸ್ಥರು ಪ್ರತಿ ಮೂರು ತಿಂಗಳಿಗೊಮ್ಮೆ ಕಡ್ಡಾಯವಾಗಿ ನ್ಯಾಯವಾದಿಗಳು, ಸಹಕಂದಾಯ ಅಧಿಕಾರಿಗಳ ಸಭೆಯನ್ನು ಅಯೋಜಿಸಿ ಪರಾಮರ್ಶಿಸುವುದು ಹಾಗೂ ಎಲ್ಲಾ ಪ್ರಕರಣಗಳನ್ನು ದಿನಾಂಕ ಇತ್ಯಾದಿ ಬಗ್ಗೆ ಪ್ರತ್ಯೇಕ ವಹಿಯನ್ನು ಕಾನೂನು ಶಾಖೆಯಲ್ಲಿ ನಿರ್ವಹಿಸುವುದು. | ಈ ವಿಷಯದಲ್ಲಿ ವಿವಿಧ ನ್ಯಾಯಾಲಯಗಳಲ್ಲಿ ದಾಖಲಾಗಿರುವ ಪ್ರಕರಣಗಳನ್ನು ಸಂಪೂರ್ಣ ವಿವರಗಳನ್ನೊಳಗೊಂಡಂತೆ ಪ್ರತ್ಯೇಕ ವಹಿಯಲ್ಲಿ ದಾಖಲಿಸಿ ಪ್ರತಿ ಮೂರು ತಿಂಗಳಿಗೊಮ್ಮೆ ಕಾನೂನು ಕೋಶದ ಅಧಿಕಾರಿಗಳು ಬಾಕಿ ಪ್ರಕರಣಗಳನ್ನು ಪರಾಮರ್ಶಿಸಬೇಕೆಂದು ಸೂಚಿಸಿ ಸುತ್ತೋಲೆ ನೀಡಲಾಗಿರುತ್ತದೆ. (ಸುತ್ತೋಲೆ ದಿನಾಂಕ:13–05–2011ರ ಪ್ರತಿಯನ್ನು ಲಗತ್ತಿಸಿದೆ) |

| | | |
|---|---|---|
| 11 | ಕಂದಾಯ ಹಾಗೂ ಸಹ ಕಂದಾಯ ಅಧಿಕಾರಿಗಳ ಹೆಚ್ಚಿನ ಸಂಖ್ಯೆಯ ಕಛೇರಿಗಳು ಸಣ್ಣ ಸಣ್ಣ ಕಟ್ಟಡಗಳಲ್ಲಿದ್ದು, ಪ್ರತ್ಯೇಕ ಅಭಿಲೇಖಾಲಯಗಳಿಲ್ಲದೆ ದಾಖಲಾತಿಗಳನ್ನು ಅಲ್ಮೇರಾದಲ್ಲಿ ಇಟ್ಟು, ಈ ಅಲ್ಮೇರಾಗಳು ಕಛೇರಿಯಲ್ಲಿ ಓಡಾಡುವ ಮಾರ್ಗದಲ್ಲೆಲ್ಲಾ ಇಡಲಾಗಿರುತ್ತದೆ. ಲಭ್ಯವಿರುವ ಪ್ರದೇಶವನ್ನು ಉಪಯೋಗಿಸಿಕೊಂಡು ಅಥವಾ ಹೆಚ್ಚಿನ ಮಹಡಿಯ ಕಟ್ಟಡಗಳನ್ನು ನಿರ್ಮಿಸಿ ದಾಖಲಾತಿ, ಸಿಬ್ಬಂದಿ ಹಾಗೂ ಸಾರ್ವಜನಿಕರಿಗೆ ಅನುಕೂಲಕರ ವಾತಾವರಣ ಕಲ್ಪಿಸುವುದು. | ಪ್ರತಿ ಕಛೇರಿಯಲ್ಲಿ ಲಭ್ಯವಿರುವ ಜಾಗವನ್ನು ಉಪಯೋಗಿಸಿಕೊಂಡು ಕಡತಗಳನ್ನು/ದಾಖಲಾತಿಗಳನ್ನು ವ್ಯವಸ್ಥಿತ ರೀತಿಯಲ್ಲಿ ಸಂರಕ್ಷಿಸಿ ನಿರ್ವಹಿಸುವಂತೆ ವಲಯಾಧಿಕಾರಿಗಳಿಗೆ ಅಗತ್ಯ ಸೂಚನೆಗಳನ್ನು ನೀಡಲಾಗಿರುತ್ತದೆ. (ಸುತ್ತೋಲೆ ದಿನಾಂಕ: 13–05–2011ರ ಪ್ರತಿಯನ್ನು ಲಗತ್ತಿಸಿದೆ) |

ಮೇಲೆ ವಿವರಿಸಿದ ವರದಿಯನ್ನು ಗುತ್ತಿಗೆ ಪ್ರಕರಣಗಳ ವಿಲೇವಾರಿಗೆ ಸಂಬಂಧಿಸಿದ ವಿವರಗಳನ್ನು ಅನುಬಂಧ–3 ರಲ್ಲಿ ತೋರಿಸಿದ್ದು, ಇದನ್ನು ಲಗತ್ತಿಸಿ ಹಾಗೂ ಪಾಲಿಕೆಯ ಆಸ್ತಿಯನ್ನು ಗುರ್ತಿಸಿ ಸರ್ವೆ ಮಾಡಿ ಆಸ್ತಿ ವಹಿಗಳಲ್ಲಿ ದಾಖಲಿಸಿರುವ ಪ್ರಗತಿಯ ವಿವರಗಳನ್ನು ಅನುಬಂಧ–4 ರಲ್ಲಿ ತೋರಿಸಿದ್ದು, ಇದನ್ನು ಲಗತ್ತಿಸಿ, ಸ್ಥಾಯಿ ಸಮಿತಿಗಳ ಮುಖಾಂತರ ಪಾಲಿಕೆಯ ಅವಗಾಹನೆಗೆ ಮಂಡಿಸಲಾದ ಟಿಪ್ಪಣಿ ಮೇರೆಗೆ, ಮಾನ್ಯ ಆಯುಕ್ತರ ದಿನಾಂಕ: 10–10–2011ರ ಟಿಪ್ಪಣಿಯನ್ನು ಪರಿಶೀಲಿಸಿ, ಶ್ರೀ ಎನ್ ನಾಗರಾಜ್ ಅಧ್ಯಕ್ಷರು, ಗುತ್ತಿಗೆ ಆಸ್ತಿಗಳ ಸಂರಕ್ಷಣಾ ಸಮಿತಿ ರವರು ಸೂಚಿಸಿರುವ ಮೇರೆಗೆ, ಇಲ್ಲಿಯವರೆವಿಗೂ ತೆಗೆದುಕೊಂಡಿರುವ ಕ್ರಮಗಳ ಕುರಿತು ಒಪ್ಪುತ್ತಾ, ಇನ್ನು ಬಾಕಿ ಇರುವ ಕೆಲವೊಂದು ಸ್ವತ್ತುಗಳಲ್ಲಿ ಗುತ್ತಿಗೆ ಷರತ್ತನ್ನು ಉಲ್ಲಂಘಿಸಿರುವ, ಗುತ್ತಿಗೆ ಅವಧಿ ಮುಗಿದಿರುವ ಹಾಗೂ ಗುತ್ತಿಗೆ ಅವಧಿಯನ್ನು ನವೀಕರಿಸದೇ ಇರುವ ಸ್ವತ್ತುಗಳನ್ನು ಕೂಡಲೇ ಪಾಲಿಕೆಯ ವಶಕ್ಕೆ ತೆಗೆದುಕೊಂಡು, ಪಾಲಿಕೆಯ ನಾಮಫಲಕವನ್ನು ಹಾಕಲು ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚಿಸಲು, ತೀರ್ಮಾನಿಸಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ : 17–04–2012ರ ನಿರ್ಣಯ.

***ನಿರ್ಣಯ :–*** ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ : 17–04–2012ರ ನಿರ್ಣಯವನ್ನು ಒಪ್ಪಿದೆ.

## <u>*13]. ವಿಷಯದ ಸಂಖ್ಯೆ :–ತೆಆಸ್ಥಾಸ/60/2012–13*</u>

ಆಯುಕ್ತರ ಟಿಪ್ಪಣಿ ಸಂಖ್ಯೆ : ಎ3(1)/ಪಿಆರ್/30/11–12, ದಿನಾಂಕ : 05–03–2012 ರಲ್ಲಿ ವಿವರಿಸಿರುವಂತೆ, ಶ್ರೀ. ಭಾರತಿ ಸೇವಾ ಸಂಘ ಕಾರ್ಯದರ್ಶಿರವರಿಗೆ ಬಸವರಾಜ ಗಲ್ಲಿಯಲ್ಲಿ <u>10+16X30/2</u>=390 ಚದರ ಅಡಿಗಳ ನಗರ ಪಾಲಿಕೆ ಜಾಗದ ಗುತ್ತಿಗೆ ಮಾಸಿಕ ರೂ.1/–ರಂತೆ 25–ವರ್ಷಗಳಿಗೆ ದಿನಾಂಕ:03–10–1960 ರಲ್ಲಿ ಶಾಲೆ ನಡೆಸುವ ಸಲುವಾಗಿ ಗುತ್ತಿಗೆ ನೀಡಲಾಗಿತ್ತು. ಸದರಿ ಸಂಸ್ಥೆಯರವರು 1991ರ ಜನವರಿ ಯಿಂದ ಸೆಪ್ಟೆಂಬರ್ 2011ರ ವರೆವಿಗೆ ಒಟ್ಟು ರೂ 249/– ಗಳನ್ನು ಬಾಕಿ ಇರುವ ಗುತ್ತಿಗೆ ಮೊತ್ತವನ್ನು ದಿನಾಂಕ:19–10–2011 ರಲ್ಲಿ ಪಾಲಿಕೆಗೆ ಪಾವತಿಸಿರುತ್ತಾರೆ. ಸದರಿ ಜಾಗದ ಗುತ್ತಿಗೆ ಅವಧಿಯನ್ನು ನವೀಕರಿಸಿಕೊಡುವಂತೆ ದಿನಾಂಕ:12–12–2011 ರಲ್ಲಿ ಮನವಿ ನೀಡಿರುತ್ತಾರೆ.

ದಿನಾಂಕ:27–05–2011 ರಂದು ಸಹ ಕಂದಾಯ ಅಧಿಕಾರಿಗಳೊಂದಿಗೆ ಸ್ಥಳ ಪರಿಶೀಲಿಸಲಾಗಿದ್ದು, ಈ ಸೇವಾ ಸಂಘವು ತಮ್ಮದೇ ಆದ ಜಾಗದಲ್ಲಿ ಶಾಲೆ ನಡೆಸುತ್ತಿದ್ದು, ಪಾಲಿಕೆಯ ಗುತ್ತಿಗೆ ಜಾಗವು ಅದರ ಜಾಗಕ್ಕೆ ಲಗತ್ತಾಗಿದ್ದು, ಹೆಚ್ಚುವರಿಯಾಗಿ ಕಟ್ಟಡ ನಿರ್ಮಿಸಿ ಉಪಯೋಗಿಸುತ್ತಿರುತ್ತಾರೆ.

ಸ್ಥಳೀಯರನ್ನು ವಿಚಾರಿಸಿದಾಗ ಈ ಶಾಲೆಯಿಂದ ಸ್ಥಳೀಯ ಬಡ ಮಕ್ಕಳಿಗೆ ತುಂಬಾ ಅನುಕೂಲವಾಗುತ್ತಿದೆ ಎಂದು ಅಭಿಪ್ರಾಯಿಸಿರುತ್ತಾರೆ. ಆದುದರಿಂದ, ಈಗಿನ ಸರ್ಕಾರಿ ಮಾರ್ಗಸೂಚಿ ದರದಂತೆ ಗುತ್ತಿಗೆ ಮೊತ್ತವನ್ನು ನಿಗಧಿಪಡಿಸಿ ರಿಯಾಯಿತಿ ದರದೊಂದಿಗೆ ಗುತ್ತಿಗೆ ಅವಧಿಯನ್ನು ನವೀಕರಿಸಬಹುದಾಗಿರುತ್ತದೆ.

ಪ್ರಸ್ತುತ ಜಾಗದ ವಿಸ್ತೀರ್ಣವು <u>10+16X30</u>=390 ಚದರ ಅಡಿಗಳಾಗಿದ್ದು, ಈ ಪ್ರದೇಶದಲ್ಲಿ ದಿ:21.09.2011ರ ಸರ್ಕಾರದ
2
ಮಾರ್ಗಸೂಚಿ ಅನ್ವಯ ಮಾರುಕಟ್ಟೆ ದರದಂತೆ ಚದರ ಅಡಿ ಒಂದಕ್ಕೆ ರೂ.1700/– ಗಳಿರುತ್ತದೆ. ಇದರಂತೆ ಲೆಕ್ಕಾಚಾರ ಮಾಡಲಾಗಿ, 1700ಥ390=6,63,000/–ರೂ. ಒಟ್ಟು ಮೊತ್ತಗಳಾಗುತ್ತದೆ. ಶೇ 10% ರಂತೆ ವಾರ್ಷಿಕ ಗುತ್ತಿಗೆ ಮೊತ್ತ ರೂ.66,300/– ಗಳಾಗಲಿದ್ದು, ಮಾಸಿಕ ಗುತ್ತಿಗೆ ಮೊತ್ತ ರೂ.5525/– ಗಳಾಗುತ್ತದೆ.

ದಿನಾಂಕ:01–03–2002ರ ಪಾಲಿಕೆಯ ಸುತ್ತೋಲೆಯ ಪ್ರಕಾರ ಅಂಗವಿಕಲರಿಗೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಸೇರಿದ ಅರ್ಜಿದಾರರಿಗೆ ಹಾಗೂ ಶೇ 100% ರಷ್ಟು, ಸಮಾಜ ಸೇವೆ ಸಲ್ಲಿಸುತ್ತಿರುವ ಸಂಘ ಸಂಸ್ಥೆಗಳಿಗೆ ಮತ್ತು ಧರ್ಮದತ್ತಿ ಸಂಸ್ಥೆಗಳಿಗೆ ಮೇಲ್ಕಂಡ ಗುತ್ತಿಗೆ ಹಣದಲ್ಲಿ ಸೂಕ್ತ ರಿಯಾಯಿತಿಯನ್ನು ಪರಿಗಣಿಸಲು ಸ್ಥಾಯಿ ಸಮಿತಿಗೆ, ಪಾಲಿಕೆಗೆ ಹಾಗೂ ಸರ್ಕಾರಕ್ಕೆ ಶಿಫಾರಸ್ಸು ಮಾಡಲು ಆಯುಕ್ತರು ನಿರ್ಧರಿಸುವರು ಎಂಬುದಾಗಿ ಇರುತ್ತದೆ.

ಈ ಮೇಲಿನ ಹಿನ್ನೆಲೆಯಲ್ಲಿ ಭಾರತಿ ಸೇವಾ ಸಂಘ ಗುತ್ತಿಗೆ ಅವಧಿ ನವೀಕರಿಸುವ ಬಗ್ಗೆ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ನಗರ ಪಾಲಿಕೆ ಸಭೆಯ ಮುಂದೆ ಸೂಕ್ತ ನಿರ್ಣಯಕ್ಕಾಗಿ ಮಂಡಿಸಿರುವ ಟಿಪ್ಪಣಿ ಮೇರೆಗೆ, ತಾ॥.05.03.2012ರ ಆಯುಕ್ತರ ಟಿಪ್ಪಣಿ ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ : 17.04.2012ರ ನಿರ್ಣಯ.

**–ಮುಂದೂಡಿದೆ–**

## <u>*14]. ವಿಷಯದ ಸಂಖ್ಯೆ :–ತೆಆಸ್ಥಾಸ/61/2012–13*</u>

ಆಯುಕ್ತರ ಟಿಪ್ಪಣಿ ಸಂಖ್ಯೆ : ಎ3(4)/ಪಿಆರ್/92/10–11, ದಿನಾಂಕ : 10–01–2012ರಲ್ಲಿ ವಿವರಿಸಿರುವಂತೆ, ಶ್ರೀಮತಿ.ಅಹಲ್ಯ ಚಿತ್ತರಂಜನ್‌ರವರು, ಸ್ವತ್ತಿನ ಸಂಖ್ಯೆ:10 (ಹಳೆದು–315), 2ನೇ ಅಡ್ಡರಸ್ತೆ ಎನ್.ಆರ್. ಕಾಲೋನಿ, ಈ ಸ್ವತ್ತನ್ನು ಪಾಲಿಕೆಯಿಂದ 1949 ರಲ್ಲಿ ಹರಾಜು ಮುಖಾಂತರ ಪಡೆದಿದ್ದು, ಕ್ರಯಪತ್ರ ಪಡೆಯದೆ ಇರುವುದರಿಂದ, ಕ್ರಯಪತ್ರ ನೀಡಲು ಕೋರಿರುತ್ತಾರೆ.

ಈ ಸ್ವತ್ತನ್ನು ಶ್ರೀಮತಿ.ಪಾರ್ವತಮ್ಮ 1949ರಲ್ಲಿ 40X60 ಅಡಿಗಳ ಸ್ವತ್ತನ್ನು 2600/–ರೂ.ಗಳಿಗೆ ಹರಾಜಿನ ಮೂಲಕ ಪಡೆದು ಆಗ್ರಿಮೆಂಟ್ ಪತ್ರವನ್ನು ಮಾಡಿಕೊಂಡಿರುತ್ತಾರೆ. ಹಣ ಪಾವತಿಸಿದ ಬಗ್ಗೆ ದಾಖಲೆ ಇರುವುದಿಲ್ಲ. ಕ್ರಯಪತ್ರ ನೊಂದಾಯಿಸಿಕೊಂಡಿರುವುದಿಲ್ಲ. ಆದರೆ, ಆಗ್ರಿಮೆಂಟ್ ಪತ್ರದ ಆಧಾರ ಖಾತಾ ನೊಂದಾಯಿಸಿ ಕೊಂಡಿರುತ್ತಾರೆ. ಶ್ರೀಮತಿ.ಪಾರ್ವತಮ್ಮರವರು ಹಾಗೂ ಇವರ ಪತಿಯಾದ ಶ್ರೀ ನಾರಾಯಣಸ್ವಾಮಿರವರು ಮರಣ ಹೊಂದಿದ್ದು, ಇತರೇ ವಾರಸುದಾರರು ಶ್ರೀಮತಿ.ಪಾರ್ವತಮ್ಮನವರ ಮಗಳಾದ ಶ್ರೀಮತಿ.ಅಹಲ್ಯ ಚಿತ್ತರಂಜನ್‌ರವರಿಗೆ ನೊಂದಾಯಿತ ಜಿ.ಪಿ.ಎ. ಪತ್ರದ ಆಧಾರ ಅಧಿಕಾರ ನೀಡಿರುವುದರಿಂದ ಕ್ರಯಪತ್ರ ನೀಡಲು ಕೋರಿರುತ್ತಾರೆ.

ಈ ಸ್ವತ್ತಿನ ಒಟ್ಟು 40x60 ಅಡಿಗಳ ಹಿಂಭಾಗದ ಅಳತೆಯಲ್ಲಿ 16x40 ಅಡಿಗಳನ್ನು ಶ್ರೀ ವಿ.ಗುರುರಾಜ ರವರಿಗೆ ಕ್ರಯಪತ್ರದ ಮೂಲಕ ಕ್ರಯಕ್ಕೆ ನೀಡಿದ್ದು, 3x44 ಅಡಿಗಳು ಓಡಾಡಲು ದಾರಿ ಬಿಟ್ಟಿದ್ದು, ಉಳಿಕೆ 44x37 ಅಡಿಗಳಿರುತ್ತದೆ. ಶ್ರೀ.ವಿ.ಗುರುರಾಜರವರಿಗೆ 16x40 ಅಡಿಗಳಿಗೆ ಖಾತಾ ನೊಂದಾಯಿಸಲಾಗಿರುತ್ತದೆ.

ಸದರಿ ಸ್ಥಳದ ಪ್ರಸಕ್ತ ಮಾರುಕಟ್ಟೆ ದರವು ದಿನಾಂಕ:21-09-2011ರ ಸರ್ಕಾರದ ಮಾರ್ಗಸೂಚಿಯಂತೆ ವಸತಿ ಚದರ ಅಡಿ ಒಂದಕ್ಕೆ ರೂ.3000/-ಗಳಿದ್ದು, ಅರ್ಜಿದಾರರುಗಳು ಕೋರಿರುವ ಜಾಗವು 1628 ಚ.ಅಡಿ ಗಳಾಗುತ್ತದೆ. ಇದರಂತೆ 3000x1628 = 48,84,000/- ರೂ.ಗಳಾಗುತ್ತದೆ.

ಸದರಿ ವಿಷಯದಲ್ಲಿ ಮೂಲ ಕಡತ ಲಭ್ಯವಿಲ್ಲದೇ ಇರುವುದರಿಂದ, ಶ್ರೀಮತಿ.ಪಾರ್ವತಮ್ಮ ಮತ್ತು ಅವರ ಪತಿಯಾದ ಶ್ರೀ ನಾರಾಯಣಸ್ವಾಮಿರವರು ಮರಣ ಹೊಂದಿರುವುದರಿಂದ ಮತ್ತು ಇತರೆ ವಾರಸುದಾರರಿಂದ ನೊಂದಾಯಿತ ಜಿ.ಪಿ.ಎ. ಪತ್ರದ ಮೂಲಕ ಅಧಿಕಾರ ಪಡೆದಿರುವ ಶ್ರೀಮತಿ.ಅಹಲ್ಯ ಚಿತ್ತರಂಜನ್ ರವರಿಗೆ ಸಂಪೂರ್ಣ ವಿಸ್ತೀರ್ಣಕ್ಕೆ ನೊಂದಾವಣೆ ಇಲಾಖೆಯ ದರ ಇತ್ಯಾದಿಗಳನ್ನು ಸರ್ಕಾರಕ್ಕೆ ಸಂದಾಯ ಮಾಡಿಸಿಕೊಂಡು ನೊಂದಾಯಿಸಲು ತದನಂತರ, ಶ್ರೀ ಗುರುರಾಜ್ ಇವರಿಗೆ ಸರ್ಕಾರಕ್ಕೆ ಸಂದಾಯ ಮಾಡಬೇಕಾದ ಎಲ್ಲಾ ದರಗಳನ್ನು ಸಂದಾಯ ಮಾಡಿ ನೊಂದಾಯಿಸಿ ಕೊಡುವ ಷರತ್ತು ವಿಧಿಸಿ ಕ್ರಯಪತ್ರ ನೀಡುವ ಬಗ್ಗೆ ಸೂಕ್ತ ನಿರ್ಣಯಕ್ಕಾಗಿ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮತ್ತು ಪಾಲಿಕೆ ಸಭೆ ಮುಂದೆ ಮಂಡಿಸಲಾದ ಟಿಪ್ಪಣಿ ಮೇರೆಗೆ, ತಾ॥. 10.01.2012ರ ಆಯುಕ್ತರ ಟಿಪ್ಪಣಿ ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ : 12-04-2012ರ ನಿರ್ಣಯ.

**-ಮುಂದೂಡಿದೆ-**

## ***15]. ವಿಷಯದ ಸಂಖ್ಯೆ :-ತೆಆಸ್ಥಾಸ/62/2012-13***

ಆಯುಕ್ತರ ಟಿಪ್ಪಣಿ ಸಂಖ್ಯೆ : ಎ3(2)/ಪಿಆರ್/530/11-12, ದಿನಾಂಕ ಃ 20-03-2012ರಲ್ಲಿ ವಿವರಿಸಿರುವಂತೆ, ವಾರ್ಡ್-62 (92) ಬಿಬಿಎಂಪಿ ವ್ಯಾಪ್ತಿಯ ರಾಮಸ್ವಾಮಿಪಾಳ್ಯದಲ್ಲಿ 1960 ರಿಂದ ಸುಮಾರು 465 ಪರಿಶೀಷ್ಟ ಜಾತಿ/ಪರಿಶಿಷ್ಟ ಪಂಗಡದ ಕುಟುಂಬಗಳು ವಿವಿಧ ಅಳತೆಗಳಲ್ಲಿ ಮನೆಗಳನ್ನು ಕಟ್ಟಿಕೊಂಡು ವಾಸಿಸುತ್ತಿರುವುದಾಗಿ, ಈ ಪ್ರದೇಶವು ಕರ್ನಾಟಕ ಕೋಳಚೆ ಪ್ರದೇಶ ನಿರ್ಮೂಲನಾ ಮಂಡಳಿಯು ಸ್ವಾಧೀನಪಡಿಸಿಕೊಂಡು 1974ರಲ್ಲಿ ಅಧಿಕೃತವಾಗಿ ಕೊಳಚೆ ಪ್ರದೇಶವೆಂದು ಹೆಚ್‌ಯುಡಿ/224/ಎಂಸಿಎಸ್/1974-75, ದಿನಾಂಕ: 12-11-1974ರಲ್ಲಿ ಘೋಷಣೆಯಾಗಿರುವುದಾಗಿ ಈ ಪ್ರದೇಶದಲ್ಲಿ ವಾಸಿಸುತ್ತಿರುವ ಫಲಾನುಭವಿಗಳಿಗೆ ಹಕ್ಕುಪತ್ರ ನೀಡುವ ಬಗ್ಗೆ ಪಡಿತರ ಚೀಟಿ, ಚುನಾವಣಾ ಗುರುತಿನ ಚೀಟಿ, ಕೊಳಚೆ ನಿರ್ಮೂಲನಾ ಮಂಡಳಿ, ಬೆಂಗಳೂರು ರವರು ನೀಡಿರುವ ಪರಿಚಯ ಪತ್ರ, ಲೇಔಟ್ ನಕ್ಷೆ, ಬಿಡಿಎಯಿಂದ ಕೊಳಚೆ ನಿರ್ಮೂಲನಾ ಮಂಡಳಿಗೆ 2-34 ಎಕರೆ/ಗುಂಟೆ ಪ್ರದೇಶವನ್ನು ನೀಡಿದ್ದು, ಸರ್ಕಾರಿ ಆದೇಶ ಸಂಖ್ಯೆ:ವಇ/16/ಕೊಮಂಘೋ/96, ಬೆಂಗಳೂರು ದಿ:07-02-1997 ರಂತೆ ಪಾಲಿಕೆಗೆ ಹಸ್ತಾಂತರಿಸಿರುವುದರಿಂದ ಇಲ್ಲಿ ವಾಸಿಸುತ್ತಿರುವ 465 ಫಲಾನುಭವಿಗಳಿಗೆ ಹಕ್ಕುಪತ್ರ ಅಥವಾ ಸ್ವಾಧೀನ ಪತ್ರ ನೀಡುವಂತೆ ಆ ವಾರ್ಡಿನ ಪಾಲಿಕೆ ಸದಸ್ಯರು ಪತ್ರ ಬರೆದಿರುತ್ತಾರೆ.

ಘೋಷಿತ ಕೊಳಚೆ ಪ್ರದೇಶಗಳಲ್ಲಿನ ಸರ್ಕಾರಿ ಜಮೀನುಗಳಲ್ಲಿ ಅನಧಿಕೃತವಾಗಿ ವಾಸವಾಗಿರುವ ಕೊಳಚೆ ಪ್ರದೇಶದ ನಿವಾಸಿಗಳಿಗೆ 10 ವರ್ಷಗಳ ಮಾರಾಟ ಮತ್ತು ಗುತ್ತಿಗೆ ಕರಾರು ಒಪ್ಪಂದದ ಹಕ್ಕುಪತ್ರಗಳನ್ನು ಪ್ರತಿ ಚದರ ಮೀಟರ್‌ಗೆ 200/- ರೂ ನಂತೆ ದರ ವಿಧಿಸಿ ಫಲಾನುಭವಿಗಳು ಪಾಲಿಕೆ ವ್ಯಾಪ್ತಿಯಲ್ಲಿ ಯಾವುದೇ ನಿವೇಶನ ಮನೆಯನ್ನು ಹೊಂದಿಲ್ಲವೆಂದು ಖಚಿತಪಡಿಸಿಕೊಂಡು ಹಕ್ಕುಪತ್ರಗಳನ್ನು ನೀಡಲು ಸರ್ಕಾರದ ಆದೇಶ ಸಂಖ್ಯೆ:ನಅಇ122 ಎಂಎನ್‌ಜಿ 2009 (ಬಾ) ಬೆಂಗಳೂರು ದಿ: 13-01-2010ರಲ್ಲಿ ಆದೇಶಿಸಿರುತ್ತದೆ.

ದಿನಾಂಕ: 13-01-2010ರ ಆದೇಶವನ್ನು ಸರ್ಕಾರದ ಆದೇಶದ ಸಂಖ್ಯೆ: ಯುಡಿಡಿ 176 ಸಿಎಸ್‌ಎಸ್ 2010, ದಿನಾಂಕ: 24-01-2011 ರಂದು ಹಿಂಪಡೆಯಲಾಗಿರುವುದರಿಂದ ಹಕ್ಕುಪತ್ರ ನೀಡಲು ಅವಕಾಶವಿರುವುದಿಲ್ಲ. ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ 465 ಜನ ಫಲಾನುಭವಿಗಳಿಗೆ ಹಕ್ಕುಪತ್ರ ನೀಡುವ ಸಂಬಂಧ ಸೂಕ್ತ ತೀರ್ಮಾನಕ್ಕಾಗಿ ಸ್ಥಾಯಿ ಸಮಿತಿಗಳು ಪಾಲಿಕೆ ಸಭೆ ಮುಖಾಂತರ ಸರ್ಕಾರಕ್ಕೆ

ಪ್ರಸ್ತಾಪಿಸಲು ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ಟಿಪ್ಪಣಿ ಮೇರೆಗೆ, ತಾ॥. 20–03–2012ರ ಆಯುಕ್ತರ ಟಿಪ್ಪಣಿ ಪರಿಶೀಲಿಸಿ, ಇವರಿಗೆ ಹಕ್ಕುಪತ್ರ ನೀಡಲು ಅನುಮತಿ ಕೋರಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲು ತೀರ್ಮಾನಿಸಿತು ಹಾಗೂ ಕೌನ್ಸಿಲ್ ಸಭೆಯ ನಿರ್ಣಯ ಪಡೆಯಲು ತೀರ್ಮಾನಿಸಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ : 12–04–2012ರ ನಿರ್ಣಯ.

***<u>ನಿರ್ಣಯ :–</u>*** ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ : 12–04–2012ರ ನಿರ್ಣಯವನ್ನು ಒಪ್ಪಿದೆ.

## ***<u>16]. ವಿಷಯದ ಸಂಖ್ಯೆ :–ತೆಆಸ್ಥಾಸ/63/2012–13</u>***

ಆಯುಕ್ತರ ಟಿಪ್ಪಣಿ ಸಂಖ್ಯೆ : ಸ.ಕಂ.ಅ(ಪೂ)ಮಾ/ಪಿಆರ್/327/11–12, ದಿನಾಂಕ : 18–05–2012 ರಲ್ಲಿ ವಿವರಿಸಿರುವಂತೆ, ನೇತಾಜಿ ಸುಭಾಷ ಚಂದ್ರ ಬೋಸ್ ಕಟ್ಟಡದ (ಪಿಯುಬಿ) 2ನೇ ಅಂತಸ್ತಿನಲ್ಲಿರುವ ಶಂಕರ್‌ನಾಗ್ ಚಿತ್ರಮಂದಿರದ ಗುತ್ತಿಗೆಯನ್ನು 10ವರ್ಷಗಳ ಅವದಿಗೆ ಶೃಂಗಾರ್ ಸಿನಿಮಾಸ್ ಪ್ರೈವೇಟ್ ಲಿಮಿಟೆಡ್ (FAME) ರವರಿಗೆ ತಿಂಗಳು ಪರವಾನಗಿ ಶುಲ್ಕ ಆಧಾರದ ಮೇಲೆ ವಾರ್ಷಿಕ ಶೇ.3% ರಂತೆ ಹೆಚ್ಚಿನ ಪರಿಷ್ಕರಿಸುವ ಷರತ್ತಿಗೆ ಒಳಪಟ್ಟು ನೀಡಿ ದಿನಾಂಕ : 09–06–2007 ರಂದು ಸದರಿ ಸಂಸ್ಥೆಯವರಿಂದ ಕರಾರು ಮಾಡಿಕೊಳ್ಳಲಾಗಿರುತ್ತದೆ.

ಸದರಿ ಸಂಸ್ಥೆಯವರ ಕರಾರಿನಂತೆ ಮಾಸಿಕವಾಗಿ ಮೇ 2008 ರಿಂದ ಜುಲೈ 2008ರವರೆಗೆ ಪಾವತಿ ಮಾಡಿಕೊಂಡು ಬಂದಿರುತ್ತಾರೆ. ಆದರೆ ಆಗಸ್ಟ್ 2008 ರಿಂದ ಫೆಬ್ರವರಿ 2009ರವರೆಗೆ ಅಧಿಕ ವಿದ್ಯುತ್ ಸಂಪರ್ಕ ಕಲ್ಪಿಸಿಲ್ಲವೆಂದು ಪರವಾನಗಿ ಶುಲ್ಕವನ್ನು ಬಾಕಿ ಉಳಿಸಿಕೊಂಡಿರುತ್ತಾರೆ.

ಆದರೆ ಸದರಿ ಚಿತ್ರಮಂದಿರಕ್ಕೆ 145ಕೆ.ವಿ.ಎ ವಿದ್ಯುತ್ ಸಂಪರ್ಕವನ್ನು ಕಲ್ಪಿಸಿದ್ದು, ಹೆಚ್ಚುವರಿಯಾಗಿ 335 ಕೆ.ವಿ.ಎ ವಿದ್ಯುತ್ ಸರಬರಾಜು ನೀಡಲು ದಿನಾಂಕ : 12–09–2007ರಂದು ಸದರಿ ಸಂಸ್ಥೆರವರು ಪತ್ರ ಸಲ್ಲಿಸಿರುತ್ತಾರೆ, ಈ ಬಗ್ಗೆ ಹೆಚ್ಚಿನ ವಿದ್ಯುತ್ ಸಂಪರ್ಕ ಕಲ್ಪಿಸಲು ಬಿಬಿಎಂಪಿ ವತಿಯಿಂದ ಬೆಸ್ಕಾಂ ಸಂಸ್ಥೆಗೆ ಬೇಡಿಕೆ ಸಲ್ಲಿಸಲಾಗಿರುತ್ತದೆ. ಅದರಂತೆ ಬೆಸ್ಕಾಂ ಸಂಸ್ಥೆಯವರು ಹಾಲಿ ಇರುವ ಟ್ರಾನ್ಸ್‌ಪಾರ್ಮರ್‌ಗಳನ್ನು ಕಟ್ಟಡದ ಹೊರಗಡೆ ಸ್ಥಳಾಂತರಿಸಿ, ಕೇಬಲ್ ವಿದ್ಯುತ್ ಸಲಕರಣೆಗಳನ್ನು ಹೊಸದಾಗಿ ಅಳವಡಿಸಲು ದಿನಾಂಕ : 31–01–2008 ರಂದು ತಿಳಿಸಿರುತ್ತಾರೆ. ಅದರಂತೆ ಮೇಲಾಧಿಕಾರಿಗಳಿಂದ ಮಂಜೂರಾತಿ ಪಡೆದು ಕಾಮಗಾರಿಯನ್ನು ಪೂರ್ಣಗೊಳಿಸಿ ದಿನಾಂಕ : 02–03–2009 ರಲ್ಲಿ 145ಕೆ.ವಿ.ಎ ವಿದ್ಯುತ್ ಹಾಗೂ ಹೆಚ್ಚುವರಿ 355ಕೆ.ವಿ.ಎ 500ಕೆ.ವಿ.ಎ ವಿದ್ಯುತ್ ಸಂಪರ್ಕವನ್ನು ಒದಗಿಸಲಾಗಿರುತ್ತದೆ.

ಆದರೆ ಸದರಿ ಸಂಸ್ಥೆರವರು ಚಿತ್ರಮಂದಿರದ ಒಳಾಂಗಣದಲ್ಲಿ ಸಮಯದಲ್ಲಿ 145ಕೆ.ವಿ.ಎ ವಿದ್ಯುತ್ ಸಂಪರ್ಕವನ್ನು ಉಪಯೋಗಿಸುತ್ತಿದ್ದರು. ಈ ಸಮಯದಲ್ಲಿ ಕರ್ನಾಟಕ ಸರ್ಕಾರ ವಿದ್ಯುತ್ ಪರಿವೀಕ್ಷಕರು ಸದರಿ ಚಿತ್ರಮಂದಿರಕ್ಕೆ ತಪಾಸಣೆ ನಡೆಸಿ ಆಂತರಿಕ ವಿದ್ಯುತ್ ಕಾಮಗಾರಿ ಬಗ್ಗೆ ಹಲವಾರು ನ್ಯೂನತೆಗಳನ್ನು ಸರಿಪಡಿಸಲು ತಿಳಿಸಿರುತ್ತಾರೆ.

ಅಂತಿಮವಾಗಿ ದಿನಾಂಕ : 20–01–2009 ರಂದು ಕರ್ನಾಟಕ ಸರ್ಕಾರ ವಿದ್ಯುತ್ ಪರಿವೀಕ್ಷಣಾಲಯ ಚಿತ್ರಮಂದಿರದ ಪ್ರದರ್ಶನಕ್ಕೆ ಅನುಮೋದನೆ ನೀಡಿರುತ್ತಾರೆ.

ಈ ಸಂದರ್ಭದಲ್ಲಿ ಆಗಸ್ಟ್ 2008 ರಿಂದ ಫೆಬ್ರವರಿ 2009ರ ಅವಧಿಯಲ್ಲಿ 145ಕೆ.ವಿ.ಎ ವಿದ್ಯುತ್ ಅನ್ನು ಸಂಪೂರ್ಣವಾಗಿ ಬಳಸಿಕೊಂಡಿರುವ ಮೇರೆಗೆ ಸದರಿ ಅವಧಿಯ ಬಾಕಿ ಪರವಾನಗಿ ಶುಲ್ಕ ರೂ.1,26,17,500.00 ಪಾವತಿಸಲು ಮಾನ್ಯ ಆಯುಕ್ತರವರ ಅಧ್ಯಕ್ಷತೆಯಲ್ಲಿ ಸಭೆಯನ್ನು ನಡೆಸಿ, ನಂತರ ದಿನಾಂಕ : 30–08–2010ರಲ್ಲಿ ಮನ್ನಾ ಮಾಡಲು ಬರುವುದಿಲ್ಲವೆಂದು, ಪಾವತಿಸಲು ಸೂಚಿಸಿರುತ್ತಾರೆ.

ಮುಂದುವರೆದಂತೆ ಕರಾರಿನ ಆರ್ಟಿಕಲ್ 6.1(ಎ) ರಂತೆ ಸದರಿ ಚಿತ್ರಮಂದಿರಕ್ಕೆ ಎಲ್ಲಾ ಸೌಲಭ್ಯಗಳನ್ನು ಒದಗಿಸಿದ ನಂತರ ಬಾಕಿ ಪರವಾನಗಿ ಶುಲ್ಕ ಪಾವತಿಸಬೇಕಾಗಿರುತ್ತದೆಂದು ಸದರಿ ಸಂಸ್ಥೆರವರು ಬಾಕಿಯನ್ನು ಮನ್ನಾ ಮಾಡಲು ಕೋರಿರುತ್ತಾರೆ. ಆದರೆ ಆರ್ಟಿಕಲ್ 5.5(ಎ) ಮತ್ತು (ಬಿ)ರಲ್ಲಿ ಬಾಡಿಗೆದಾರರೇ ಎಲ್ಲಾ ಸೌಲಭ್ಯಗಳನ್ನು ಮಾಡಿಕೊಳ್ಳಬೇಕಾಗಿರುತ್ತದೆ. ಆದರೆ ಆಗಸ್ಟ್ 2008 ರಿಂದ ಫೆಬ್ರವರಿ 2009ರ ಅವಧಿಯಲ್ಲಿ 145 ಕೆ.ವಿ.ಎ ವಿದ್ಯುತ್ ಸರಬರಾಜನ್ನು ಸಂಪೂರ್ಣವಾಗಿ ಬಳಸಿಕೊಂಡಿದ್ದು, ಚಿತ್ರಮಂದಿರದವರ ಆಂತರಿಕ ವಿದ್ಯುತ್ ಕಾಮಗಾರಿಗಳ ಹಲವಾರು ನ್ಯೂನತೆಗಳಿಂದ ಕರ್ನಾಟಕ ಸರ್ಕಾರ ವಿದ್ಯುತ್ ಪರಿವೀಕ್ಷಕ ಇಲಾಖೆಯಿಂದ ಪರವಾನಗಿ ಪಡೆಯಲು

ವಿಳಂಬದಿಂದ ಹಾಗೂ ನವೀಕರಣ ಮಾಡಿ ಪ್ರಾಧಿಕಾರಗಳಿಂದ ಪರವಾನಗಿ ಪಡೆಯಲು ಸದರಿ ಸಂಸ್ಥೆಯವರಿಂದಲೇ ವಿಳಂಬವಾಗಿದೆಯೇ ಹೊರತು, ಬಿಬಿಎಂಪಿ ವತಿಯಿಂದ ವಿಳಂಭವಾಗಿರುವುದಿಲ್ಲ. ಆದ್ದರಿಂದ ಸದರಿ ಚಿತ್ರಮಂದಿರದವರೇ ವಿಳಂಬ ನೀತಿ ಅನುಸರಿಸಿರುವ ಮೇರೆಗೆ ಬಾಕಿ ಬರಬೇಕಾಗಿರುವ ಪರವಾನಗಿ ಶುಲ್ಕ ರೂ.1,26,17,500.00 ಗಳನ್ನು ಹಾಗೂ ಆರ್ಟಿಕಲ್ ಆಫ್ 7.1 ರಂತೆ 2% ದಂಡದೊಂದಿಗೆ ಪಾವತಿಸಬೇಕಾಗಿದ್ದು, ಈ ಬಗ್ಗೆ ಅಂತಿಮ ನೋಟಿಸ್ ಜಾರಿಗೊಳಿಸಿ ಸದರಿ ಚಿತ್ರಮಂದಿರದವರಿಂದ ಠೇವಣಿ ಮೊತ್ತ ರೂ.2,10,00,000.00ಗಳಲ್ಲಿ ಬಾಕಿ ಪರವಾನಗಿ ಶುಲ್ಕವನ್ನು ಮುಟ್ಟುಗೋಲು ಹಾಕಿಕೊಳ್ಳುವ ಬಗ್ಗೆ ಆದೇಶ ಕೋರಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ಟಿಪ್ಪಣಿ.

**–ಮುಂದೂಡಿದೆ–**

## ***17]. ವಿಷಯದ ಸಂಖ್ಯೆ :–ತೆಆಸ್ಥಾಸ/64/2012–13***

ಅಪರ ಆಯುಕ್ತರು (ಯೋಜನೆ) ರವರ ಟಿಪ್ಪಣಿ ಸಂಖ್ಯೆ : ಜಆ(ಕ)ಪಿಎಸ್ಆರ್(4)235/11–12, ದಿನಾಂಕ : 21.05.2012 ರಲ್ಲಿ ವಿವರಿಸಿರುವಂತೆ ಕಾರ್ಯದರ್ಶಿ, ಪರಿವರ್ತನಾ ಸೇವಾ ಸಮಿತಿ (ರಿ), ಕಾರ್ಪೋರೇಷನ್ ಕಟ್ಟಡ, 9ನೇ ಮುಖ್ಯರಸ್ತೆ, 4ನೇ ಅಡ್ಡರಸ್ತೆ, ಆರ್.ಪಿ.ಸಿ ಬಡಾವಣೆ, ವಿಜಯನಗರ, ಬೆಂಗಳೂರು – 40 ರವರು ಮನವಿ ಸಲ್ಲಿಸಿ, ತಮ್ಮ ಪರಿವರ್ತನಾ ಸೇವಾ ಸಂಸ್ಥೆಗೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವತಿಯಿಂದ ಬೆಂಗಳೂರು ನಗರದ ಸಂಘ ಸಂಸ್ಥೆಗಳಿಗೆ ಸಹಾಯ ಧನ ನೀಡುವ ಯೋಜನೆಯಲ್ಲಿ ತಮ್ಮ ಸಂಸ್ಥೆಗೆ ರೂ. ಒಂದು ಲಕ್ಷ ರೂಪಾಯಿಗಳ ಅನುದಾನ ಬಿಡುಗಡೆ ಮಾಡಿರುತ್ತಾರೆ. ಅದಕ್ಕಾಗಿ ಪಾಲಿಕೆಗೆ ತುಂಬು ಹೃದಯದ ಧನ್ಯವಾದಗಳು ನಿಮ್ಮ ಈ ಸಹಕಾರದಿಂದ ಈ ಸಂಸ್ಥೆಯು ಸಮಾಜದ ದುರ್ಬಲ ಹಾಗೂ ಬಡಜನರಿಗೆ ಹೆಚ್ಚಿನ ಸೇವೆ ಮಾಡಲು ಸಹಕಾರಿಯಾಗುತ್ತದೆ. ಆದ್ದರಿಂದ ತಮ್ಮ ಪರಿವರ್ತನಾ ಸೇವಾ ಸಂಸ್ಥೆಗೆ ಮಂಜೂರಾಗಿರುವ ಒಂದು ಲಕ್ಷ ಅನುದಾನದ ಹಣವನ್ನು ಬಿಡುಗಡೆ ಮಾಡಲು ಕೋರಿರುತ್ತಾರೆ.

ಪಾಲಿಕೆಯಲ್ಲಿ ಕೊಡುಗೆ ಮತ್ತು ಸಹಾಯಾನುದಾನ ಮಂಜೂರು ಮಾಡಲು ಅಳವಡಿಸಿಕೊಂಡಿರುವ ಮಾರ್ಗ ಸೂಚಿಗಳನ್ವಯ ಅಗತ್ಯ ದಾಖಲೆಗಳನ್ನು ಪಡೆದು ಸಂಘ–ಸಂಸ್ಥೆಗಳು ನಡೆಸುವ ಕ್ರೀಡೆಗಳಿಗೆ ಗರಿಷ್ಠ ರೂ.10 ಸಾವಿರ, ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ರೂ.5 ಸಾವಿರಗಳಿಂದ ರೂ.10 ಸಾವಿರ, ವೃದ್ದಾಶ್ರಮ, ಅನಾಥಾಶ್ರಮ ಇತ್ಯಾದಿಗಳಿಗೆ ರೂ.10 ಸಾವಿರಗಳಿಂದ ರೂ.25 ಸಾವಿರ, ಅಧ್ಯಯನ ಪೀಠಗಳಿಗೆ ರೂ.25 ಸಾವಿರಗಳಿಂದ 50 ಸಾವಿರ ರೂಪಾಯಿಗಳ ಅನುದಾನಕ್ಕೆ ಸೀಮಿತಗೊಳಿಸುವ ನಿರ್ದೇಶನಗಳಿರುತ್ತವೆ.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, 2011–12 ನೇ ಸಾಲಿನ ಆಯವ್ಯಯದ ಕೊಡುಗೆ ಮತ್ತು ಸಹಾಯಧನ ಲೆಕ್ಕಶೀರ್ಷಿಕೆಯಡಿ ಮೀಸಲಿರಿಸಲಾಗಿರುವ ರೂ. 1,275.00 ಲಕ್ಷಗಳ ಪೈಕಿ, ದಿನಾಂಕ 03–09–2011 ರಂದು ಪಾಲಿಕೆಯ ಆಯವ್ಯಯ ಸಭೆಯಲ್ಲಿ ತೀರ್ಮಾನವಾದ ನಿರ್ಣಯದ ವಿಷಯದ ಸಂಖ್ಯೆ 165/2011–12ರಂತೆ 185 ಸಂಘ/ಸಂಸ್ಥೆಗಳಿಗೆ ರೂ.1,158.50 ಲಕ್ಷಗಳನ್ನು ಅನುದಾನವನ್ನಾಗಿ ನಿಗಧಿಪಡಿಸಿ ಅನುಮೋದನೆ ನೀಡಲಾಗಿರುತ್ತದೆ. ಈ ಪೈಕಿ **ಕ್ರ.ಸಂ. (103) ರಲ್ಲಿ "ಪರಿವರ್ತನಾ ಸೇವಾ ಸಂಸ್ಥೆ (ರಿ)"** ರವರಿಗೆ **ರೂ. 1.00 ಲಕ್ಷಗಳ** ಅನುದಾನವನ್ನು ನಿಗಧಿಪಡಿಸಲಾಗಿರುತ್ತದೆ.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, ಸದ್ಯದ ಪಾಲಿಕೆಯ ಆರ್ಥಿಕ ಸ್ಥಿತಿ ಸುಸ್ಥಿತಿಯಲ್ಲಿಲ್ಲದೆ ಇರುವುದರಿಂದ ಸದರಿಯವರ ಮನವಿಯ ಸಂಬಂಧ ಸೂಕ್ತ ನಿರ್ಣಯಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಟಿಪ್ಪಣಿ.

***ನಿರ್ಣಯ :–*** ಅಪರ ಆಯುಕ್ತರು (ಯೋ) ರವರ ದಿನಾಂಕ : 21–05–2012ರ ಟಿಪ್ಪಣಿಯಲ್ಲಿನ ಪ್ರಸ್ತಾವನೆಯನ್ನು ಕೈ ಬಿಡುವುದೆಂದು ಸಮಿತಿಯು ತೀರ್ಮಾನಿಸಿತು.

## ***18]. ವಿಷಯದ ಸಂಖ್ಯೆ :–ತೆಆಸ್ಥಾಸ/65/2012–13***

ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ : 21–05–2012 ರಲ್ಲಿ ವಿವರಿಸಿರುವಂತೆ, 2011–12ನೇ ಸಾಲಿನ ಆಯವ್ಯಯ ತಯಾರಿಕೆಯಲ್ಲಿ ಈ ಕೆಳಕಂಡ ಅಧಿಕಾರಿ ಮತ್ತು ನೌಕರರು ಭಾಗಿಯಾಗಿದ್ದು ಮೂಲವೇತನದ ಶೇ.50% ರಷ್ಟು ಸಂಭಾವನೆ ನೀಡಲು ಅನುಮೋದನೆಗೆ ಟಿಪ್ಪಣಿ ಮಂಡಿಸಲಾಗಿದೆ.

| ಕ್ರ.ಸಂ | ಅಧಿಕಾರಿ/ನೌಕರರ ಹೆಸರು | ಹುದ್ದೆ | ಮೂಲ ವೇತನದ ಶೇ50% ರಷ್ಟು ಮೊತ್ತ |
|---|---|---|---|
| 01 | ಶ್ರೀ. ನಂದನ್ ಕುಮಾರ್ | ಮು.ಲೆ.ಅ | 11063–00 |
| 02 | ಶ್ರೀ. ರಾಮ್ ಪ್ರಸಾದ್ | ಮು.ಆ.ಅ | 12225–00 |
| 03 | ಶ್ರೀಮತಿ. ಸುಶೀಲಮ್ಮ | ಸ.ನಿ.(ಹ) | 8000–00 |
| 04 | ಶ್ರೀ. ಬಸವರಾಜು | ಲೆ.ಅ | 6500–00 |
| 05 | ಶ್ರೀ. ಜಿ.ಎಸ್.ವಾಸುದೇವಮೂರ್ತಿ | ಪ್ರ.ದ.ಸ | 3725–00 |
| 06 | ಶ್ರೀ. ಶ್ರೀನಿವಾಸ | (PIU) ಗುತ್ತಿಗೆ ಆಧಾರ | 5000–00 |
| 07 | ಶ್ರೀ. ನಾರಾಯಣ | ನಾ.ದ.ನೌ | 4200–00 |
| 08 | ಶ್ರೀ. ಕೋದಂಡರಾಮ | ನಾ.ದ.ನೌ | 3000–00 |
| 09 | ಶ್ರೀ. ಅಣ್ಣಪ್ಪ | ನಾ.ದ.ನೌ | 2450–00 |
| 10 | ಶ್ರೀ. ಧನಂಜಯ | ವಾ.ಚಾಲಕರು | 3063–00 |
| 11 | ಶ್ರೀ. ಕೊಂಡಯ್ಯ | ವಾ.ಚಾಲಕರು | 3638–00 |
| 12 | ಶ್ರೀ. ವೆಂಕಟೇಶ | ವಾ.ಚಲಕರು | 4025–00 |
| **ಒಟ್ಟು** | | | **66889–00** |

ಮೇಲ್ಕಂಡ ಅಂಶಗಳನ್ನು ತಮ್ಮ ಅವಗಾಹನೆಗೆ ಸಲ್ಲಿಸುತ್ತಾ ಒಟ್ಟು ರೂ.66889–00/– ಗಳನ್ನು 2011–12ನೇ ಸಾಲಿನ ಆಯವ್ಯಯ ತಯಾರಿಕೆ ಸಂಬಂಧ ಅಧಿಕಾರಿ/ನೌಕರರಿಗೆ ಸಂಭಾವನೆಯಾಗಿ ನೀಡಲು ಅನುಮೋದನೆಗಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ಟಿಪ್ಪಣಿ.

***<u>ನಿರ್ಣಯ :–</u>*** 2011–12ನೇ ಸಾಲಿನ ಆಯವ್ಯಯ ಸಿದ್ದತೆಯಲ್ಲಿ ವಿಶೇಷ ಆಯುಕ್ತರು (ಯೋಜನೆ) ರವರ ಟಿಪ್ಪಣಿಯಲ್ಲಿನ ಪ್ರಸ್ತಾವನೆ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ಚರ್ಚಿಸಲಾಗಿ ಪ್ರಸ್ತಾಪಿಸಿರುವ ಅಧಿಕಾರಿ/ನೌಕರರುಗಳ ಜೊತೆಗೆ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಸಿಬ್ಬಂದಿ, ಪೂಜ್ಯ ಮಹಾಪೌರರ ಕಛೇರಿಯ ಹಾಗೂ ಆಡಳಿತ ಪಕ್ಷದ ನಾಯಕರ ಕಛೇರಿಯ ಶೀಘ್ರಲಿಪಿಗಾರರು, ಮತ್ತು ಕೌನ್ಸಿಲ್ ಕಾರ್ಯಾಲಯದ ವ್ಯವಸ್ಥಾಪಕರು ಸಹ ಕಛೇರಿ ವೇಳೆಗಿಂತಲೂ ಹೆಚ್ಚಿನ ಸಮಯ ಹಾಗೂ ರಜಾ ದಿನಗಳಲ್ಲಿ ಕರ್ತವ್ಯ ನಿರ್ವಹಿಸಿರುವುದರಿಂದ ಈ ಕೆಳಕಂಡ ಅಧಿಕಾರಿ/ನೌಕರರುಗಳಿಗೂ ಒಂದು ತಿಂಗಳ ಮೂಲವೇತನವನ್ನು ನೀಡುವ ಮಾರ್ಪಾಡಿನೊಂದಿಗೆ ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ : 21.05.2012ರ ಟಿಪ್ಪಣಿಯನ್ನು ಒಪ್ಪಿದೆ.

| ಕ್ರ.ಸಂ | ಅಧಿಕಾರಿ/ನೌಕರರ ಹೆಸರು | ಹುದ್ದೆ | ಒಂದು ತಿಂಗಳ ಮೂಲ ವೇತನದ ಮೊತ್ತ |
|---|---|---|---|
| **ಲೆಕ್ಕ ಶಾಖೆ** | | | |
| 01 | ಶ್ರೀ. ನಂದನ್ ಕುಮಾರ್ | ಮು.ಲೆ.ಅ | 22126–00 |
| 02 | ಶ್ರೀ. ರಾಮ್ ಪ್ರಸಾದ್ | ಮು.ಆ.ಅ | 24450–00 |
| 03 | ಶ್ರೀಮತಿ. ಸುಶೀಲಮ್ಮ | ಸ.ನಿ.(ಹ) | 16000–00 |
| 04 | ಶ್ರೀ. ಬಸವರಾಜು | ಲೆ.ಅ | 13000–00 |
| 05 | ಶ್ರೀ. ಜಿ.ಎಸ್.ವಾಸುದೇವಮೂರ್ತಿ | ಪ್ರ.ದ.ಸ | 7450–00 |
| 06 | ಶ್ರೀ. ಶ್ರೀನಿವಾಸ | (PIU) ಗುತ್ತಿಗೆ ಆಧಾರ | 10000–00 |
| 07 | ಶ್ರೀ. ನಾರಾಯಣ | ನಾ.ದ.ನೌ | 8400–00 |
| 08 | ಶ್ರೀ. ಕೋದಂಡರಾಮ | ನಾ.ದ.ನೌ | 6000–00 |
| 09 | ಶ್ರೀ. ಅಣ್ಣಪ್ಪ | ನಾ.ದ.ನೌ | 4900–00 |
| 10 | ಶ್ರೀ. ಧನಂಜಯ | ವಾ.ಚಾಲಕರು | 6125–00 |

| | | | |
|---|---|---|---|
| 11 | ಶ್ರೀ. ಕೊಂಡಯ್ಯ | ವಾ.ಚಾಲಕರು | 7275–00 |
| 12 | ಶ್ರೀ. ವೆಂಕಟೇಶ | ವಾ.ಚಲಕರು | 9050–00 |
| 13 | ಶ್ರೀ. ಶಂಕರ್‌ರಾವ್ | ನಾ.ದ.ನೌ | 6125–00 |
| **ತೆರಿಗೆ ಆರ್ಥಿಕ ಸ್ಥಾಯಿ ಸಮಿತಿ** | | | |
| 01 | ಶ್ರೀ. ಮಂಜಯ್ಯ | ವ್ಯವಸ್ಥಾಪಕರು | 10500–00 |
| 02 | ಶ್ರೀ. ವಿ.ದಕ್ಷಿಣಾಮೂರ್ತಿ | ಪ್ರ.ದ.ಸ | 8000–00 |
| 03 | ಶ್ರೀ. ಕೆ.ಎಲ್ ಧನೋಜಿರಾವ್ | ಚಾಲಕರು | 8000–00 |
| 04 | ಶ್ರೀ. ರಂಗಪ್ಪ | ನಾ.ದ.ನೌ | 5800–00 |
| **ಆಡಳಿತ ಪಕ್ಷದ ನಾಯಕರ ಕಛೇರಿ** | | | |
| 01 | ಶ್ರೀ. ಬಿ.ಎಂ.ಶ್ರೀನಿವಾಸ್ | ಶೀಘ್ರಲಿಪಿಗಾರರು | 8200–00 |
| **ಪೂಜ್ಯ ಮಹಾಪೌರರ ಕಛೇರಿ** | | | |
| 01 | ಶ್ರೀ. ಎಂ. ಕೃಷ್ಣಮೂರ್ತಿ | ಶೀಘ್ರಲಿಪಿಗಾರರು | 10250–00 |
| **ಕೌನ್ಸಿಲ್ ಕಾರ್ಯಾಲಯ** | | | |
| 01 | ಶ್ರೀ. ವಿ.ಮಂಜುನಾಥ | ವ್ಯವಸ್ಥಾಪಕರು | 10250–00 |

## *19]. ವಿಷಯದ ಸಂಖ್ಯೆ :–ತೆಆಸ್ಥಾಸ/66/2012–13*

ವಿಶೇಷ ಆಯುಕ್ತರು (ಯೋಜನೆ) ರವರ ಟಿಪ್ಪಣಿ ದಿನಾಂಕ : 22–05–2012 ರಲ್ಲಿ ವಿವರಿಸಿರುವಂತೆ, ಕೋಅಲಿಶನ್ ಕರಪ್‌ಶನ್ ಎಂಬ ಸಂಸ್ಥೆಯು "ಸ್ವಾಗತ ಕಮಾನು" ಗಳ ನಿರ್ಮಾಣದ ಬಗ್ಗೆ ವ್ಯಕ್ತಪಡಿಸಿರುವ ಆಕ್ಷೇಪಣೆಗಳ ಬಗ್ಗೆ ಸೂಕ್ತ ನಿರ್ಧಾರ ಕೈಗೊಂಡು ಹಿಂಬರಹಕೊಡುವ ಸಲುವಾಗಿ ಕಾನೂನು ಕೋಶದ ಮುಖ್ಯಸ್ಥರ ಅಭಿಪ್ರಾಯವನ್ನು ಕೋರಲಾಗಿತ್ತು. ಕಾನೂನು ಕೋಶದ ಮುಖ್ಯಸ್ಥರು ತಮ್ಮ ವರದಿಯಲ್ಲಿ ಘನ ಸರ್ವೋಚ್ಚ ನ್ಯಾಯಾಲಯದಲ್ಲಿ ಸಲ್ಲಿಸಿರುವ ಸ್ಪೆಷಲ್ ಲೀವ್ ಅಪೀಲ್ (ಸಿವಿಲ್) ಸಂಖ್ಯೆ 8519/2006ರಲ್ಲಿ ದಿನಾಂಕ : 29–09–2009 ರಂದು ಈ ಕೆಳಕಂಡಂತೆ ಮಧ್ಯಂತರ ಆದೇಶವಿರುತ್ತದೆ ಎಂದು ತಿಳಿಸಿರುತ್ತಾರೆ.

> "As on interim measure we direct that henceforth no unauthorized construction shall be carried out or permitted in the name of Temple, Church, Mosque or Gurudwara etc., on Public streets, Public Parks other Public Places etc.,"

ಸದರಿ ವಿಷಯದಲ್ಲಿ ಹಣ ದುಂದು ವೆಚ್ಚದ ದೂರಿನ ಬಗ್ಗೆ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಪರಿಶೀಲನೆಗೆ ಸಲ್ಲಿಸಬಹುದಾಗಿರುತ್ತದೆಂದು ಅಭಿಪ್ರಾಯವನ್ನು ಸಲ್ಲಿಸಿರುತ್ತಾರೆ.

ಈ ಮಧ್ಯೆ ದಿನಾಂಕ : 08–05–2012ರಲ್ಲಿನ ಮಾನ್ಯ ಆಯುಕ್ತರವರಿಗೆ ಕಳುಹಿಸಿರುವ ಟಿಪ್ಪಣಿಯಲ್ಲಿ ಪೂಜ್ಯ ಮಹಾಪೌರರು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಸಂಪರ್ಕ ಕಲ್ಪಿಸುವ ಎಂಟು ದಿಕ್ಕುಗಳಲ್ಲಿನ ರಸ್ತೆಗಳಲ್ಲಿ ಕಲ್ಲಿನ ಶಾಶ್ವತ ಕಮಾನುಗಳನ್ನು ನಿರ್ಮಿಸಿ "***ಬೃಹತ್ ಬೆಂಗಳೂರು ಮಹನಗರ ಪಾಲಿಕೆ ವ್ಯಾಪ್ತಿಗೆ ಸ್ವಾಗತ***" ಎಂಬ ನಾಮಫಲಕಗಳನ್ನು ಅಳವಡಿಸಿರುವುದರಿಂದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಘನತೆ ಇನ್ನೂ ಹೆಚ್ಚಲಿದೆ ಎಂದು ತಿಳಿಸಿ ಈ ನಿಟ್ಟಿನಲ್ಲಿ ಸೂಕ್ತ ಪ್ರಸ್ತಾವನೆ ಮಂಡಿಸಲು ಕ್ರಮತೆಗೆದುಕೊಳ್ಳುವಂತೆ ಸೂಚಿಸಿದ್ದಾರೆ.

ಮಹಾನಗರಕ್ಕೆ ಸೇರುವ ರಾಷ್ಟ್ರೀಯ ಹೆದ್ದಾರಿಗಳು ಹೆಚ್ಚುತ್ತಿರುವ ವಾಹನ ದಟ್ಟಣೆಗೆ ಅನುಗುಣವಾಗಿ ಅಗಲೀಕರಣಗೊಳ್ಳುತ್ತಿರುವುದರಿಂದ ರಸ್ತೆಗಳ ಅಗಲಗಳು ನಿಶ್ಚಿತಗೊಳ್ಳಬೇಕಾಗಿರುತ್ತದೆ.

ಮೇಲ್ಕಂಡ ಎಲ್ಲಾಅಂಶಗಳನ್ನು ಪರಿಗಣಿಸಿ ಈ ವಿಷಯದ ಬಗ್ಗೆ ಸೂಕ್ತ ನಿರ್ಣಯಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ಟಿಪ್ಪಣಿ.

***ನಿರ್ಣಯ :–*** ಬೃಹತ್ ಬೆಂಗಳೂರು ಮಹಾನಗರಕ್ಕೆ ಸೇರುವ ರಾಷ್ಟ್ರೀಯ ಹೆದ್ದಾರಿಗಳ ರಸ್ತೆಗಳ ಅಗಲೀಕರಣದ ಬಗ್ಗೆ ಸಂಬಂಧಪಟ್ಟ ಇಲಾಖೆಗಳಿಂದ ಮಾಹಿತಿ ಪಡೆದು ರಸ್ತೆಗಳ ಅಗಲಗಳು ನಿಶ್ಚಿತಗೊಂಡ ನಂತರ ಶಾಶ್ವತ ಕಮಾನುಗಳನ್ನು ನಿರ್ಮಿಸುವ ಬಗ್ಗೆ ಕ್ರಮ ವಹಿಸುವುದೆಂದು ಸಮಿತಿಯು ತೀರ್ಮಾನಿಸಿತು.

## ***20]. ವಿಷಯದ ಸಂಖ್ಯೆ :–ತೆಆಸ್ಥಾಸ/67/2012–13***

ಅಪರ ಆಯುಕ್ತರು (ಯೋಜನೆ) ರವರ ಟಿಪ್ಪಣಿ ಸಂಖ್ಯೆ : ಜಆ(ಕ)ಪಿಎಸ್‌ಆರ್(4)144/11–12, ದಿನಾಂಕ : 26.05.2012 ರಲ್ಲಿ ವಿವರಿಸಿರುವಂತೆ ಶ್ರೀ ಈ ರಮೇಶ್ ಬಾಬು, ಪ್ರಧಾನ ಕಾರ್ಯದರ್ಶಿ, ನೇಕಾರರ ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಪ್ರತಿಷ್ಠಾನ (ರಿ), ನಂ.191/ಎ, 3ನೇ ಇ ಅಡ್ಡರಸ್ತೆ, 2ನೇ ಬ್ಲಾಕ್, 3ನೇ ಹಂತ, ಬಸವೇಶ್ವರನಗರ, ಬೆಂಗಳೂರು–79 ರವರು ಮನವಿ ಮತ್ತು ದಾಖಲೆಗಳನ್ನು ಸಲ್ಲಿಸಿ, ತಮ್ಮ ನೇಕಾರರ ಶೈಕ್ಷಣಿಕ ಅಭಿವೃದ್ಧಿಗೆ ಪೂರಕವಾಗುವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಾ ಬಂದಿದ್ದು, ಇದಕ್ಕೆ ಪೂರಕವಾಗಿ ಮತ್ತು ಬೆಂಬಲವಾಗಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು ತನ್ನ 2011–12ನೇ ಸಾಲಿನ ಆಯವ್ಯಯದಲ್ಲಿ ಆರ್ಥಿಕ ಸಹಾಯ ನೀಡುವಂತೆ ಮಾಡಿಕೊಂಡ ಮನವಿ ಹಿನ್ನೆಲೆಯಲ್ಲಿ ಬಿ.ಬಿ.ಎಂ.ಪಿ.ಯ ಸಂಘ–ಸಂಸ್ಥೆಗಳ ಅನುದಾನದಡಿಯಲ್ಲಿ ರೂ.5.00 ಲಕ್ಷಗಳ ಅನುದಾನವನ್ನು ಮಂಜೂರು ಮಾಡಿರುವುದಕ್ಕೆ ಪ್ರತಿಷ್ಠಾನವು ಕೃತಜ್ಞತೆಗಳನ್ನು ಸಲ್ಲಿಸುತ್ತಾ, ಪಾಲಿಕೆ ವತಿಯಿಂದ ರೂ.5.00 ಲಕ್ಷಗಳನ್ನು ಬಿಡುಗಡೆ ಮಾಡಬೇಕೆಂದು ಕೋರಿರುತ್ತಾರೆ.

ಪಾಲಿಕೆಯಲ್ಲಿ ಕೊಡುಗೆ ಮತ್ತು ಸಹಾಯಾನುದಾನ ಮಂಜೂರು ಮಾಡಲು ಅಳವಡಿಸಿಕೊಂಡಿರುವ ಮಾರ್ಗ ಸೂಚಿಗಳನ್ವಯ ಅಗತ್ಯ ದಾಖಲೆಗಳನ್ನು ಪಡೆದು ಸಂಘ–ಸಂಸ್ಥೆಗಳು ನಡೆಸುವ ಕ್ರೀಡೆಗಳಿಗೆ ಗರಿಷ್ಠ ರೂ.10 ಸಾವಿರ, ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ರೂ.5 ಸಾವಿರಗಳಿಂದ ರೂ.10 ಸಾವಿರ, ವೃದ್ಧಾಶ್ರಮ, ಅನಾಥಾಶ್ರಮ ಇತ್ಯಾದಿಗಳಿಗೆ ರೂ.10 ಸಾವಿರಗಳಿಂದ ರೂ.25 ಸಾವಿರ, ಅಧ್ಯಯನ ಪೀಠಗಳಿಗೆ ರೂ.25 ಸಾವಿರಗಳಿಂದ 50 ಸಾವಿರ ರೂಪಾಯಿಗಳ ಅನುದಾನಕ್ಕೆ ಸೀಮಿತಗೊಳಿಸುವ ನಿರ್ದೇಶನಗಳಿರುತ್ತವೆ.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, 2011–12 ನೇ ಸಾಲಿನ ಆಯವ್ಯಯದ ಕೊಡುಗೆ ಮತ್ತು ಸಹಾಯಧನ ಲೆಕ್ಕಶೀರ್ಷಿಕೆಯಡಿ ಮೀಸಲಿರಿಸಲಾಗಿರುವ ರೂ. 1,275.00 ಲಕ್ಷಗಳ ಪೈಕಿ, ದಿನಾಂಕ 03–09–2011 ರಂದು ಪಾಲಿಕೆಯ ಆಯವ್ಯಯ ಸಭೆಯಲ್ಲಿ ತೀರ್ಮಾನವಾದ ನಿರ್ಣಯದ ವಿಷಯದ ಸಂಖ್ಯೆ 165/2011–12ರಂತೆ 185 ಸಂಘ/ಸಂಸ್ಥೆಗಳಿಗೆ ರೂ.1,158.50 ಲಕ್ಷಗಳನ್ನು ಅನುದಾನವನ್ನಾಗಿ ನಿಗಧಿಪಡಿಸಿ ಅನುಮೋದನೆ ನೀಡಲಾಗಿರುತ್ತದೆ. ಈ ಪೈಕಿ **ಕ್ರ.ಸಂ. (31) ರಲ್ಲಿ "ನೇಕಾರರ ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಪ್ರತಿಷ್ಠಾನ (ರಿ)"** ರವರಿಗೆ **ರೂ. 2.00 ಲಕ್ಷಗಳ** (ಎರಡು ಲಕ್ಷಗಳು) ಅನುದಾನವನ್ನು ನಿಗಧಿಪಡಿಸಲಾಗಿರುತ್ತದೆ.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, ಸದ್ಯದ ಪಾಲಿಕೆಯ ಆರ್ಥಿಕ ಸ್ಥಿತಿ ಸುಸ್ಥಿತಿಯಲ್ಲಿಲ್ಲದೆ ಇರುವುದರಿಂದ ಪಸ್ರಸ್ತಾವಿತ ಸಂಸ್ಥೆಯ ಮನವಿಯ ಸಂಬಂಧ ಸೂಕ್ತ ನಿರ್ಣಯಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಟಿಪ್ಪಣಿ.

***ನಿರ್ಣಯ :–*** ತಾ॥. 26–05–2012ರ ಅಪರ ಆಯುಕ್ತರ ಟಿಪ್ಪಣಿಯಲ್ಲಿನ ಪ್ರಸ್ತಾವನೆಯನ್ನು ಕೈ ಬಿಡುವುದೆಂದು ಸಮಿತಿಯು ತೀರ್ಮಾನಿಸಿತು.

## ***21]. ವಿಷಯದ ಸಂಖ್ಯೆ :–ತೆಆಸ್ಥಾಸ/68/2012–13***

ಆಯುಕ್ತರ ಟಿಪ್ಪಣಿ ಸಂಖ್ಯೆ : ಮುಲೆಅ/ಪೂ.ಮ.ಪೌ ವೈದ್ಯಕೀಯ ನಿಧಿ/ಪೀಆರ್/1506/2012–13, ದಿನಾಂಕ : 28.05.2012 ರಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ 2012–13ನೇ ಸಾಲಿನ ಕರಡು ಆಯವ್ಯಯ ಅಂದಾಜು ಪತ್ರವನ್ನು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮತ್ತು ಪಾಲಿಕೆ ಸಭೆಯ ಅನುಮೋದನೆಗಾಗಿ ಮಂಡಿಸಲಾಗಿದೆ. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯು ದಿನಾಂಕ : 28.03.2012 ರಲ್ಲಿ ವಿಷಯ ಸಂಖ್ಯೆ : 16 (389)/2011–12ರಲ್ಲಿ ಜುಲೈ 2012ರ ಅಂತ್ಯದವರೆಗೆ ಆಯವ್ಯಯದ ಶೇ.30ರಷ್ಟು ಅನುದಾನವನ್ನು ಅವಶ್ಯಕ ವೆಚ್ಚಗಳಿಗೆ ಭರಿಸಲು ಅನುಮೋದನೆ ನೀಡಿದೆ.

ಉಲ್ಲೇಖ (2)ರಲ್ಲಿ ಪೂಜ್ಯ ಮಹಾಪೌರರ ಟಿಪ್ಪಣಿ ಮೇರೆಗೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ 2012–13ನೇ ಸಾಲಿನ ಕರಡು ಆಯವ್ಯಯ ಅಂದಾಜುಗಳಿಗೆ ಪಾಲಿಕೆ ಮತ್ತು ಸರ್ಕಾರದ ಅನುಮೋದನೆ ನಿರೀಕ್ಷಿಸಿ, 2012–13ನೇ ಸಾಲಿನ ಆಯವ್ಯಯದ "ಪೂಜ್ಯ ಮಹಾಪೌರರ ವಿವೇಚನಾಧೀನಕ್ಕೆ ಒಳಪಟ್ಟು ವೈದ್ಯಕೀಯ ಅನುದಾನಗಳು" ಪಿ0188, ಲೆಕ್ಕಶೀರ್ಷಿಕೆಗೆ ನಿಗಧಿಪಡಿಸುವ ಅನುದಾನದಲ್ಲಿ ಹೊಂದಾಣಿಕೆ ಮಾಡಿಕೊಳ್ಳುವ ಷರತ್ತಿಗೆ ಒಳಪಟ್ಟು ಪ್ರಸ್ತುತ ರೂ.50.00 (ರೂಪಾಯಿ ಐವತ್ತು ಲಕ್ಷ)ಗಳನ್ನು ಬಿಡುಗಡೆ ಮಾಡುವ ಬಗ್ಗೆ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ತೀರ್ಮಾನ ಕೋರಿ ಮಂಡಿಸಲಾದ ಟಿಪ್ಪಣಿ.

***ನಿರ್ಣಯ :–*** ದಿ॥. 28–05–2012ರ ಆಯುಕ್ತರ ಟಿಪ್ಪಣಿ ಒಪ್ಪಲಾಯಿತು

## *22]. ವಿಷಯದ ಸಂಖ್ಯೆ :–ತೆಆಸ್ಥಾಸ/69/2012–13*

ಆಯುಕ್ತರ ಟಿಪ್ಪಣಿ ಸಂಖ್ಯೆ : ಮುಲೆಅ/ಪಿಜಿ(5)/ಪಿಆರ್/16/12–13, ದಿನಾಂಕ : 02–06–2012 ರಲ್ಲಿ ವಿವರಿಸಿರುವಂತೆ, ಸರ್ಕಾರಿ ಆದೇಶ ಸಂಖ್ಯೆ: ಆಇ(ವಿಶೇಷ)100ಸಿಪಿಪಿ2012, ದಿನಾಂಕ : 17–05–2012ರ ಸರ್ಕಾರಿ ಆದೇಶದಲ್ಲಿ ರಾಜ್ಯ ಸರ್ಕಾರ ನಿವೃತ್ತಿ ವೇತನದಾರರಿಗೆ ಒಂದು ಕಂತು ಹೆಚ್ಚುವರಿ ತುಟ್ಟಿಭತ್ಯೆಯನ್ನು ಶೇ.7.25% ದರದಲ್ಲಿ ಮಂಜೂರು ಮಾಡಿರುತ್ತದೆ. ಅದರಂತೆ ಈಗಾಗಲೇ ಮಂಜೂರಾಗಿರುವ ಶೇ.69.5%ರ ಜೊತೆಗೆ 7.25% ಸೇರಿ ಶೇ.76.75% ದರದಲ್ಲಿ ತುಟ್ಟಿಭತ್ಯೆ ಪಾವತಿಸಬೇಕಾಗಿರುತ್ತದೆ. ಕರ್ನಾಟಕ ಸರ್ಕಾರಿ ಸೇವಾ ನಿಯಮಗಳ ಪ್ರಕಾರ ನಿವೃತ್ತಿ ವೇತನದ ಹೆಚ್ಚುವರಿ ತುಟ್ಟಿಭತ್ಯೆಯನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಅಳವಡಿಸಬೇಕಾಗಿರುತ್ತದೆ. ಸದರಿ ಸರ್ಕಾರಿ ಆದೇಶವನ್ನು ಪಾಲಿಕೆ ಪಿಂಚಣಿದಾರರಿಗೆ ಅಳವಡಿಸಿಕೊಂಡು ದಿನಾಂಕ : 01.01.2012 ರಿಂದ 31.03.2012 ರವರೆಗೆ ಶೇ.76.75% ಹೆಚ್ಚುವರಿ ತುಟ್ಟಿಭತ್ಯೆಯ ಬಾಕಿಯನ್ನು ಪಾವತಿಸಬೇಕಾಗಿರುತ್ತದೆ.

ಸದರಿ ಹೆಚ್ಚುವರಿ ರೂ.76,19,181–00ಗಳ ತುಟ್ಟಿಭತ್ಯೆಯ ವೆಚ್ಚವನ್ನು 2012–13ನೇ ಸಾಲಿನ ಆಯವ್ಯಯದ ಅಂದಾಜುಗಳ ಲೆಕ್ಕಶೀರ್ಷಿಕೆ 02–ಸಾಮಾನ್ಯ ಆಡಳಿತ/ಆಡಳಿತ ವೆಚ್ಚಗಳು/ನೌಕರರ ನಿವೃತ್ತಿ ಸೌಲಭ್ಯಗಳ ಅಡಿಯಲ್ಲಿ ಭರಿಸಲು ಲೇಖಾನುದಾನದಲ್ಲಿ ಅನುವು ಮಾಡಿಕೊಳ್ಳಲಾಗಿದೆ. ಈ ತುಟ್ಟಿಭತ್ಯೆ ಬಾಕಿ ಪಾವತಿ ಮಾಡುವ ಬಗ್ಗೆ ಸೂಕ್ತ ನಿರ್ಣಯಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ಟಿಪ್ಪಣಿ.

***ನಿರ್ಣಯ :–*** ತಾ॥. 02–06–2012ರ ಆಯುಕ್ತರ ಟಿಪ್ಪಣಿ ಒಪ್ಪಲಾಯಿತು.

## *23]. ವಿಷಯದ ಸಂಖ್ಯೆ :–ತೆಆಸ್ಥಾಸ/70/2012–13*

ಅಪರ ಆಯುಕ್ತರು (ಯೋಜನೆ) ರವರ ಟಿಪ್ಪಣಿ ಸಂಖ್ಯೆ : ಕೌ.ಕಾ/ಪಿಆರ್/49/2012–13, ದಿನಾಂಕ : 01–06–2012 ರಲ್ಲಿ ವಿವರಿಸಿರುವಂತೆ ಕಾರ್ಯದರ್ಶಿ, ಕನಕ ಎಜುಕೇಷನ್ ಟ್ರಸ್ಟ್ (ರಿ), ಸಿಎ ನಂ.6/ಎ, 14ನೇ ಮುಖ್ಯರಸ್ತೆ, 58ನೇ ಕ್ರಾಸ್, ಕುಮಾರಸ್ವಾಮಿ ಲೇಔಟ್, ಬೆಂಗಳೂರು–78 ರವರು ಮನವಿ ಮತ್ತು ದಾಖಲೆಗಳನ್ನು ಸಲ್ಲಿಸಿ, ತಮ್ಮ ಸಂಸ್ಥೆಯು ಆರ್ಥಿಕವಾಗಿ ಹಿಂದುಳಿದ ಮತ್ತು ಬಡ ಮಕ್ಕಳನ್ನು ಗುರುತಿಸಿ ಉಚಿತವಾಗಿ ಶಿಕ್ಷಣ, ಪುಸ್ತಕಗಳು, ಬಟ್ಟೆ ಹಾಗೂ ಶಿಕ್ಷಣಕ್ಕಾಗಿ ಬೇಕಾದ ಸಾಮಾಗ್ರಿಗಳನ್ನು ಒದಗಿಸಲಾಗುತ್ತಿದೆ. ಆದರೆ ಇತ್ತಿಚಿನ ದಿನಗಳಲ್ಲಿ ಹೆಚ್ಚು ಮಕ್ಕಳು ಶಿಕ್ಷಣ ಕಲಿಯುವುದಕ್ಕೋಸ್ಕರ ಹಾಜರಾಗುತ್ತಿರುವುದರಿಂದ ಮಕ್ಕಳಿಗೆ ಕುಳಿತುಕೊಳ್ಳಲು ಕಟ್ಟಡದ ಕೊರತೆಯುಂಟಾಗಿರುತ್ತದೆ. ಈ ಹಿನ್ನೆಲೆಯಲ್ಲಿ ಹೆಚ್ಚಿನ ಕಟ್ಟಡ ನಿರ್ಮಾಣ ಮಾಡಲು ಉದ್ದೇಶಿಸಿದ್ದು 2011–12ನೇ ಸಾಲಿನ ಆಯವ್ಯಯದಲ್ಲಿ ರೂ.10.00 ಲಕ್ಷಗಳನ್ನು ಮೀಸಲಿರಿಸಲಾಗಿರುತ್ತದೆ. ಸದರಿ ಅನುದಾನವನ್ನು ಬಿಡುಗಡೆ ಮಾಡಬೇಕೆಂದು ಕೋರಿರುತ್ತಾರೆ.

ಪಾಲಿಕೆಯಲ್ಲಿ ಕೊಡುಗೆ ಮತ್ತು ಸಹಾಯಾನುದಾನ ಮಂಜೂರು ಮಾಡಲು ಅಳವಡಿಸಿಕೊಂಡಿರುವ ಮಾರ್ಗ ಸೂಚಿಗಳನ್ವಯ ಅಗತ್ಯ ದಾಖಲೆಗಳನ್ನು ಪಡೆದು ಸಂಘ–ಸಂಸ್ಥೆಗಳು ನಡೆಸುವ ಕ್ರೀಡೆಗಳಿಗೆ ಗರಿಷ್ಠ ರೂ.10 ಸಾವಿರ, ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ರೂ.5 ಸಾವಿರಗಳಿಂದ ರೂ.10 ಸಾವಿರ, ವೃದ್ಧಾಶ್ರಮ, ಅನಾಥಾಶ್ರಮ ಇತ್ಯಾದಿಗಳಿಗೆ ರೂ.10 ಸಾವಿರಗಳಿಂದ ರೂ.25 ಸಾವಿರ, ಅಧ್ಯಯನ ಪೀಠಗಳಿಗೆ ರೂ.25 ಸಾವಿರಗಳಿಂದ 50 ಸಾವಿರ ರೂಪಾಯಿಗಳ ಅನುದಾನಕ್ಕೆ ಸೀಮಿತಗೊಳಿಸುವ ನಿರ್ದೇಶನಗಳಿರುತ್ತವೆ. ಅದರೆ, ಕಟ್ಟಡ ನಿರ್ಮಾಣಕ್ಕೆ ಸಹಾಯಧನ ನೀಡಲು ಮಾರ್ಗಸೂಚಿಗಳಲ್ಲಿ ಅವಕಾಶವಿರುವುದಿಲ್ಲ.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, 2011–12 ನೇ ಸಾಲಿನ ಆಯವ್ಯಯದ ಕೊಡುಗೆ ಮತ್ತು ಸಹಾಯಧನ ಲೆಕ್ಕಶೀರ್ಷಿಕೆಯಡಿ ರೂ. 1,275.00 ಲಕ್ಷಗಳು ಮೀಸಲಿಟ್ಟಿದೆ. ದಿನಾಂಕ 03–09–2011 ರಂದು ಪಾಲಿಕೆಯ ಆಯವ್ಯಯ ಸಭೆಯಲ್ಲಿ ತೀರ್ಮಾನವಾದ ನಿರ್ಣಯದ ವಿಷಯದ ಸಂಖ್ಯೆ 165/2011–12ರಂತೆ 185 ಸಂಘ/ಸಂಸ್ಥೆಗಳಿಗೆ ರೂ.1,158.50 ಲಕ್ಷಗಳನ್ನು ಅನುದಾನವನ್ನಾಗಿ ನಿಗಧಿಪಡಿಸಿ ಅನುಮೋದನೆ ನೀಡಲಾಗಿರುತ್ತದೆ. ಈ ಪೈಕಿ **ಕ್ರ.ಸಂ. (125) ರಲ್ಲಿ "ಕನಕ ಎಜುಕೇಷನ್ ಟ್ರಸ್ಟ್ (ರಿ)"** ರವರಿಗೆ **ರೂ. 10.00 ಲಕ್ಷಗಳ** ಅನುದಾನವನ್ನು ನಿಗಧಿಪಡಿಸಲಾಗಿರುತ್ತದೆ. ಆದರೆ, ಸದರಿ ಸಂಸ್ಥೆಯವರು ಕಟ್ಟಡ ನಿರ್ಮಾಣಕ್ಕೆ ಸಹಾಯಧನ ಕೋರಿರುತ್ತಾರೆ.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, ಸದ್ಯದ ಪಾಲಿಕೆಯ ಆರ್ಥಿಕ ಸ್ಥಿತಿ ಸುಸ್ಥಿತಿಯಲ್ಲಿಲ್ಲದೆ ಇರುವುದರಿಂದ ಪಸ್ರಸ್ತಾವಿತ ಸಂಸ್ಥೆಯ ಮನವಿಯ ಸಂಬಂಧ ಸೂಕ್ತ ನಿರ್ಣಯಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಟಿಪ್ಪಣಿ.

***<u>ನಿರ್ಣಯ :-</u>*** ಅಪರ ಆಯುಕ್ತರು (ಯೋ) ಇವರ ದಿನಾಂಕ : 01.06.2012ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವ ಸಂಸ್ಥೆಗೆ 2011-12ನೇ ಸಾಲಿನ ಆಯವ್ಯಯದಲ್ಲಿ ನಿಗಧಿಪಡಿಸಿರುವ ಸಹಾಯಧನ ರೂ.10.00 (ಹತ್ತು) ಲಕ್ಷಗಳನ್ನು ಬಿಡುಗಡೆ ಮಾಡುವುದೆಂದು ಸಮಿತಿಯು ತೀರ್ಮಾನಿಸಿತು.

## ***<u>24]. ವಿಷಯದ ಸಂಖ್ಯೆ :-ತೆಆಸ್ಥಾಸ/71/2012-13</u>***

ಅಪರ ಆಯುಕ್ತರು (ಯೋಜನೆ) ರವರ ಟಿಪ್ಪಣಿ ಸಂಖ್ಯೆ : ಕೌ.ಕಾ/ಪಿಆರ್/50/2012-13, ದಿನಾಂಕ ಃ 08-06-2012 ರಲ್ಲಿ ವಿವರಿಸಿರುವಂತೆ ಶ್ರೀ ಕೆ.ಎಸ್.ರಮೇಶ್, ಅಧ್ಯಕ್ಷರು, ಮ್ಯಾಜಿಕ್ ಅಕಾಡೆಮಿ, ಬೆಂಗಳೂರು ರವರು ದಿನಾಂಕ : 21.02.2012 ರಂದು ಮಾನ್ಯ ಆಯುಕ್ತರಿಗೆ ಅರ್ಜಿ ಸಲ್ಲಿಸಿ ತಮ್ಮ ಸಂಸ್ಥೆಯು ಅಂತರ್‍ರಾಷ್ಟ್ರೀಯ ಮಟ್ಟದ ದಿಗ್ರೇಟ್ ಇಂಡಿಯನ್ ಫೆಸ್ಟಿವಲ್ ಆಫ್ ಮ್ಯಾಜಿಕ್ (ದಿನಾಂಕ 11, 12 ಮತ್ತು 13 ಮೇ 2012) ಸಮಾರಂಭವನ್ನು ಹಮ್ಮಿಕೊಂಡಿದ್ದು, ಈ ಮೂರು ದಿನಗಳ ಸಮಾರಂಭದಲ್ಲಿ ಸಾವಿರಕ್ಕೂ ಹೆಚ್ಚು ಜಾದುಗಾರರು ಭಾರತದಿಂದ ಅಷ್ಟೇ ಅಲ್ಲದೆ ಬೇರೆ ಹೊರ ರಾಷ್ಟ್ರಗಳಿಂದಲೂ ತಮ್ಮ ಜಾದು ಪ್ರತಿಭೆಯನ್ನು ಹೊತ್ತು ತರಲಿದ್ದಾರೆ. ಅನೇಕ ರೀತಿಯ ಉಪನ್ಯಾಸ, ಸ್ಪರ್ಧೆಗಳು ಹಾಗೂ ಮನಮೋಹಕ ಪ್ರದರ್ಶನಗಳು ಇರುತ್ತವೆ. ಬೆಂಗಳೂರಿನ ಹಾಗೂ ನಮ್ಮ ರಾಜ್ಯದ ಸಾರ್ವಜನಿಕರಿಗೆ ಎಂದೂ ಮರೆರಲಾರದ ವಿಸ್ಮಯ ಆಗಲಿದೆ ಎಂದು ಹಾಗೂ ಈ ಸ್ಪರ್ಧೆಗೆ ಧನಸಹಾಯವನ್ನು ಕೋರಿರುತ್ತಾರೆ.

ಪಾಲಿಕೆಯಲ್ಲಿ ಕೊಡುಗೆ ಮತ್ತು ಸಹಾಯಾನುದಾನ ಮಂಜೂರು ಮಾಡಲು ಅಳವಡಿಸಿಕೊಂಡಿರುವ ಮಾರ್ಗಸೂಚಿಗಳನ್ವಯ ಅಗತ್ಯ ದಾಖಲೆಗಳನ್ನು ಪಡೆದು ಸಂಘ-ಸಂಸ್ಥೆಗಳು ನಡೆಸುವ ಕ್ರೀಡೆಗಳಿಗೆ ಗರಿಷ್ಠ ರೂ.10 ಸಾವಿರ, ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ರೂ.5 ಸಾವಿರಗಳಿಂದ ರೂ.10 ಸಾವಿರ, ವೃದ್ಧಾಶ್ರಮ, ಅನಾಥಾಶ್ರಮ ಇತ್ಯಾದಿಗಳಿಗೆ ರೂ.10 ಸಾವಿರಗಳಿಂದ ರೂ.25 ಸಾವಿರ, ಅಧ್ಯಯನ ಪೀಠಗಳಿಗೆ ರೂ.25 ಸಾವಿರಗಳಿಂದ 50 ಸಾವಿರ ರೂಪಾಯಿಗಳ ಅನುದಾನ ನೀಡುತ್ತಲಿದ್ದು, ಪಾಲಿಕೆಯಲ್ಲಿ ಲಭ್ಯವಿರುವ ಹಣಕ್ಕೆ ಸೀಮಿತಗೊಳಿಸಿ ನೀಡುವ ನಿರ್ದೇಶನಗಳಿವೆ.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, 2011-12 ನೇ ಸಾಲಿನ ಆಯವ್ಯಯದ ಕೊಡುಗೆ ಮತ್ತು ಸಹಾಯಧನ ಲೆಕ್ಕಶೀರ್ಷಿಕೆಯಡಿ ರೂ. 1,275.00 ಲಕ್ಷಗಳು ಮೀಸಲಿಟ್ಟಿದೆ. ದಿನಾಂಕ 03-09-2011 ರಂದು ಪಾಲಿಕೆಯ ಆಯವ್ಯಯ ಸಭೆಯಲ್ಲಿ ತೀರ್ಮಾನವಾದ ನಿರ್ಣಯದ ವಿಷಯದ ಸಂಖ್ಯೆ 165/2011-12ರಂತೆ 185 ಸಂಘ/ಸಂಸ್ಥೆಗಳಿಗೆ ರೂ.1,158.50 ಲಕ್ಷಗಳನ್ನು ಅನುದಾನವನ್ನಾಗಿ ನಿಗಧಿಪಡಿಸಿ ಅನುಮೋದನೆ ನೀಡಲಾಗಿರುತ್ತದೆ. ಆದರೆ ಮ್ಯಾಜಿಕ್ ಅಕಾಡೆಮಿ ರವರಿಗೆ ಬಡ್ಜೆಟ್ ಪುಸ್ತಕದಲ್ಲಿ ಅನುದಾನ ನಿಗಧಿಪಡಿಸಿರುವುದಿಲ್ಲ.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, ಸದರಿ ಮ್ಯಾಜಿಕ್ ಅಕಾಡೆಮಿಗೆ ರೂ.2.00 ಲಕ್ಷ ಅನದಾನ ನೀಡುವ ಬಗ್ಗೆ ಸೂಕ್ತ ನಿರ್ಣಯಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಟಿಪ್ಪಣಿ.

***<u>ನಿರ್ಣಯ :-</u>*** ಅಪರ ಆಯುಕ್ತರು (ಯೋ) ಇವರ ದಿನಾಂಕ : 08.06.2012ರ ಟಿಪ್ಪಣಿಯಲ್ಲಿನ ಪ್ರಸ್ತಾವನೆಯನ್ನು ಕೈ ಬಿಡುವುದೆಂದು ಸಮಿತಿಯು ತೀರ್ಮಾನಿಸಿತು.

## ***<u>25]. ವಿಷಯದ ಸಂಖ್ಯೆ :-ತೆಆಸ್ಥಾಸ/72/2012-13</u>***

ಅಪರ ಆಯುಕ್ತರು (ಯೋಜನೆ) ರವರ ಟಿಪ್ಪಣಿ ಸಂಖ್ಯೆ : ಕೌ.ಕಾ/ಪಿಆರ್/51/2012-13, ದಿನಾಂಕ ಃ 08-06-2012 ರಲ್ಲಿ ವಿವರಿಸಿರುವಂತೆ ಶ್ರೀ ಕೆ.ಪಿ.ಪುಟ್ಟಣ್ಣಚೆಟ್ಟಿ ಹಾಸ್ಟೆಲ್ ಹಳೆ ವಿದ್ಯಾರ್ಥಿಗಳ ಸಂಘ (ರಿ), ಪ್ಲಾಟ್ ನಂ 201, #.22 & 23, ಜಲಶಾಂಭವಿ ಕಾಂಪ್ಲೆಕ್ಸ್, 1ನೇ ಮುಖ್ಯರಸ್ತೆ, ಗಾಂಧಿನಗರ, ಬೆಂಗಳೂರು-560009 ರವರು ಮನವಿ ಸಲ್ಲಿಸಿ ಶ್ರೀ ದಿವಂಗತ ಬಿ. ಬಸವಲಿಂಗಪ್ಪ ಅವರ ಅಮೃತ ಹಸ್ತದಿಂದ ರಾಜ್ಯ ಯವನಿಕಾ ಉದ್ಘಾಟನೆ ಆಗಿ, 1991 ರಿಂದ ಸಂಗೀತ ತಬಲ ಮೃದಂಗ, ವೀಣೆ ಮುಂತಾದ ಸಾಂಸ್ಕೃತಿಕ ತರಗತಿಗಳನ್ನು ನಡೆಸುತ್ತಿದ್ದು, ಪ್ರತಿ ತರಗತಿಗೂ ಪ್ರತ್ಯೇಕ ಗುರುಗಳನ್ನು ನೇಮಿಸಿ, ಹಲವಾರು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದು, ಎಲ್ಲಾ ಕಾರ್ಯಕ್ರಮಗಳಿಗೆ ಪಾಲಿಕೆ ವತಿಯಿಂದ ವಿಶೇಷ ಘಟಕದ ಯೋಜನೆಯಡಿ ರೂ.10.00 ಲಕ್ಷಗಳನ್ನು ಮಂಜೂರು ಮಾಡಬೇಕೆಂದು ಕೋರಿರುತ್ತಾರೆ.

ಪಾಲಿಕೆಯಲ್ಲಿ ಕೊಡುಗೆ ಮತ್ತು ಸಹಾಯಾನುದಾನ ಮಂಜೂರು ಮಾಡಲು ಅಳವಡಿಸಿಕೊಂಡಿರುವ ಮಾರ್ಗಸೂಚಿಗಳನ್ವಯ ಅಗತ್ಯ ದಾಖಲೆಗಳನ್ನು ಪಡೆದು ಸಂಘ–ಸಂಸ್ಥೆಗಳು ನಡೆಸುವ ಕ್ರೀಡೆಗಳಿಗೆ ಗರಿಷ್ಠ ರೂ.10 ಸಾವಿರ, ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ರೂ.5 ಸಾವಿರಗಳಿಂದ ರೂ.10 ಸಾವಿರ, ವೃದ್ಧಾಶ್ರಮ, ಅನಾಥಾಶ್ರಮ ಇತ್ಯಾದಿಗಳಿಗೆ ರೂ.10 ಸಾವಿರಗಳಿಂದ ರೂ.25 ಸಾವಿರ, ಅಧ್ಯಯನ ಪೀಠಗಳಿಗೆ ರೂ.25 ಸಾವಿರಗಳಿಂದ 50 ಸಾವಿರ ರೂಪಾಯಿಗಳ ಅನುದಾನ ನೀಡುತ್ತಲಿದ್ದು, ಪಾಲಿಕೆಯಲ್ಲಿ ಲಭ್ಯವಿರುವ ಹಣಕ್ಕೆ ಸೀಮಿತಗೊಳಿಸಿ ನೀಡುವ ನಿರ್ದೇಶನಗಳಿವೆ.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸ್ಥಾಯಿ ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, 2011–12ನೇ ಸಾಲಿನ ಆಯವ್ಯಯದ ಕೊಡುಗೆ ಮತ್ತು ಸಹಾಯಧನ ಲೆಕ್ಕಶೀರ್ಷಿಕೆಯಡಿ ರೂ. 1,275.00 ಲಕ್ಷಗಳು ಮೀಸಲಿಟ್ಟಿದೆ. ದಿನಾಂಕ:03–09–2011ರಂದು ಪಾಲಿಕೆಯ ಆಯವ್ಯಯ ಸಭೆಯಲ್ಲಿ ತೀರ್ಮಾನವಾದ ನಿರ್ಣಯದ ವಿಷಯದ ಸಂಖ್ಯೆ 165/2011–12ರಂತೆ 185 ಸಂಘ/ಸಂಸ್ಥೆಗಳಿಗೆ ರೂ.1,158.50 ಲಕ್ಷಗಳನ್ನು ಅನುದಾನವನ್ನಾಗಿ ನಿಗಧಿಪಡಿಸಿ ಅನುಮೋದನೆ ನೀಡಲಾಗಿರುತ್ತದೆ. ಆದರೆ ಪುಟ್ಟಣ್ಣಚೆಟ್ಟಿ ಹಾಸ್ಟೆಲ್ ಹಳೆ ವಿದ್ಯಾರ್ಥಿಗಳ ಸಂಘ (ರಿ) ರವರಿಗೆ ಬಡ್ಜೆಟ್ ಪುಸ್ತಕದಲ್ಲಿ ಅನುದಾನ ನಿಗಧಿಪಡಿಸಿರುವುದಿಲ್ಲ.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, ಸದ್ಯದ ಪಾಲಿಕೆಯ ಆರ್ಥಿಕ ಸ್ಥಿತಿ ಸುಸ್ಥಿತಿಯಲ್ಲಿಲ್ಲದೆ ಇರುವುದರಿಂದ ಸದರಿಯವರ ಮನವಿಯ ಸಂಬಂಧ ಸೂಕ್ತ ನಿರ್ಣಯಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಟಿಪ್ಪಣಿ.

***ನಿರ್ಣಯ :–*** ಅಪರ ಆಯುಕ್ತರ ತಾ॥. 08.06.2012ರ ಟಿಪ್ಪಣಿಯಲ್ಲಿನ ಪ್ರಸ್ತಾವನೆಯನ್ನು ಕೈ ಬಿಡುವುದೆಂದು ಸಮಿತಿಯು ತೀರ್ಮಾನಿಸಿತು.

## *261. ವಿಷಯದ ಸಂಖ್ಯೆ :–ತೆಆಸ್ಥಾಸ/73/2012–13*

ವಿಶೇಷ ಆಯುಕ್ತರು (ಯೋಜನೆ) ರವರ ಟಿಪ್ಪಣಿ ಸಂಖ್ಯೆ : ಜಂಆ(ಪ)/ಪಿಆರ್/1874/2012–13, ದಿನಾಂಕ : 07–06–2012 ರಲ್ಲಿ ವಿವರಿಸಿರುವಂತೆ, ಮಹಾಲಕ್ಷ್ಮಿಪುರ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯ ವಾರ್ಡ್ ಸಂಖ್ಯೆ–43ರ ನಂದಿನಿ ಬಡಾವಣೆಯಲ್ಲಿ ಈಜು ಕೊಳವನ್ನು ಇತರೆ ಕಾಮಗಾರಿಗಳೊಂದಿಗೆ ನಿರ್ಮಿಸುವ ಯೋಜನೆಗೆ `. 1000.00 ಲಕ್ಷಗಳಿಗೆ ಅಂದಾಜು ಪಟ್ಟಿ ತಯಾರಿಸಲಾಗಿರುತ್ತದೆ. ಅಂದಾಜು ಪಟ್ಟಿಗಳ ವಿವರಗಳು ಈ ಕೆಳಕಂಡಂತೆ ಇರುತ್ತದೆ.

| | | |
|---|---|---|
| 1. | Construction lf Swimming Pool | Est. Cost. `. 190.00 Lakhs |
| 2. | Construction of Annexure Building (Parking, office Building, Library and Gyn etc.) | Est. Cost. `. 350.00 Lakhs |
| 3. | Gallary and Drain | Est. Cost. `. 201.00 Lakhs |
| 4. | Filtration equipment | Est. Cost. `. 67.00 Lakhs |
| 5. | Balancing Tank | Est. Cost. `. 4.00 Lakhs |
| 6. | Compound Wall with ACT sheet covering over compound | Est. Cost. `. 21.00 Lakhs |
| 7. | Filration machinery room | Est. Cost. `. 18.50 Lakhs |
| 8. | Three Nos Borewell with submersible pump set | Est. Cost. `. 8.90 Lakhs |
| 9. | Water Supply and Electrification | Est. Cost. `. 55.20 Lakhs |
| 10. | Consultancy Charges @ 2.50% | Est. Cost. `. 22.90 Lakhs |
| 11. | Landscape yard lighting children play area equipment grills, gate & misc | Est. Cost. `. 60.895Lakhs |
| | **Total Cost** | **`. 1000.00 Lakhs** |

ಸದರಿ ಕಾಮಗರಿಗಳಿಗೆ 2010–11ನೇ ಸಾಲಿನ ಆಯವ್ಯಯಯದಲ್ಲಿ `.300.00 ಲಕ್ಷಗಳನ್ನು ಒದಗಿಸಿದ್ದು, ಜಾಬ್ ನಂಬರ್ (043–11–000074) ನೀಡಲಾಗಿರುತ್ತದೆ ಹಾಗೂ ಸದರಿ ಕಾಮಗಾರಿಗಳಿಗೆ ಬಾಕಿ ಅನುದಾನವನ್ನು ಮುಂದಿನ ಆಯವ್ಯಯದಲ್ಲಿ ಒದಗಿಸಿಕೊಂಡು ಕಾಮಗಾರಿ ಟೆಂಡರ್ ಪ್ರಕ್ರಿಯೆಯನ್ನು ಪ್ರಾರಂಭಿಸಲು ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ದಿನಾಂಕ : 21–12–2011ರ ನಿರ್ಣಯವನ್ನು ಒಪ್ಪಿ ದಿನಾಂಕ : 28–03–2012ರ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನಿಸಲಾಗಿರುತ್ತದೆ.

ಒಟ್ಟು ಯೋಜನೆಯ ಮೊತ್ತ `. 10.00 ಕೋಟಿ ಆಗಿರುವುದರಿಂದ ಈ ಯೋಜನೆಯ ಅನುಷ್ಠಾನಕ್ಕೆ ಅಗತ್ಯವಿರುವ ಆಡಳಿತಾತ್ಮಕ ಅನುಮೋದನೆಯನ್ನು ಸಂಬಂಧಪಟ್ಟ ಸ್ಥಾಯಿ ಸಮಿತಿ, ಬೃಹತ್ ಬೆಂಗಳೂರು ಮಹನಗರ ಪಾಲಿಕೆಯ ಅನುಮೋದನೆ ಪಡೆದು ಸರ್ಕಾರಕ್ಕೆ ಸಲ್ಲಿಸಬೇಕಿರುತ್ತದೆ.

ಈ ಹಿನ್ನೆಲೆಯಲ್ಲಿ ವಾರ್ಡ್–43ರ ಪಾಲಿಕೆ ಸದಸ್ಯರು ಒಂದು ಕೋರಿಕೆಯನ್ನು ಸಲ್ಲಿಸಿ ಈಗಾಗಲೇ ಹಿಂದಿನ ಸಾಲಿನ ಆಯವ್ಯಯದಲ್ಲಿ `. 300.00 ಲಕ್ಷ ಅನುದಾನವನ್ನು ಕಾಯ್ದಿರಿಸದ್ದು ಟೆಂಡರ್ ಪ್ರಕ್ರಿಯೆಯನ್ನು ನಡೆಸಲು ಆಗಿಲ್ಲವಾದ್ದರಿಂದ ಹಾಗೂ ಸರ್ಕಾರದ ಅನುಮೋದನೆ ದೊರಕುವುದು ತಡವಾಗಿರುವುದರಿಂದ ಕೂಡಲೇ ಟೆಂಡರ್ ಪ್ರಕ್ರಿಯೆ ಪ್ರಾರಂಭಿಸಲು ಅನುಮತಿ ಕೋರಿರುತ್ತಾರೆ. ಆದ್ದರಿಂದ ಈ ಪ್ರಸ್ತಾವನೆಯನ್ನು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಿ ಈ ಕೆಳಕಂಡ ಅಂಶಗಳ ಬಗ್ಗೆ ಅನುಮೋದನೆ ಕೋರಿದೆ.

ಅ. ಒಟ್ಟು ಯೋಜನೆಯ ಮೊತ್ತ ಕೋಟಿಗೆ ಆಡಳಿತಾತ್ಮಕ ಅನುಮೋದನೆ ಪಡೆದುಕೊಳ್ಳಲು ಒಪ್ಪಿ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಕಳುಹಿಸಲು.

ಆ. ಯೋಜನೆಯ ಒಟ್ಟು ವೆಚ್ಚದ ಶೇ.40 ರಷ್ಟು ಅನುದಾನವನ್ನು 2012–13ನೇ ಸಾಲಿನ ಆಯವ್ಯಯದಲ್ಲಿ ಕಾಯ್ದಿರಿಸಲು ಹಾಗೂ ಉಳಿದ ಮೊತ್ತವನ್ನು ಮುಂಬರುವ ಆರ್ಥಿಕ ವರ್ಷಗಳಲ್ಲಿ ಒದಗಿಸಿಕೊಳ್ಳುವುದು.

ಇ. ಸರ್ಕಾರದ ಅನುಮೋದನೆ ನಿರೀಕ್ಷಿಸಿ 2012–13ನೇ ಸಾಲಿನ ಆಯವ್ಯಯದಲ್ಲಿ ಅನುದಾನಕ್ಕೆ ಸೀಮಿತಗೊಳಿಸಿ ಟೆಂಡರ್ ಪ್ರಕ್ರಿಯೆ ಪ್ರಾರಂಭಿಸುವುದು.

***ನಿರ್ಣಯ :–*** ವಿಶೇಷ ಆಯುಕ್ತರ ತಾ॥. 07–06–2012ರ ಟಿಪ್ಪಣಿಯನ್ನು ಸಮಿತಿಯು ಒಪ್ಪಿತು.

## *27]. ವಿಷಯದ ಸಂಖ್ಯೆ :–ತೆಆಸ್ಥಾಸ/74/2012–13*

ಆಯುಕ್ತರ ಟಿಪ್ಪಣಿ ಸಂಖ್ಯೆ : ಬಿ12(4)/ಪಿಆರ್/195ಎ/11–12, ದಿನಾಂಕ : 13–06–2012 ರಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ವಾಸಿಸುವ ಬಡ ಹಾಗೂ ಮಧ್ಯಮ ವರ್ಗದ ಆರ್ಥಿಕವಾಗಿ ಹಿಂದುಳಿದ ನಾಗರೀಕರು ವೈದ್ಯಕೀಯ ಚಿಕಿತ್ಸೆಗಾಗಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಪೂಜ್ಯ ಮಹಾಪೌರರ ವಿವೇಚನಾಧಿನಕ್ಕೆ ಒಳಪಟ್ಟ ವೈದ್ಯಕೀಯ ಅನುದಾನಗಳು ಲೆಕ್ಕ ಶೀರ್ಷಿಕೆ ಅಡಿಯಲ್ಲಿ ಸುಮಾರು ಐದು (5) ಕೋಟಿಗಳಷ್ಟು ಹಣವನ್ನು ಹಾಗೂ ಸದಸ್ಯರ ವಿವೇಚನಾಧಿನಕ್ಕೆ ಒಳಪಟ್ಟ ವೈದ್ಯಕೀಯ ಅನುದಾನಗಳು ಲೆಕ್ಕ ಶೀರ್ಷಿಕೆಯಡಿಯಲ್ಲಿ ರೂ.8 ಕೋಟಿಗಳಷ್ಟು ಆಯವ್ಯಯದಲ್ಲಿ ಮೀಸಲಿಡಲಾಗುತ್ತಿರುತ್ತದೆ.

ತತ್ಸಂಬಂಧ, ಪೂಜ್ಯ ಮಹಾಪೌರರ ವೈದ್ಯಕೀಯ ಪರಿಹಾರ ನಿಧಿಯಿಂದ ಹಾಗೂ ಪಾಲಿಕೆ ಸದಸ್ಯರ ವಿವೇಚನಾಧಿನಕ್ಕೆ ಒಳಪಟ್ಟ ವೈದ್ಯಕೀಯ ಅನುದಾನಗಳ ಅಡಿಯಲ್ಲಿ ಧನ ಸಹಾಯ ಕೋರಿ ಸಾರ್ವಜನಿಕರು ಅರ್ಜಿ ಸಲ್ಲಿಸುತ್ತಿದ್ದು, ಸಾರ್ವಜನಿಕರಿಗೆ / ಆರ್ಥಿಕವಾಗಿ ಹಿಂದುಳಿದವರಿಗೆ ಹಾಗೂ ಫಲಾನುಭವಿಗಳಿಗೆ ವೈದ್ಯಕೀಯ ಸಹಾಯ ಶೀಘ್ರವಾಗಿ ತಲುಪಲು ಅನುಕೂಲವಾಗುವಂತೆ ಉಲ್ಲೇಖಿತ–1, 2 ಮತ್ತು 3ರ ಆದೇಶಗಳಂತೆ ಕಾಲಕಾಲಕ್ಕೆ ಮಾರ್ಗಸೂಚಿಗಳನ್ನು ಅಳವಡಿಸಿಕೊಂಡು ಹಾಗೂ ತಿದ್ದುಪಡಿ ಆದೇಶಗಳನ್ನು ಜಾರಿಗೆ ತಂದು ವೈದ್ಯಕೀಯ ಧನ ಸಹಾಯವನ್ನು ಬಿಡುಗಡೆ ಮಾಡಲಾಗುತ್ತಿರುತ್ತದೆ.

ಆದರೆ, ಈ ರೀತಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವತಿಯಿಂದ ಮಂಜೂರು ಮಾಡುತ್ತಿರುವ ವೈದ್ಯಕೀಯ ಸಹಾಯ ಧನವು ದುರುಪಯೋಗವಾಗುತ್ತಿರುವುದಾಗಿ ಹಲವಾರು ಪತ್ರಿಕೆಗಳಲ್ಲಿ ಹಾಗೂ ಸಾರ್ವಜನಿಕರಿಂದ ದೂರುಗಳು ಬರುತ್ತಿರುತ್ತದೆ. ಈ ರೀತಿಯ ದುರುಪಯೋಗವನ್ನು ತಡೆಗಟ್ಟಲು ಹಾಗೂ ಸಾರ್ವಜನಿಕರಿಗೆ ಪಾಲಿಕೆಯ ವತಿಯಿಂದ ನೀಡುತ್ತಿರುವ ವೈದ್ಯಕೀಯ ಪರಿಹಾರ ಸಹಾಯ ಧನವು ಸಕಾಲದಲ್ಲಿ ಹಾಗೂ ಸೂಕ್ತ ರೀತಿಯಲ್ಲಿ ಸಹಾಯ ತಲುಪಲು ಕಟ್ಟುನಿಟ್ಟಾದ ಮಾರ್ಗಸೂಚಿಗಳನ್ನು ಅಳವಡಿಸುವುದು ಅವಶ್ಯಕವಿದೆ. ಈ ಹಿನ್ನಲೆಯಲ್ಲಿ, ಕೆಳಕಂಡ ಅಂಶಗಳನ್ನೊಳಗೊಂಡಂತೆ ಮಾರ್ಗಸೂಚಿಗಳನ್ನು ಅಳವಡಿಸಿಕೊಳ್ಳಲು ಉದ್ದೇಶಿಸಿದೆ.

**ವೈದ್ಯಕೀಯ ಧನ ಸಹಾಯ ಮಂಜೂರು ಮಾಡಲು ಅನುಸರಿಸಬೇಕಾದ ಮಾರ್ಗಸೂಚಿಗಳು**

1. ಅರ್ಜಿದಾರರು ತಾವು ಖಾಯಿಲೆಯಿಂದ ಬಳಲುತ್ತಿರುವ ಬಗ್ಗೆ ಸಂಬಂಧಪಟ್ಟ ಆಸ್ಪತ್ರೆಯ ತಜ್ಞ ವೈದ್ಯರಿಂದ ದೃಢೀಕರಣ ಪತ್ರ ನೀಡಬೇಕು. ಈ ಪತ್ರದಲ್ಲಿ ಖಾಯಿಲೆಯ ಸ್ವರೂಪ, ಸದರಿ ಖಾಯಿಲೆಯ ಚಿಕಿತ್ಸೆಗೆ ವೆಚ್ಚವಾಗುವ ಅಂದಾಜು ಮೊತ್ತ ಇತ್ಯಾದಿ ವಿವರಗಳನ್ನು ಕಡ್ಡಾಯವಾಗಿ ನಮೂದಿಸಿರಬೇಕು. ಅರ್ಜಿದಾರರು ಸದರಿ ವೈದ್ಯಕೀಯ ದೃಢೀಕರಣ ಪ್ರಮಾಣ ಪತ್ರವನ್ನು ವೈದ್ಯರಿಂದ ಪಡೆದು, ಪಾಲಿಕೆಯು ನಿಗಧಿಪಡಿಸಿರುವ ನಮೂನೆಯಲ್ಲಿ ಭರ್ತಿಮಾಡಿ ಭಾವಚಿತ್ರದೊಂದಿಗೆ ಸಲ್ಲಿಸಬೇಕು.
2. ಧನ ಸಹಾಯವನ್ನು ಆಯಾ ಚಾಲ್ತಿ ಆರ್ಥಿಕ ವರ್ಷದ ಚಿಕಿತ್ಸೆಗೆ ಮಾತ್ರ (ಏಪ್ರಿಲ್ ಯಿಂದ ಮಾರ್ಚ್ ವರೆಗೆ) ನೀಡುವುದು. ಹಳೆಯ ವರ್ಷಗಳ ಬಿಲ್ಲುಗಳನ್ನು ಸಲ್ಲಿಸಿ, ವೈದ್ಯಕೀಯ ಧನ ಸಹಾಯವನ್ನು ಕೋರುವ ಪ್ರಕರಣವನ್ನು ತಿರಸ್ಕರಿಸುವುದು.

3. ಅರ್ಜಿದಾರರು ಸಹಾಯ ಧನ ಕೋರಿ ಸಲ್ಲಿಸುವ ಅರ್ಜಿಗಳನ್ನು ವಲಯ ಆರೋಗ್ಯ ಅಧಿಕಾರಿಗಳಿಗೆ ಕಳುಹಿಸಿ, ಸದರಿಯವರು ಕರ್ನಾಟಕ ಮೆಡಿಕಲ್ ಅಟೆಂಡೆನ್ಸ್ ನಿಯಮಗಳನ್ವಯ ಪರಿಶೀಲಿಸಿ ಅರ್ಹ ಮೊತ್ತದ ಬಗ್ಗೆ ವರದಿಯೊಂದಿಗೆ ಪಾವತಿಸಬೇಕಾದ ಮೊತ್ತವನ್ನು ನಮೂದಿಸಿ ಶಿಫಾರಸ್ಸು ಮಾಡಬೇಕು.

4. ಪೂಜ್ಯ ಮಹಾಪೌರರ ಹಾಗೂ ಪಾಲಿಕೆ ಸದಸ್ಯರ ವಿವೇಚನಾಧಿನಕ್ಕೆ ಒಳಪಟ್ಟ ಅನುದಾನವನ್ನು ಈ ಕೆಳಕಂಡ ವೈದ್ಯಕೀಯ ಚಿಕಿತ್ಸೆಗಳಿಗೆ ಮಾತ್ರ ಹಣವನ್ನು ಬಿಡುಗಡೆ ಮಾಡಲು ಹಾಗೂ ಈ ವೈದ್ಯಕೀಯ ಚಿಕಿತ್ಸೆಗಳಿಗೆ ಕನಿಷ್ಠ ರೂ.25,000/- ಗಳಿಂದ ಗರಿಷ್ಠ ರೂ.40,000/- ಗಳನ್ನು ಬಿಡುಗಡೆ ಮಾಡಬಹುದಾಗಿರುತ್ತದೆ.

   (ಎ) ಹೃದಯ ಸಂಬಂಧಿ ಖಾಯಿಲೆಗಳೂ
   (ಬಿ) ಕ್ಯಾನ್ಸರ್
   (ಸಿ) ಕಿಡ್ನಿ ವೈಫಲ್ಯ
   (ಡಿ) ಮೆದುಳಿಗೆ ಸಂಬಂಧಿಸಿದ ಖಾಯಿಲೆ (ಬ್ರೈನ್ ಟ್ಯೂಮರ್)
   (ಇ) ಇತರೆ ಪ್ರಮುಖ ಶಸ್ತ್ರಚಿಕಿತ್ಸೆಗೊಳಪಡುವ ಖಾಯಿಲೆಗಳು.

5. ವೈದ್ಯಕೀಯ ಅನುದಾನದ ಅಡಿಯಲ್ಲಿ ಮೇಲ್ಕಂಡ ಚಿಕಿತ್ಸೆಗಳನ್ನು ಹೊರತು ಪಡಿಸಿ ಇನ್ನುಳಿದ ಯಾವುದೇ ಧನ ಸಹಾಯ ನೀಡುವ ಮುನ್ನ ಪೂಜ್ಯ ಮಹಾಪೌರರಿಗೆ ಮಾಹಿತಿಯೊಂದಿಗೆ ಕಡತ ಸಲ್ಲಿಸಿ, ಅವರ ಅನುಮೋದನೆ ಪಡೆಯುವುದು ಹಾಗೂ ಸದರಿ ಚಿಕಿತ್ಸೆಗಳಿಗೆ ಕನಿಷ್ಠ ರೂ.10,000/- ಗಳಿಂದ ಗರಿಷ್ಠ ರೂ.20,000/- ಗಳನ್ನು ಬಿಡುಗಡೆ ಮಾಡಬಹುದಾಗಿರುತ್ತದೆ. ಇದೇ ರೀತಿ ಸದಸ್ಯರ ವಿವೇಚನಾಧಿನಕ್ಕೆ ಒಳಪಟ್ಟ ಅನುದಾನ ನೀಡುವಾಗಲು ಸಹ ಇದನ್ನು ಅಳವಡಿಸಿಕೊಳ್ಳುವುದು.

6. ಅಪಘಾತ ಪ್ರಕರಣಗಳಲ್ಲಿ ಮತ್ತು ಇತರೆ ಗಂಭೀರ ಖಾಯಿಲೆ ಪ್ರಕರಣಗಳಲ್ಲಿ ಹೆಚ್ಚಿನ ಪರಿಹಾರವನ್ನು ನೀಡಲು ಲಭ್ಯವಿರುವ ಬಿಲ್ಲುಗಳ ಆಧಾರದ ಮೇಲೆ ಪೂಜ್ಯ ಮಹಾಪೌರರು / ಪಾಲಿಕೆ ಸದಸ್ಯರು ಕನಿಷ್ಠ ಹಾಗೂ ಗರಿಷ್ಠ ಮೊತ್ತವನ್ನು ನಿರ್ಧರಿಸಬಹುದಾಗಿದೆ.

7. ಅಪಘಾತ ಪ್ರಕರಣಗಳಲ್ಲಿ ಪೋಲಿಸ್ ವರದಿಯನ್ನು ಪಡೆದು ಅಪಘಾತದ ಗಂಭೀರತೆಯ ಬಗ್ಗೆ ಸಂಬಂಧಪಟ್ಟ ಪ್ರದೇಶದ ಪೋಲಿಸ್ ಸಬ್ ಇನ್ಸ್‌ಪೆಕ್ಟರ್ ರವರಿಂದ ವೈದ್ಯಕೀಯ ಮೊತ್ತ ನೀಡುವ ಬಗ್ಗೆ ಸೂಕ್ತ ಶಿಫಾರಸ್ಸು ಪಡೆದು ರೋಗಿಯ ಬ್ಯಾಂಕ್‌ನ ಖಾತೆಗೆ ಚೆಕ್ ಅನ್ನು ನೀಡಬಹುದಾಗಿದೆ.

8. ಪ್ರಸ್ತಾಪಿತ ವೈದ್ಯಕೀಯ ಅನುದಾನಗಳ ಅಡಿಯಲ್ಲಿ ಸಾಮಾನ್ಯ ಖಾಯಿಲೆಗಳಿಗೆ ಧನ ಸಹಾಯ ನೀಡುವ ಪ್ರಸ್ತಾವನೆಗಳನ್ನು ತಿರಸ್ಕರಿಸುವುದು. (ಜ್ವರ, ನೆಗಡಿ, ಕೆಮ್ಮು, ದಮ್ಮು, ಆಯುರ್ವೇದಿಕ್ ಮಸ್ಸಾಜ್ ಚಿಕಿತ್ಸೆ ಹಾಗೂ ಇನ್ನಿತರೆ ಸಾಮಾನ್ಯ ಖಾಯಿಲೆಗಳು).

9. ಆಸ್ಪತ್ರೆಗಳಲ್ಲಿ ಹಾಲಿ ಚಿಕಿತ್ಸೆ ಪಡೆಯುತ್ತಿರುವವರಿಗೆ ಅವರಿಂದ ಸೂಕ್ತ ದಾಖಲಾತಿಗಳನ್ನು ಪಡೆದು ನೇರವಾಗಿ ಆಸ್ಪತ್ರೆಯ ಹೆಸರಿಗೆ ಚೆಕ್ ಅನ್ನು ಪತ್ರ ಮುಖೇನ ಕಳುಹಿಸುವುದು. ಒಂದು ವೇಳೆ ಆಸ್ಪತ್ರೆಯಿಂದ ಚಿಕಿತ್ಸೆ ಪಡೆದು ಬಿಡುಗಡೆಯಾಗಿದ್ದಲ್ಲಿ, ಚಿಕಿತ್ಸೆಯನ್ನು ದೃಢಪಡಿಸಿಕೊಂಡ ಬಗ್ಗೆ ಅಗತ್ಯ ದಾಖಲೆಗಳನ್ನು ಪಡೆದು, ವಲಯ ಆರೋಗ್ಯ ವೈದ್ಯಾಧಿಕಾರಿಗಳ ಹಾಗೂ ಮುಖ್ಯ ಆರೋಗ್ಯ ಅಧಿಕಾರಿಗಳ ವರದಿ ಆಧಾರದ ಮೇಲೆ ಮೂಲ ಬಿಲ್ಲುಗಳನ್ನು ಪಡೆದು ರೋಗಿಯ ಅಥವಾ ಚಿಕಿತ್ಸೆ ಪಡೆದ ವಾರಸುದಾರರ ಬ್ಯಾಂಕ್‌ನ ಖಾತೆಯ ಸಂಖ್ಯೆಯ ಹೆಸರಿಗೆ ಚೆಕ್ ಅನ್ನು ನೀಡಬಹುದಾಗಿದೆ.

10. ವೈದ್ಯಕೀಯ ನಿಧಿಯಿಂದ ಮುಂಗಡ ಧನ ಸಹಾಯ ಕೋರಿ ಮನವಿ ಸಲ್ಲಿಸುವ ಪ್ರಕರಣಗಳಿಗೆ ಮಂಜೂರಾತಿಯ ಅರ್ಧ ಮೊತ್ತವನ್ನು ಮುಂಗಡವಾಗಿ ಆಸ್ಪತ್ರೆಯ ಹೆಸರಿಗೆ ಚೆಕ್ ಅನ್ನು ನೀಡಿ ನಂತರದಲ್ಲಿ ಆಸ್ಪತ್ರೆಯಿಂದ ನೀಡುವ ಮೂಲ ಬಿಲ್ಲುಗಳನ್ನು ಮತ್ತು ಡಿಸ್ಚಾರ್ಜ್ ವರದಿಯನ್ನು ಪಡೆದು ಉಳಿದ ಮೊತ್ತವನ್ನು ರೋಗಿಯು ಪಾವತಿಸಿದ್ದರೆ, ಆ ಹಣವನ್ನು ರೋಗಿಯ ಬ್ಯಾಂಕ್ ಖಾತೆಯ ಹೆಸರಿಗೆ ನೀಡುವುದು.

11. ವೈದ್ಯಕೀಯ ಪರಿಹಾರ ನಿಧಿಯಿಂದ ಸಹಾಯ ಧನ ಕೋರಿ ಮನವಿ ಸಲ್ಲಿಸುವ ಅರ್ಜಿದಾರರುಗಳು ಮೊದಲು ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆಯಲು ಪ್ರಾಶಸ್ತ್ಯ ನೀಡುವುದು, ಒಂದು ವೇಳೆ ಸರ್ಕಾರಿ ಸ್ವಾಮ್ಯದ ಆಸ್ಪತ್ರೆಗಳಿಲ್ಲದಿದ್ದಲ್ಲಿ ಮೇಲ್ಕಂಡ ಮಾರ್ಗಸೂಚಿಗಳನ್ವಯ ಕ್ರಮವಹಿಸುವುದು.

12. ಪ್ರಸ್ತುತ ಪಾಲಿಕೆಯ ವ್ಯಾಪ್ತಿಯಲ್ಲಿ ವಾಸಿಸುವ ಕಡು ಬಡವರು, ಆರ್ಥಿಕವಾಗಿ ಹಿಂದುಳಿದವರು ಹಾಗೂ ಅಲ್ಪ ಸಂಖ್ಯಾತ ವರ್ಗದವರಿಗೆ ಅನುಕೂಲವಾಗುವಂತೆ ಚಿಕಿತ್ಸೆಯನ್ನು ಪಡೆಯಲು ಹಲವಾರು ಆಸ್ಪತ್ರೆಗಳೊಂದಿಗೆ ಒಡಂಬಡಿಕೆ ಮಾಡಿಕೊಂಡು ಪಾಲಿಕೆಯ ವತಿಯಿಂದ ವಾಜಪೇಯಿ ಆರೋಗ್ಯ ಶ್ರೀ ಯೋಜನೆ ಅಡಿಯಲ್ಲಿ ಹೆಲ್ತ್ ಕಾರ್ಡ್‌ಗಳನ್ನು

ನೀಡಲಾಗುತ್ತಿರುತ್ತದೆ. ಈ ಹಿನ್ನಲೆಯಲ್ಲಿ, ಪೂಜ್ಯ ಮಹಾಪೌರರ ವೈದ್ಯಕೀಯ ಧನ ಸಹಾಯ ಕೋರಿ ಅರ್ಜಿ ಸಲ್ಲಿಸುವ ಫಲಾನುಭವಿಗಳು ವಾಜಪೇಯಿ ಆರೋಗ್ಯ ಶ್ರೀ ಯೋಜನೆ ಅಡಿಯಲ್ಲಿ ಹೆಲ್ತ್ ಕಾರ್ಡ್‌ಗಳನ್ನು ಪಡೆದಿದ್ದಲ್ಲಿ ಅಂತಹವರ ಅರ್ಜಿಗಳನ್ನು ತಿರಸ್ಕರಿಸಬಹುದು. ಇಲ್ಲದಿದ್ದಲ್ಲಿ, ವಾಜಪೇಯಿ ಆರೋಗ್ಯ ಶ್ರೀ ಯೋಜನೆ ಅಡಿಯಲ್ಲಿ ಹೆಲ್ತ್ ಕಾರ್ಡ್‌ಗಳನ್ನು ನೀಡದಿರುವ ಬಗ್ಗೆ ವಲಯ ಆರೋಗ್ಯ ವೈದ್ಯಾಧಿಕಾರಿಗಳು ದೃಢೀಕರಿಸಿ, ಫಲಾನುಭವಿಗಳಿಗೆ ವೈದ್ಯಕೀಯ ಧನ ಸಹಾಯ ನೀಡಲು ಮೇಲ್ಕಂಡ ಮಾರ್ಗಸೂಚಿಗಳನ್ವಯ ಕ್ರಮವಹಿಸುವುದು.

13. ಅರ್ಜಿದಾರರು ಸಲ್ಲಿಸುವ ಮನವಿಯನ್ನು ಪೂಜ್ಯ ಮಹಾಪೌರರ ಕಛೇರಿಯಿಂದ ಸಂಬಂಧಪಟ್ಟ ಆರೋಗ್ಯ ವೈದ್ಯಾಧಿಕಾರಿಗಳ ಕಛೇರಿಗೆ ರವಾನಿಸಿ, ಆಯಾ ವಲಯದ ಆರೋಗ್ಯ ವೈದ್ಯಾಧಿಕಾರಿಗಳು ಅರ್ಜಿದಾರರ ಖಾಯಿಲೆ ಬಗ್ಗೆ ಆಸ್ಪತ್ರೆ / ವಾಸಸ್ಥಳಕ್ಕೆ ಭೇಟಿ ನೀಡಿ ಖಾಯಿಲೆ, ಖಾಯಿಲೆಯ ಸ್ವರೂಪ ಹಾಗೂ ನೈಜತೆಯ ಬಗ್ಗೆ ವರದಿ ಪಡೆದುಕೊಂಡು ಸರ್ಕಾರದ ಕರ್ನಾಟಕ ಮೆಡಿಕಲ್ ಅಟೆಂಡೆನ್ಸ್ ನಿಯಮಗಳನ್ವಯ ಪರಿಶೀಲಿಸಿ ಅರ್ಹ ಮೊತ್ತದ ಬಗ್ಗೆ ವರದಿಯೊಂದಿಗೆ ಪಾವತಿಸಬೇಕಾದ ಮೊತ್ತವನ್ನು ಟಿಪ್ಪಣಿ ಹಾಳೆಯಲ್ಲಿ ಸಮರ್ಪಕವಾಗಿ ದೃಢೀಕರಿಸಿ, ಆರೋಗ್ಯ ಅಧಿಕಾರಿಗಳ ಶಿಫಾರಸ್ಸಿನೊಂದಿಗೆ ಮುಖ್ಯ ಆರೋಗ್ಯ ಅಧಿಕಾರಿಗಳ ಮುಖೇನ ಸಂಬಂಧಪಟ್ಟವರಿಗೆ ಮಂಡಿಸುವುದು. ಇದೇ ರೀತಿ ಪಾಲಿಕೆ ಸದಸ್ಯರ ವಿವೇಚನಾಧೀನಕ್ಕೆ ಒಳಪಟ್ಟ ವೈದ್ಯಕೀಯ ಅನುದಾನ ನೀಡುವ ಬಗ್ಗೆ ವಲಯ ಆಯುಕ್ತರುಗಳು ಕ್ರಮವಹಿಸುವುದು

14. ವೈದ್ಯಕೀಯ ವೆಚ್ಚಗಳಿಗೆ ಪಾಲಿಕೆ ನಿಧಿಯಿಂದ ಅನುದಾನವನ್ನು ನೀಡುವಾಗ ಆಯಾ ಲೆಕ್ಕ ಶೀರ್ಷಿಕೆಗೆ ಮಾತ್ರ ಸೀಮಿತಗೊಳಿಸಬೇಕು ಹಾಗೂ ಈ ವೆಚ್ಚಗಳನ್ನು ಮಾಡಿರುವುದಕ್ಕೆ ಮೂಲ ಬಿಲ್ ಇತ್ಯಾದಿಯನ್ನು ಪಡೆದುಕೊಂಡು ಖಾತ್ರಿಪಡಿಸಿಕೊಂಡು ಸಹಾಯ ನೀಡುವುದು ಹಾಗೂ ಲೆಕ್ಕ ಪರಿಶೋಧನೆಗಾಗಿ ಸಂಬಂಧಪಟ್ಟ ಕಡತವನ್ನು ರಕ್ಷಿಸಿಡುವುದು.

15. ಈ ಪರಿಹಾರವನ್ನು ಆರ್ಥಿಕವಾಗಿ ದುರ್ಬಲವಾದ ವ್ಯಕ್ತಿ / ಕುಟುಂಬಗಳಿಗೆ ಮಾತ್ರ ನೀಡಬಹುದ್ದಾಗಿದ್ದು, ಈ ಬಗ್ಗೆ ಬಿ.ಪಿ.ಎಲ್. ಕಾರ್ಡ್‌ದಾರರಿಗೆ ಅಥವಾ ರೂ.20,000/-ಗಳ ವಾರ್ಷಿಕ ಆದಾಯದ ಒಳಗೆ ಇರುವವರಿಗೆ ಮಾತ್ರ ನೀಡುವುದು ಹಾಗೂ ಅವರ ಆದಾಯ ಪ್ರಮಾಣ ಪತ್ರವನ್ನು ಪಡೆದು ನೀಡುವುದು.

16. ಪ್ರಸ್ತಾಪಿತ ಅನುದಾನದಡಿಯ ವೈದ್ಯಕೀಯ ಧನ ಸಹಾಯದ ಕಡತಗಳನ್ನು ಒಂದು (1) ವಾರದ ಒಳಗಾಗಿ ವಿಲೇವಾರಿ ಮಾಡಲು ಸಂಬಂಧಪಟ್ಟವರು ಕ್ರಮವಹಿಸುವುದು.

ಈ ಮೇಲಿನಂತೆ ಮಾರ್ಗಸೂಚಿಗಳನ್ನು ಪಾಲಿಕೆಯಲ್ಲಿ ಅಳವಡಿಸಿಕೊಳ್ಳುವ ಪ್ರಯುಕ್ತ, ಸೂಕ್ತ ನಿರ್ಣಯಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ಟಿಪ್ಪಣಿ.

**-ಮುಂದೂಡಿದೆ-**

## *28]. ವಿಷಯದ ಸಂಖ್ಯೆ :-ತೆಆಸ್ಥಾಸ/75/2012-13*

ಆಯುಕ್ತರ ಟಿಪ್ಪಣಿ ಸಂಖ್ಯೆ : ಮುಲೆಅ/ಪಿಜಿ(5)/ಪಿಆರ್/16/2012-13, ದಿನಾಂಕ : 15.06.2012 ರಲ್ಲಿ ವಿವರಿಸಿರುವಂತೆ, ಸರ್ಕಾರಿ ಆದೇಶ ಸಂಖ್ಯೆ : ಆಇ(ವಿಶೇಷ)81/ಪಿಇಎನ್/2012, ದಿ : 31.05.2012 ರಂತೆ ದಿನಾಂಕ : 01-04-2012 ರಿಂದ ರಾಜ್ಯ ಸಾರ್ಕಾರಿ ನಿವೃತ್ತಿ ವೇತನದಾರರಿಗೆ 6ನೇ ವೇತನ ಆಯೋಗದ ಶಿಫಾರಸ್ಸುಗಳನ್ವಯ ನಿವೃತ್ತ ಪಿಂಚಣಿ ಮತ್ತು ಕುಟುಂಬ ಪಿಂಚಣಿ ಪರಿಷ್ಕರಿಸಿದೆ. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಸದರಿ ಸರ್ಕಾರಿ ಆದೇಶವನ್ನು ಅಳವಡಿಸಿಕೊಂಡು ದಿನಾಂಕ : 01-04-2012 ರಿಂದ ಪರಿಷ್ಕೃತ ಮೊತ್ತವನ್ನು ಪಾವತಿಸಬೇಕಾಗಿರುತ್ತದೆ.

ಸದರಿ ಹೆಚ್ಚುವರಿ ರೂ.29,53,08,948.00ಗಳ ಪರಿಷ್ಕೃತ ಮೊತ್ತದ ವೆಚ್ಚವನ್ನು 2012-13ನೇ ಸಾಲಿನ ಆಯವ್ಯಯದ ಅಂದಾಜುಗಳ ಲೆಕ್ಕಶೀರ್ಷಿಕೆ 02-ಸಾಮಾನ್ಯ ಆಡಳಿತ/ಆಡಳಿತ ವೆಚ್ಚಗಳು/ನೌಕರರ ನಿವೃತ್ತಿ ಸೌಲಭ್ಯಗಳ ಅಡಿಯಲ್ಲಿ ಹೆಚ್ಚುವರಿ ಭರಿಸಬೇಕಾಗಿರುತ್ತದೆ ಮತ್ತು 01.04.2012 ರಿಂದ ಪರಿಷ್ಕೃತ ವ್ಯತ್ಯಾಸ ಮೊತ್ತ ಬಾಕಿ ಪಾವತಿ ಮಾಡುವ ಬಗ್ಗೆ ಸೂಕ್ತ ನಿರ್ಣಯಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ಟಿಪ್ಪಣಿ.

***ನಿರ್ಣಯ :-*** ತಾ॥. 15-06-2012ರ ಆಯುಕ್ತರ ಟಿಪ್ಪಣಿ ಒಪ್ಪಲಾಯಿತು.

## *29]. ವಿಷಯದ ಸಂಖ್ಯೆ :-ತೆಆಸ್ಥಾಸ/79/2012-13*

ಆಯುಕ್ತರ ಟಿಪ್ಪಣಿ ಸಂಖ್ಯೆ : ಬಿ12(ಸಿ1)/ಪಿಆರ್/06/05-06, ದಿನಾಂಕ : 15.06.2012 ರಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ದಿನಗೂಲಿ ಆಧಾರದ ಮೇಲೆ ನೇಮಕಗೊಂಡು ನಂತರ ಕ್ರಮಬದ್ಧಗೊಂಡಿರುವ

ಹಲವಾರು ನೌಕರರುಗಳು ಮನವಿ ಸಲ್ಲಿಸಿ, ದಿನಾಂಕ: 01–01–1990ಕ್ಕೆ ಮುಂಚೆ ದಿನಗೂಲಿ ಆಧಾರದ ಮೇಲೆ 10 ವರ್ಷಗಳ ಸೇವೆಯನ್ನು ಪೂರ್ಣಗೊಳಿಸಿರುವ ಪ್ರಯುಕ್ತ ಆ ದಿನಾಂಕಗಳಿಂದಲೇ ಜಾರಿಗೆ ಬರುವಂತೆ ಸೇವಾ ಸೌಲಭ್ಯಗಳನ್ನು ನೀಡಲು ಕೋರಿರುತ್ತಾರೆ. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ದಿನಾಂಕ: 01–07–1984ರೊಳಗೆ ದಿನಗೂಲಿ ಆಧಾರದ ಮೇಲೆ ನೇಮಕಗೊಂಡು ಕಾರ್ಯನಿರ್ವಹಿಸುತ್ತಿದ್ದ ನೌಕರರುಗಳನ್ನು ಸರ್ಕಾರದ ಆದೇಶಗಳಂತೆ ಕ್ರಮಬದ್ಧಗೊಳಿಸಲಾಗಿದ್ದು, ಸದರಿ ನೌಕರರುಗಳಿಗೆ ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 01 ಸೇಸ್ಥಾಅ 1999, ದಿನಾಂಕ: 24–03–1999 (ಭಾವುಟ–ಅ)ರಲ್ಲಿನ ಆದೇಶದಲ್ಲಿ "Government hereby direct that necessary action should be taken to regularise the services of the daily rated employees who have completed ten years of service as on 31st December 1989 immediately with effect from 1st January 1990" ಎಂದು ಆದೇಶಿಸಿದ್ದು, ಅದರಂತೆ, ವ್ಯತ್ಯಾಸದ ವೇತನ ಬಾಕಿಯನ್ನು ನೀಡಬೇಕಾಗಿರುತ್ತದೆ.

ಅದರಂತೆ, ಪಾಲಿಕೆಯ ಕೆಲವು ದಿನಗೂಲಿ ನೌಕರರುಗಳು ಸರ್ಕಾರದ ಆದೇಶದಂತೆ Time Gap ಅವದಿಗೆ ವ್ಯತ್ಯಾಸದ ವೇತನ ಬಾಕಿಯನ್ನು ನೀಡಲು ನ್ಯಾಯಾಲಯದ ಮೊರೆ ಹೋಗಿದ್ದು, ನ್ಯಾಯಾಲಯವು ಸರ್ಕಾರದ ದಿನಾಂಕ: 24–03–1999ರ ಆದೇಶದಂತೆ ವ್ಯತ್ಯಾಸದ ವೇತನ ಬಾಕಿಯನ್ನು ನೀಡಲು ಆದೇಶಿಸಿರುತ್ತದೆ (ಭಾವುಟ–ಆ). ನ್ಯಾಯಾಲಯದ ಆದೇಶದಂತೆ ಸದರಿ ದಿನಗೂಲಿ ನೌಕರರುಗಳಿಗೆ ವ್ಯತ್ಯಾಸದ ವೇತನ ಬಾಕಿಯನ್ನು ನೀಡಲಾಗಿರುತ್ತದೆ.(ಭಾವುಟ–ಇ) ಹಾಗೂ ಇನ್ನೂ ಅನೇಕ ದಿನಗೂಲಿ ನೌಕರರಿಗಳಿಗೂ ಸಹ ಸರ್ಕಾರದ ಆದೇಶದಂತೆ ವ್ಯತ್ಯಾಸದ ವೇತನ ಬಾಕಿಯನ್ನು ನೀಡಲಾಗಿರುತ್ತದೆ. (ಭಾವುಟ–ಈ) ದಿನಗೂಲಿ ನೌಕರರುಗಳಿಗೆ ಸರ್ಕಾರದ ಆದೇಶದಂತೆ ವ್ಯತ್ಯಾಸದ ವೇತನ ಬಾಕಿಯನ್ನು ನೀಡಲು ಕಾನೂನು ಕೋಶದ ಮುಖ್ಯಸ್ಥರವರ ಅಭಿಪ್ರಾಯ ಕೋರಲಾಗಿ ಕಾನೂನು ಕೋಶದ ಮುಖ್ಯಸ್ಥರು ಸರ್ಕಾರದ ದಿನಾಂಕ: 24–03–1999 ರಲ್ಲಿನ ಆದೇಶದಂತೆ ಹಾಲಿ ನೀಡಲಾಗಿರುವ ಆದೇಶಗಳನ್ನು ಮಾರ್ಪಡಿಸಿ ದಿನಾಂಕ: 01–01–1990 ರಿಂದ ಜಾರಿಗೆ ಬರುವಂತೆ ನ್ಯಾಯಾಲಯದ ಆದೇಶಗಳಿಗೆ ಒಳಪಡಿಸಿ ಸಕ್ರಮಗೊಳಿಸಲು ಅಭಿಪ್ರಾಯ ನೀಡಿರುತ್ತಾರೆ.

ಅದರಂತೆ, ಸದರಿ ದಿನಗೂಲಿ ನೌಕರರುಗಳಿಗೆ ಸರ್ಕಾರದ ಆದೇಶದಂತೆ, ವ್ಯತ್ಯಾಸದ ವೇತನ ಬಾಕಿಯನ್ನು ನೀಡಲು ಮುಖ್ಯ ಲೆಕ್ಕ ಪರಿಶೋಧಕರ ಅಭಿಪ್ರಾಯ ಕೋರಲಾಗಿ, ಮುಖ್ಯ ಲೆಕ್ಕ ಪರಿಶೋಧಕರು ಸರ್ಕಾರದ ದಿನಾಂಕ:24–03–1999ರ ಹಾಗೂ ದಿನಾಂಕ:21–08–1995ರಲ್ಲಿನ ನಿರ್ದೇಶನಗಳಂತೆ ಕ್ರಮ ತೆಗೆದುಕೊಳ್ಳಬಹುದೆಂದು ಅಭಿಪ್ರಾಯ ನೀಡಿರುತ್ತಾರೆ.

ಮೇಲ್ಕಂಡ ಅಂಶಗಳನ್ನು ಹಿನ್ನೆಲೆಯಲ್ಲಿ, ಪಾಲಿಕೆಯಲ್ಲಿ ದಿನಗೂಲಿ ಆಧಾರದ ಮೇಲೆ ಕಾರ್ಯನಿರ್ವಹಿಸಿ ನಂತರದಲ್ಲಿ ಕ್ರಮಬದ್ಧಗೊಂಡಿರುವ ಈ ಕೆಳಕಂಡ ನೌಕರರುಗಳಿಗೆ ಸರ್ಕಾರದ ದಿನಾಂಕ: 24–03–1999ರ ಆದೇಶದಂತೆ ಹಾಗೂ ಮುಖ್ಯ ಲೆಕ್ಕಪರಿಶೋಧಕರ ಅಭಿಪ್ರಾಯದಂತೆ ಮತ್ತು ಕಾನೂನು ಕೋಶದ ಮುಖ್ಯಸ್ಥರ ಅಭಿಪ್ರಾಯದ ಮೇರೆಗೆ ಅವರುಗಳ ಹೆಸರಿನ ಮುಂದೆ ಸೂಚಿಸಿರುವಂತೆ 10 ವರ್ಷಗಳು ಪೂರ್ಣಗೊಳಿಸಿದ ದಿನಾಂಕದಿಂದ ಅನ್ವಯವಾಗುವಂತೆ ಕ್ರಮಬದ್ಧಗೊಳಿಸಿ ಸೇವಾ ಸೌಲಭ್ಯಗಳನ್ನು ನೀಡುವ ಬಗ್ಗೆ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಅನುಮೋದನೆಗೆ ಮಂಡಿಸಿರುವ ಟಿಪ್ಪಣಿ.

| ಕ್ರ.ಸಂ | ನೌಕರರ ಹೆಸರು | ದಿನಗೂಲಿ ಆಧಾರದ ಮೇಲೆ ನೇಮಕಗೊಂಡ ದಿನಾಂಕ | 10 ವರ್ಷಗಳ ಪೂರ್ಣ ದಿನಾಂಕ | ಸಕ್ರಮಗೊಳಿಸಿದ ದಿನಾಂಕ | ಉಲ್ಲೇಖ–(1)ರ ಸರ್ಕಾರದ ಆದೇಶದಂತೆ ಸಕ್ರಮಗೊಳಿಸ ಬೇಕಾಗಿರುವ ದಿನಾಂಕ |
|---|---|---|---|---|---|
| 1. | ಜಿ.ಟಿ. ಗೋಪಾಲ್, ನಾಲ್ಕನೇ ದರ್ಜೆ ನೌಕರ | 22–04–1982 | 21–04–1992 | 16–01–1993 | 22–04–1992 |
| 2. | ಜಿ.ಕೆ. ಕೆಂಪೇಗೌಡ, ಕಾವಲುಗಾರ | 01–01–1981 | 31–12–1990 | 16–01–1993 | 01–01–1991 |
| 3. | ಬಿ. ರಾಮಯ್ಯ, ನಾಲ್ಕನೇ ದರ್ಜೆ ನೌಕರ | 01–01–1981 | 31–12–1990 | 16–01–1993 | 01–01–1991 |
| 4. | ಹಾಳೇಗೌಡ | 24–01–1978 | 23–01–1988 | 27–01–1993 | 01–01–1990 |
| 5. | ಹನುಮಂತ, ಕಾವಲುಗಾರ | 13–01–1978 | 12–01–1988 | 16–01–1993 | 01–01–1990 |
| 6. | ಕೆ. ರಾಮೇಗೌಡ, | 01–03–1979 | 25–02–1989 | 16–01–1993 | 01–01–1990 |
| 7. | ನಂಜಮ್ಮ, ನಾಲ್ಕನೇ ದರ್ಜೆ ನೌಕರ | 01–03–1981 | 28–02–1991 | 16–01–1993 | 01–03–1991 |
| 8. | ಮುನಿಯಮ್ಮ, ಪೌರಕಾರ್ಮಿಕಿ | 01–03–1980 | 28–02–1990 | 16–01–1993 | 01–03–1990 |

| | | | | | |
|---|---|---|---|---|---|
| 9. | ಎಂ. ಪುಟ್ಟೇಗೌಡ, ಹೆಲ್ಪರ್ | 01–01–1981 | 31–12–1990 | 16–01–1993 | 01–01–1991 |
| 10. | ಕೆ. ರಾಮು, ನಾಲ್ಕನೇ ದರ್ಜೆ ನೌಕರ | 01–01–1981 | 31–12–1990 | 16–01–1993 | 01–01–1991 |
| 11. | ಹೆಚ್.ಟಿ.ರಾಮಣ್ಣ, ಗ್ಯಾಂಗ್‌ಮೆನ್ | 01–06–1978 | 31–05–1988 | 16–01–1993 | 01–01–1990 |
| 12. | ಜಿ. ರಾಮನ್, ಗ್ಯಾಂಗ್‌ಮೆನ್ | 01–06–1978 | 31–05–1988 | 16–01–1993 | 01–01–1990 |
| 13. | ಗಂಗಹೊನ್ನಯ್ಯ, ಗ್ಯಾಂಗ್‌ಮೆನ್ | 01–06–1978 | 31–05–1988 | 16–01–1993 | 01–01–1990 |
| 14. | ಆಂಜಿನಪ್ಪ, ಗ್ಯಾಂಗ್‌ಮೆನ್ | 01–08–1979 | 31–07–1989 | 16–01–1993 | 01–01–1990 |
| 15. | ನಂಜಪ್ಪ, | 02–02–1978 | 01–02–1988 | 16–01–1993 | 01–01–1990 |
| 16. | ನಿಜಲಿಂಗಪ್ಪ, | 01–06–1978 | 31–05–1988 | 16–01–1993 | 01–01–1990 |
| 17. | ಗಂಗಯ್ಯ, | 24–12–1979 | 23–12–1989 | 16–01–1993 | 01–01–1990 |
| 18. | ಚಿಕ್ಕಣ್ಣ, | 02–02–1979 | 01–02–1989 | 16–01–1993 | 01–01–1990 |
| 19. | ಕಾಶೀನಾಥನ್ | 01–10–1981 | 30–09–1991 | 16–01–1993 | 01–10–1991 |
| 20. | ಬಿ.ಎಸ್. ರಾಜಣ್ಣ | 01–01–1979 | 31–12–1988 | 16–01–1993 | 01–01–1990 |
| 21. | ಧನೋಜಿರಾವ್ | 03–02–1981 | 02–02–1991 | 16–01–1993 | 03–02–1991 |
| 22. | ಬಿ.ಸಿ.ಪ್ರಭು | 01–02–1980 | 31–01–1990 | 16–01–1993 | 01–02–1990 |
| 23. | ಶೇಖ್ ಖಾದರ್ ಆಲಿ | 01–01–1981 | 31–12–1990 | 16–01–1993 | 01–01–1991 |
| 24. | ಕೃಷ್ಣಚಾರಿ | 01–05–1981 | 30–04–1991 | 16–01–1993 | 01–05–1991 |
| 25. | ಆರ್.ಅರಸಪ್ಪ | 10–06–1978 | 09–06–1988 | 16–01–1993 | 01–01–1990 |
| 26. | ಜೆ.ವೆಂಕಟಯ್ಯ | 02–11–1975 | 01–11–1985 | 16–01–1993 | 01–01–1990 |
| 27. | ಜಿ.ಶ್ರೀನಿವಾಸ್ | 19–11–1978 | 18–11–1988 | 16–01–1993 | 01–01–1990 |
| 28. | ಆರ್.ತಂಗವೇಲು | 01–12–1980 | 30–11–1990 | 16–01–1993 | 01–12–1990 |
| 29. | ದೊಡ್ಡನಾಗಪ್ಪ | 02–11–1977 | 01–11–1987 | 16–01–1993 | 01–01–1990 |
| 30. | ಕೆ.ನಂಜುಂಡಪ್ಪ | 01–01–1980 | 31–12–1989 | 16–01–1993 | 01–01–1990 |
| 31. | ಬಸವರಾಜು | 08–03–1976 | 07–03–1976 | 27–04–1993 | 01–01–1991 |
| 32. | ಬಿ.ಕೃಷ್ಣ | 10–06–1981 | 09–06–1991 | 16–01–1993 | 10–06–1991 |

***ನಿರ್ಣಯ :–*** ತಾ॥. 15–06–2012ರ ಆಯುಕ್ತರ ಟಿಪ್ಪಣಿಯನ್ನು ಸಮಿತಿಯು ಒಪ್ಪಿತು.

**ಮುನೀಂದ್ರ ಕುಮಾರ್.ಕೆ.ಎ**
**ಅಧ್ಯಕ್ಷರು**
**ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ**
**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ**